# ಅಖಿಲ ಭಾರತ ಪತ್ರಿಕೆ

ಸೆಪ್ಟಂಬರ್ 2016



## ರಕ್ಷಣೆ

ಬೆಲೆ : 15/–



*This is purity, to accept no other influence*
*but only the influence of the Divine.*

- The Mother

# ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

## ಪರಿವಿಡಿ

### "ರಕ್ಷಣೆ"

**ಅನು : ಶ್ರೀ ಪುರುಷೋತ್ತಮ ಗಲಗಲಿ**
ಅಸ್ವಸ್ಥತೆಯ ವಿರುದ್ಧ ರಕ್ಷಣೆ 5

**ಅನು : ಶ್ರೀ ವೀರೇಂದ್ರ ಸಿಂಪಿ**
ಮನೋವೈಜ್ಞಾನಿಕ ರಕ್ಷಣೆ **11**

**ಅನು : ಡಾ. ಕೆ.ಎಸ್. ಆಮೂರ**
ರಕ್ಷಣೆಗಾಗಿ ಆಧ್ಯಾತ್ಮಿಕ ಹಾಗೂ ರಹಸ್ಯ ಸಾಧನಗಳು 21
ದೈವೀ ರಕ್ಷಣೆ 38

**ವಾರ್ತಾಪತ್ರ** 54

**(All India Magazine) ಸಂಪಾದಕೀಯ:**

ಪೃಥ್ವಿಯ ಮೇಲಿನ ಜೀವನ ಒಂದು ಸಾಹಸ ಇದ್ದ ಹಾಗಿದೆ, ಮತ್ತು ಅದರದೇ ಮೋಹಕ ಗುಣ ಹಾಗೂ ಅಪಾಯಗಳ ಪಾಲನ್ನು ಹೊಂದಿದೆ. ಆದ್ದರಿಂದ ಈ 'ಆನಂದದಾಯಕ ಹಾಗೂ ಅಪಾಯಕಾರಕ ಜಗತ್ತಿ'ನಲ್ಲಿ ಭದ್ರತೆ ಮತ್ತು ಸುರಕ್ಷಿತತೆಗಳನ್ನು ಅರಸುವುದು ಬಹಳ ನ್ಯಾಯಯುತ ಆವಶ್ಯಕತೆಯಾಗಿದೆ. ಯಾವಾಗಲೂ ಇರುವ ಹಾಗೆ ಪ್ರಕೃತಿ ಈಗಾಗಲೆ ನಮಗೆ ಸುರಕ್ಷಿತತೆಯ ಕ್ರಮಗಳನ್ನು ಒದಗಿಸಿದೆ. ಹಾಗಿದ್ದಾಗ್ಯೂ ನಮ್ಮ ರಕ್ಷಣೆಗಾಗಿ ಒಳಸೇರಿಸಿದ ಸಾಧನಗಳನ್ನು ಕುರಿತು ನಾವು ಬಹಳಷ್ಟು ಸಲ ಅರಿವಿಲ್ಲದವರಾಗಿರುತ್ತೇವೆ. ಇದಕ್ಕೆ ಅಧಿಕವಾಗಿ ಕೆಲವು ಆಂತರಿಕ ಸಾಧನೆಗಳಿವೆ, ಅವುಗಳನ್ನು ವಿಧಿಬದ್ಧವಾಗಿ ಅಭಿವೃದ್ಧಿಪಡಿಸಬಹುದು, ಹಾಗೂ ಅವು ನಮ್ಮ ರಕ್ಷಣೆಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ವೃದ್ಧಿಪಡಿಸಬಲ್ಲವು. ಕೊನೆಯದಾಗಿ, ಪವಿತ್ರ ವೇದಿಕೆಯ ಮೇಲೆ ತನ್ನ ಇಡೀ ಜೀವನವನ್ನು ಅರ್ಪಣೆ ಮಾಡುವ ರೀತಿಯಲ್ಲಿ ಭಗವಂತನೆಡೆಗೆ ಹೊರಳಿಕೊಂಡ ಮನುಷ್ಯನಿಗೆ ಇನ್ನೂ ಹೆಚ್ಚಿನ ಹಾಗೂ ವಿಶೇಷ ರಕ್ಷಣೆಯಿರುತ್ತದೆ, ಅದು ಅವನ ಜೀವನ ಯಾತ್ರೆಗೆ ಸಹಾಯ ಮಾಡುತ್ತದೆ: ಅದೇನೇ ಇದ್ದರೂ ಸಾಮಾನ್ಯವಾಗಿ ಈ ಎಲ್ಲ ಸಾಧನಗಳು ಮಿತಿಗೊಳಪಟ್ಟು ಕಾರ್ಯಮಾಡುತ್ತವೆ ಮತ್ತು ಅಪರೂಪದ ನಿದರ್ಶನಗಳನ್ನು ಹೊರತು ಪಡಿಸಿ ಅವುಗಳ ಪೂರ್ಣ ಕೆಲವೊಂದು ಆಂತರಿಕ ಸ್ಥಿತಿಗಳ ಆವಶ್ಯಕತೆ ಇರುತ್ತದೆ. ಈ ಸಂಚಿಕೆಯಲ್ಲಿ ರಕ್ಷಣೆಯ ಈ ಸಂಕೀರ್ಣ ವಿಷಯ ಕುರಿತು ಶ್ರೀಮಾತೆಯವರು ಹಾಗೂ ಶ್ರೀ ಅರವಿಂದರು ಹರಿಸಿದ ಪ್ರಕಾಶವನ್ನು ನಾವು ಓದುಗರೊಡನೆ ಹಂಚಿಕೊಳ್ಳುತ್ತೇವೆ.

*



ದೈವೀ ಕೃಪೆ ಮತ್ತು ರಕ್ಷಣೆ ಇವು ಯಾವಾಗಲೂ ನಿಮ್ಮ ಜೊತೆಗಿವೆ. ಆಂತರಿಕ ಇಲ್ಲವೆ ಬಾಹ್ಯ ತೊಂದರೆ ಇದ್ದಾಗ, ಕಷ್ಟವಿದ್ದಾಗ ಅದು ನಿಮ್ಮನ್ನು ದಮನಕ್ಕೊಳಪಡಿಸುವುದಕ್ಕೆ ಅನುವು ಮಾಡಿಕೊಡುವುದು ಬೇಡ; ರಕ್ಷಣೆ ನೀಡುವ ದೈವೀ ಸಾಮರ್ಥ್ಯದಲ್ಲಿ ಆಶ್ರಯ ಪಡೆಯಿರಿ. ನೀವು ಅದನ್ನು ಯಾವಾಗಲೂ ನಂಬಿಕೆಯಿಂದ, ನಿಷ್ಕಾಪಟ್ಯದಿಂದ ಕೈಕೊಂಡರೆ ನಿಮ್ಮೊಳಗೆ ಏನೋ ಒಂದು ತೆರೆದುಕೊಳ್ಳುತ್ತಿರುವುದನ್ನು, ಮೇಲ್ಮೈಯಲ್ಲಿ ಎಲ್ಲ ಕ್ಷೋಭೆಗಳಿದ್ದಾಗಲೂ ಅದು ಯಾವಾಗಲೂ ಸ್ಥಿರತೆಯಿಂದ, ಶಾಂತ ರೀತಿಯಿಂದ ಉಳಿದುಕೊಳ್ಳುವುದನ್ನು ಕಂಡುಕೊಳ್ಳುತ್ತೀರಿ.

**CWM, 14/226** — **– ಶ್ರೀಮಾತೆ**

*

ದೈವೀ ಪ್ರಭು, ನೀನು ಪರಿಪೂರ್ಣ ಜ್ಞಾನ ಹಾಗೂ ಪ್ರಜ್ಞೆಯಾಗಿರುವಿ. ನಿನ್ನೊಡನೆ ಏಕತೆ ಪಡೆದವನು, ಆ ಏಕತೆ ಉಳಿದುಕೊಂಡಾಗ, ಸರ್ವಜ್ಞನಾಗಿ–ರುತ್ತಾನೆ. ಆದರೆ ಈ ಹಂತವನ್ನು ತಲುಪುವುದಕ್ಕಿಂತ ಮೊದಲು, ನಿನಗೆ ತನ್ನನ್ನು ತನ್ನ ಎಲ್ಲ ನಿಷ್ಕಾಪಟ್ಯದೊಂದಿಗೆ, ಎಲ್ಲ ಪ್ರಜ್ಞಾಪೂರ್ಣ ಸಂಕಲ್ಪದೊಂದಿಗೆ ಕೊಟ್ಟುಕೊಂಡವನು, ಪ್ರಕಟಣೆಯಲ್ಲಿ ಹಾಗೂ ತನ್ನಲ್ಲಿ, ತನ್ನ ಪ್ರಭಾವವಿರುವ ಎಲ್ಲ ಕ್ಷೇತ್ರದಲ್ಲಿ ಪ್ರೇಮ ಕುರಿತು ಇರುವ ನಿನ್ನ ದೈವೀ ನಿಯಮ ಜಯ ಪಡೆಯಲು ಪ್ರತಿಯೊಂದು ಪ್ರಯತ್ನವನ್ನು ಕೈಕೊಳ್ಳಬೇಕೆಂದು ನಿರ್ಧರಿಸಿದವನು ತನ್ನ ಜೀವನದಲ್ಲಿ ಎಲ್ಲ ವಿಷಯಗಳು ಬದಲಾಗುತ್ತಿರುವುದನ್ನು ಕಂಡುಕೊಳ್ಳುತ್ತಾನೆ ಮತ್ತು ಎಲ್ಲ ಪರಿಸ್ಥಿತಿಗಳು ನಿನ್ನ ನಿಯಮವನ್ನು ಅಭಿವ್ಯಕ್ತಗೊಳಿಸಲು ಪ್ರಾರಂಭಿಸಿರುವುದನ್ನು ಮತ್ತು ತನ್ನ ಮುಡುಪಾಗಿರಿಸಿಕೊಳ್ಳುವಿಕೆಗೆ ಸಹಾಯ ಮಾಡುತ್ತಿರುವುದನ್ನು ನೋಡುತ್ತಾನೆ, ಅವನಿಗೆ ಅದು ಅತ್ಯಂತ ಒಳ್ಳೆಯದು, ಅತ್ಯಂತ ಒಳ್ಳೆಯದು ಯಾವಾಗಲೂ ಸಂಭವಿಸುತ್ತದೆ, ಮತ್ತು ಅವನ ಬುದ್ಧಿಮತ್ತೆಯಲ್ಲಿ ಇನ್ನೂ ಒಂದಿಷ್ಟು ಮಬ್ಬುತನ, ಒಂದಿಷ್ಟು ಅಜ್ಞಾನದಿಂದ ಕೂಡಿದ ಆಸೆ ಇದ್ದರೆ, ಅವು ಅದರ ಬಗ್ಗೆ ಅವನು ಕೂಡಲೆ ಅರಿವಿಗೆ ತಂದುಕೊಳ್ಳುವುದನ್ನು ಕೆಲವೊಮ್ಮೆ ತಡೆಹಿಡಿಯುತ್ತಿದ್ದರೆ, ಅವನನ್ನು ಅವನಿಂದಲೇ ರಕ್ಷಿಸುವ ಉಪಕಾರೀ ಸಾಮರ್ಥ್ಯವೊಂದು ಇರುವುದನ್ನು ಅವನು ಇಂದೋ ಮುಂದೋ ಗುರುತಿಸುತ್ತಾನೆ ಮತ್ತು ಆ ಸಾಮರ್ಥ್ಯ ಅವನ ಅರಳಿಕೊಳ್ಳುವಿಕೆಗೆ, ರೂಪ ಪರಿವರ್ತನೆಗೆ, ಸಮಗ್ರ ಬದಲಾವಣೆಗೆ, ಉಪಯೋಗಕ್ಕೆ ಅತ್ಯಂತ ಅನುಕೂಲಕರ ಸ್ಥಿತಿಗಳನ್ನು ಭದ್ರಪಡಿಸುತ್ತದೆ. ಇದರ ಬಗ್ಗೆ ಮನುಷ್ಯ ಅರಿವುಳ್ಳವನಾದ ಕೂಡಲೆ, ಮನವರಿಕೆ ಮಾಡಿಕೊಂಡರೆ ಅವನು ಇನ್ನು ಮುಂದೆ ಪರಿಸ್ಥಿತಿಗಳನ್ನು ಕುರಿತು ಇಲ್ಲವೆ ಘಟನೆಗಳು ಹೊಂದಬಹುದಾದ ತಿರುವನ್ನು ಕುರಿತು ಚಿಂತೆ ಮಾಡಬೇಕಾಗಿರುವುದಿಲ್ಲ. ಯಾವುದು ಅತ್ಯಂತ ಒಳ್ಳೆಯದೆಂದು ಯೋಚಿಸುತ್ತಾನೋ, ಯಾವುದರಿಂದ ಒಳ್ಳೆಯದು ಬರುವುದು ನಿಶ್ಚಿತ ಎಂದು ಮನವರಿಕೆ ಮಾಡಿಕೊಂಡಿರುತ್ತಾನೋ ಅಂತಹದನ್ನು ಪ್ರತಿಯೊಂದು ಕ್ಷಣ ಕೈಕೊಳ್ಳುತ್ತಾನೆ, ಅದರ ಪರಿಣಾಮ ನಮ್ಮ ಸೀಮಿತ ತರ್ಕದಿಂದ ನಾವು ನಿರೀಕ್ಷಿಸಿದ್ದಾಗಿರದೆ ಇರಬಹುದು.

ಆ ಕಾರಣದಿಂದಾಗಿ ದೈವೀ ಪ್ರಭು, ನಮ್ಮ ಹೃದಯ ಹಗುರಾಗಿದೆ, ನಮ್ಮ ಯೋಚನೆ ವಿಶ್ರಾಂತ ಸ್ಥಿತಿಯಲ್ಲಿದೆ. ಆ ಕಾರಣದಿಂದ ನಾವು ನಿನ್ನಡೆಗೆ ಗಾಢ

ನಂಬಿಕೆಯೊಂದಿಗೆ ಹೊರಳುತ್ತೇವೆ ಮತ್ತು ಶಾಂತ ರೀತಿಯಿಂದ: 'ನಿನ್ನ ಸಂಕಲ್ಪ ಈಡೇರುವಂತಾಗಲಿ, ಅದರಲ್ಲಿ ನಿಜವಾದ ಸಾಮರಸ್ಯವನ್ನು ಸಿದ್ಧಿಸಿಕೊಳ್ಳ–ಲಾಗುತ್ತದೆ' ಎಂದು ಹೇಳುತ್ತೇವೆ.

*

## ಅಸ್ವಸ್ಥತೆಗಳ ವಿರುದ್ಧ ರಕ್ಷಣೆ

### ಭೌತಿಕ ದೇಹ ರಕ್ಷಣೆ ಒದಗಿಸುತ್ತದೆ

ಮಾನವ ಸತ್ತೆ ಭೌತಿಕ ದೇಹದಲ್ಲಿ ನಿರಾತಂಕವಾಗಿರುತ್ತದೆ, ದೇಹ ಆ ಸತ್ತೆಗೆ ರಕ್ಷಣೆ ಒದಗಿಸುತ್ತದೆ. ತಮ್ಮ ದೇಹಗಳ ಬಗ್ಗೆ ಪೂರ್ತಿ ಜುಗುಪ್ಸೆ ಹೊಂದಿದ ಜನರಿರುತ್ತಾರೆ ಮತ್ತು ವಿಷಯಗಳು ಮೃತ್ಯುವಿನ ನಂತರ ಹೆಚ್ಚು ಒಳ್ಳೆಯ–ವಾಗುತ್ತವೆ ಮತ್ತು ಸುಲಭವಾಗುತ್ತವೆ ಎಂದು ಅವರು ಯೋಚಿಸುತ್ತಾರೆ. ಆದರೆ ವಾಸ್ತವದಲ್ಲಿ ನಿಮ್ಮ ದೇಹ ನಿಮ್ಮ ಕೋಟೆಯಾಗಿರುತ್ತದೆ, ಆಶ್ರಯವಾಗಿರುತ್ತದೆ. ದೇಹದಲ್ಲಿ ನೀವು ವಾಸಿಸುತ್ತಿರುವಾಗ ವಿರೋಧೀ ಜಗತ್ತಿನ ಶಕ್ತಿಗಳು ನಿಮ್ಮ ಮೇಲೆ ಯಾವುದೇ ಬಗೆಯ ನೇರ ಹಿಡಿತವನ್ನು ಸಾಧಿಸುವುದು ಕಠಿಣವಾಗಿರುತ್ತದೆಂದು ಕಂಡುಕೊಳ್ಳುತ್ತವೆ. ಸ್ವಪ್ನ ಪಿಶಾಚಿಗಳೆಂದರೇನು? ಇವು ಪ್ರಾಣಿಕ ಲೋಕದೊಳಗೆ ನುಗ್ಗಿ ಹೋಗುವಿಕೆಗಳಾಗಿರುತ್ತವೆ. ಸ್ವಪ್ನ ಪಿಶಾಚಿಯೊಂದರ ಹಿಡಿತದಲ್ಲಿ ನೀವು ಸಿಕ್ಕಿ ಹಾಕಿಕೊಂಡಾಗ ಮೊದಲು ಕೈಕೊಳ್ಳುವ ಕಾರ್ಯವೇನು? ನಿಮ್ಮ ದೇಹದೊಳಗೆ ರಭಸದಿಂದ ಮರಳಿ ಬರುತ್ತೀರಿ ಮತ್ತು ಸಾಮಾನ್ಯ ಭೌತಿಕ ಪ್ರಜ್ಞೆಗೆ ಬರುವಂತೆ ನಿಮ್ಮನ್ನು ಅಲುಗಾಡಿಸುತ್ತೀರಿ. ಆದರೆ ಪ್ರಾಣಿಕ ಶಕ್ತಿಗಳ ಲೋಕದಲ್ಲಿ ನೀವು ಪರಕೀಯರಾಗಿರುತ್ತೀರಿ, ಆ ಲೋಕ ನಕ್ಷೆಯಲ್ಲಿ ಕಾಣಿಸದ ಸಾಗರದ ಹಾಗಿರುತ್ತದೆ, ಅದರಲ್ಲಿ ನಿಮಗೆ ದಿಕ್ಸೂಚಿ ಇರುವುದಿಲ್ಲ, ಚುಕ್ಕಾಣಿ ಫಲಕವಿರುವುದಿಲ್ಲ. ಹೇಗೆ ಸಾಗಿ ಹೋಗಬೇಕೆಂಬುದು ನಿಮಗೆ ತಿಳಿದಿರುವುದಿಲ್ಲ, ಎಲ್ಲಿಗೆ ಹೋಗಬೇಕೆಂಬುದೂ ತಿಳಿದಿರುವುದಿಲ್ಲ. ಮತ್ತು ನಿಮ್ಮ ಪ್ರತಿ ಹೆಜ್ಜೆಯಲ್ಲಿ ನೀವು ಕೈಕೊಳ್ಳಬಾರದ್ದನ್ನು ಕೈಕೊಳ್ಳುತ್ತೀರಿ. ಈ ಜಗತ್ತಿನ ಪ್ರಾಂತವೊಂದರಲ್ಲಿ ನೀವು ಪ್ರವೇಶಿಸಿದಾಗ ಅಲ್ಲಿರುವ ಸತ್ತೆಗಳು ನಿಮ್ಮ ಸುತ್ತ ಕೂಡಿಕೊಳ್ಳುತ್ತವೆ, ನಿಮ್ಮನ್ನು ಸುತ್ತುವರಿದು ನಿಮ್ಮಲ್ಲಿರುವುದನ್ನೆಲ್ಲ ದೊರಕಿಸಲು ಬಯಸುತ್ತವೆ, ಅದರಿಂದ ಸಾಧ್ಯವಿದ್ದದ್ದನ್ನು ಎಳೆದುಕೊಂಡು ಅದನ್ನು ಆಹಾರವನ್ನಾಗಿ, ಬಲಿಯನ್ನಾಗಿ ಮಾಡುತ್ತವೆ. ನಿಮ್ಮ ಅಂತರಂಗ–ದೊಳಗಿಂದ ಹೊರಸೂಸಲು ಬಲವತ್ತರವಾದ ಪ್ರಕಾಶ ಹಾಗೂ ಶಕ್ತಿಗಳಿಲ್ಲದಿದ್ದರೆ

ನೀವಲ್ಲಿ ನಿಮ್ಮ ದೇಹವಿಲ್ಲದೆ ಚಲಿಸುತ್ತೀರಿ, ಅದು ಶೀತದಿಂದ ಕೊರೆಯುವ ವಾತಾವರಣದಿಂದ ರಕ್ಷಿಸಿಕೊಳ್ಳಲು ಹೊದಿಕೆಯೊಂದು ಇಲ್ಲದ ಹಾಗಿರುತ್ತದೆ, ಅಲ್ಲಿ ಆಶ್ರಯ ನೀಡುವ ಮನೆ ಇರುವುದಿಲ್ಲ, ನಿಮ್ಮನ್ನು ಆವರಿಸುವ ಚರ್ಮವಿರುವುದಿಲ್ಲ, ನಿಮ್ಮ ನರಗಳು ಹೊರಗೆ ತೆರೆದುಕೊಂಡಿರುತ್ತವೆ, ಬತ್ತಲೆಯಾಗಿರುತ್ತವೆ. "ಈ ದೇಹದಲ್ಲಿ ನಾನು ಅದೆಷ್ಟು ದುಃಖಿತನಾಗಿದ್ದೇನೆ" ಎಂದು ಹೇಳುವ ಜನರಿರುತ್ತಾರೆ ಮತ್ತು ಅವರು ಮೃತ್ಯು ಒಂದು ಪಾರಾಗಿ ಹೋಗುವಿಕೆ ಎಂದು ಯೋಚಿಸುತ್ತಾರೆ! ಆದರೆ ಮೃತ್ಯುವಿನ ನಂತರ ನೀವು ಜೀವನದಲ್ಲಿ ದುಃಖಿತರಾಗುವುದಕ್ಕೆ ಕಾರಣವಾಗಿದ್ದ ಅವೇ ಶಕ್ತಿಗಳು ಪರಿಸರದಲ್ಲಿರುತ್ತವೆ, ಅವೇ ಶಕ್ತಿಗಳಿಂದ ನೀವು ಅಪಾಯಕ್ಕೊಳಗಾಗುತ್ತೀರಿ. ದೇಹದ ವಿಘಟನೆ ನಿಮ್ಮನ್ನು ಪ್ರಾಣಿಕ ಲೋಕದ ಬಯಲುಗಳಲ್ಲಿ ಇರುವಂತೆ ಒತ್ತಾಯಕ್ಕೊಳಪಡಿಸುತ್ತದೆ. ಮತ್ತು ಇನ್ನು ಮುಂದೆ ನಿಮಗೆ ರಕ್ಷಣೆ ಇರುವುದಿಲ್ಲ, ಸುರಕ್ಷಿತತೆಗೆ ರಭಸದಿಂದ ಮರಳಿ ಬರಲು ಅಲ್ಲಿ ನಿಮ್ಮ ಭೌತಿಕ ದೇಹವಿರುವುದಿಲ್ಲ.

**CWM, 3/47** **– ಶ್ರೀಮಾತೆ**

*

**ಆಂತರಿಕ ಸ್ಥಿತಿ ಮತ್ತು ಅಸ್ವಸ್ಥತೆಯ ಆಕ್ರಮಣ**

ನಿಮ್ಮ ಆಂತರಿಕ ಸ್ಥಿತಿ ಅಸ್ವಸ್ಥತೆಗೆ ಒಂದು ಕಾರಣವಾಗಿರುತ್ತದೆ. ಆ ಕಾರಣ ಆಂತರಿಕ ಸ್ಥಿತಿಯಲ್ಲಿ ಪ್ರತಿರೋಧವಿದ್ದಾಗ ಇಲ್ಲವೆ ಬಂಡಾಯವಿದ್ದಾಗ ಇಲ್ಲವೆ ರಕ್ಷಣೆಗೆ ಯಾವುದೋ ಒಂದು ಭಾಗ ಪ್ರತಿಸ್ಪಂದಿಸದೆ ಇದ್ದಾಗ ಉಂಟಾಗಬಹುದು, ಇಲ್ಲವೆ ಬಹುಮಟ್ಟಿಗೆ ಸಂತೋಷದಿಂದ, ಸಂಕಲ್ಪಪೂರ್ವಕವಾಗಿ ಕರೆ ಕೊಡಲು ಅಲ್ಲಿರುವ ಏನೋ ಒಂದು ಕಾರಣವಾಗಿರಬಹುದು. ಇಂತಹ ಬಗೆಯದು ಅತಿ ಸ್ವಲ್ಪ ಮಟ್ಟಿಗೆ ನಿಮ್ಮಲ್ಲಿದ್ದರೆ ಅದು ಸಾಕಾಗಬಹುದು, ವಿರೋಧೀ ಶಕ್ತಿಗಳು ಒಮ್ಮೆಗೆ ನಿಮ್ಮ ಮೇಲಿರುತ್ತವೆ ಮತ್ತು ಅವುಗಳ ಆಕ್ರಮಣ ಅಸ್ವಸ್ಥತೆಯ ರೂಪ ತಾಳುತ್ತದೆ. ...

ಅಸ್ವಸ್ಥತೆಯ ಸಾಧ್ಯತೆಗಳು ಯಾವಾಗಲೂ ನಿಮ್ಮ ದೇಹದಲ್ಲಿ ಹಾಗೂ ನಿಮ್ಮ ಸುತ್ತ ಇರುತ್ತವೆ, ನೀವು ಪ್ರತಿಯೊಂದು ರೋಗದ ಸೂಕ್ಷ್ಮ ಜೀವಿಗಳನ್ನು, ರೋಗಾಣುಗಳನ್ನು ನಿಮ್ಮಲ್ಲಿ ಕೊಂಡೊಯ್ಯುತ್ತೀರಿ ಇಲ್ಲವೆ ಅವು ನಿಮ್ಮ ಸುತ್ತ ಹಿಂಡು ಹಿಂಡಾಗಿ ಚಲಿಸುತ್ತವೆ. ಎಷ್ಟೋ ವರ್ಷಗಳಿಂದ ಈಡಾಗದೆ ಇದ್ದ ರೋಗವೊಂದಕ್ಕೆ ನಿವು ಹಠಾತ್ತನೆ ಈಡಾಗುವುದು ಹೇಗೆ? "ಪ್ರಾಣಿಕ ಶಕ್ತಿಯ

ನಿರುತ್ಸಾಹ" ಅದಕ್ಕೆ ಕಾರಣ ಎಂದು ನೀವು ಹೇಳುತ್ತೀರಿ. ಆ ನಿರುತ್ಸಾಹ ಎಲ್ಲಿಂದ ಬರುತ್ತದೆ? ಅದು ಸತ್ತೆಯಲ್ಲಿರುವ ಅಸಾಮರಸ್ಯದಿಂದಾಗಿ ಇಲ್ಲವೆ ದೈವೀ ಶಕ್ತಿಗಳನ್ನು ಗ್ರಹಿಸುವುದರಲ್ಲಿ ಇರುವ ಕೊರತೆಯಿಂದಾಗಿ ಬರುತ್ತದೆ. ನಿಮ್ಮನ್ನು ಪೋಷಿಸುವ ಚೈತನ್ಯ ಹಾಗೂ ಪ್ರಕಾಶಗಳಿಂದ ನಿಮ್ಮನ್ನು ಕಡಿದುಕೊಂಡಾಗ ಈ ನಿರುತ್ಸಾಹ ಅಲ್ಲಿರುತ್ತದೆ, ವೈದ್ಯಕೀಯ ವಿಜ್ಞಾನ ಹೇಳುವ ಹಾಗೆ "ಅನುಕೂಲಕರ ಜಾಗ" ಅಲ್ಲಿ ಸೃಷ್ಟಿಯಾಗಿರುತ್ತದೆ, ಮತ್ತು ಏನೋ ಒಂದು ಅದರ ಪ್ರಯೋಜನ ಪಡೆಯುತ್ತದೆ. ಸಂಶಯ, ಖಿನ್ನತೆ, ಗಾಢ ನಂಬಿಕೆಯ ಕೊರತೆ, ನಿಮ್ಮ ಮೇಲೆ ನೀವೇ ಸ್ವಾರ್ಥದಿಂದ ತಿರುಗಿಕೊಳ್ಳುವಿಕೆ ಇದೆಲ್ಲ ಪ್ರಕಾಶ ಹಾಗೂ ದೈವೀ ಚೈತನ್ಯಗಳಿಂದ ಕಡಿದುಹಾಕುತ್ತದೆ ಮತ್ತು ಆಕ್ರಮಣಕ್ಕಾಗಿ ಈ ಅನುಕೂಲತೆಯನ್ನು ಒದಗಿಸುತ್ತದೆ. ಇದೇ ನೀವು ರೋಗಗ್ರಸ್ತರಾಗುವುದಕ್ಕೆ ಕಾರಣ, ಸೂಕ್ಷ್ಮ ಜೀವಿಗಳು ಅದಕ್ಕೆ ಕಾರಣವಲ್ಲ.

**CWM, 3/55–56** **– ಶ್ರೀಮಾತೆ**

*

**ಅನುಸರಿಸಲು ಹಾಗೂ ಮೈಗೂಡಿಸಿಕೊಳ್ಳಲು ನಿಮ್ಮ ದೇಹಕ್ಕೆ ಕಾಲಾವಕಾಶ ಕೊಡಬೇಕು**

ಮನುಷ್ಯನ ಸಾಮಾನ್ಯ ಜೀವನದಲ್ಲಿ ಪ್ರಗತಿಪರ ಕೀಲು ತಪ್ಪುವಿಕೆ ನಿಯಮವಿದ್ದ ಹಾಗಿರುತ್ತದೆ. ಮನುಷ್ಯನ ಮಾನಸಿಕ ಮತ್ತು ಪ್ರಾಣಿಕ ಸತ್ತೆಗಳು ತಮಗೆ ಸಾಧ್ಯವಿದ್ದಷ್ಟು ಅತ್ಯಂತ ಒಳ್ಳೆಯ ರೀತಿಯಲ್ಲಿ ವಿಶ್ವಂಭರ ಶಕ್ತಿಗಳನ್ನು ಅನುಸರಿಸುತ್ತವೆ, ಮತ್ತು ಜಗತ್ತಿನ ಆಂತರಿಕ ಪರಿವರ್ತನೆ ಹಾಗೂ ಉತ್ಕ್ರಾಂತಿ ಇವುಗಳ ಪ್ರವಾಹ ಆ ಸತ್ತೆಗಳನ್ನು ಒಂದು ವಿಶಿಷ್ಟ ಬಗೆಯಲ್ಲಿ ಕೊಂಡೊಯ್ಯುತ್ತವೆ, ಆದರೆ ಅತ್ಯಂತ ಭೌತಿಕ ಸ್ವಭಾವದ ನಿಯಮಕ್ಕೆ ಬದ್ಧವಾಗಿರುವ ದೇಹ ಬಹಳ ನಿಧಾನ ಗತಿಯಿಂದ ಚಲಿಸುತ್ತದೆ. ಎಪ್ಪತ್ತು, ಎಂಬತ್ತು, ನೂರು, ಎರಡು ನೂರು – ಅದು ಬಹುಶಃ ಗರಿಷ್ಠ ಸಮಯವಾಗಿರಬಹುದು – ಕೀಲು ತಪ್ಪುವಿಕೆ ಎಷ್ಟೊಂದು ಗಂಭೀರವಾಗುತ್ತದೆಯೆಂದರೆ ಬಾಹ್ಯ ಸತ್ತೆ ತುಂಡು, ತುಂಡಾಗಿ ಪತನಗೊಳ್ಳುತ್ತದೆ. ಒತ್ತಾಯದ ಬೇಡಿಕೆ ಮತ್ತು ಅದಕ್ಕೆ ಉತ್ತರ ನೀಡುವಿಕೆ ಇವುಗಳ ನಡುವೆ ಉಂಟಾಗುವ ದಿಕ್‌ಚ್ಯುತಿ ಮತ್ತು ದೇಹದಲ್ಲಿ ಹೆಚ್ಚುತ್ತಿರುವ ಅಶಕ್ತತೆ, ಪ್ರತಿಕ್ರಿಯಿಸದಿರುವಿಕೆ ಇವು ಮೃತ್ಯು ಉಂಟಾಗುವಂತೆ ಮಾಡುತ್ತವೆ. ಸೃಷ್ಟಿಯಲ್ಲಿ ನಿಧಾನ ಗತಿಯಿಂದ ಸತತ ಸಾಗುತ್ತಿರುವ ಹಂತದಲ್ಲಿರುವ ಆಂತರಿಕ ಪರಿವರ್ತನೆಯನ್ನು ಯೋಗದ ಮೂಲಕ ಹೆಚ್ಚು ಗಾಢವಾದದ್ದು, ತೀವ್ರಗತಿಯದು

ಆಗುವಂತೆ ಮಾಡಲಾಗುತ್ತದೆ, ಆದರೆ ಬಾಹ್ಯ ಪರಿವರ್ತನೆಯ ಓಟದ ವೇಗ ಬಹುಮಟ್ಟಿಗೆ ಸಾಮಾನ್ಯ ಜೀವನದಲ್ಲಿರುವ ಹಾಗೆ ಉಳಿದುಕೊಳ್ಳುತ್ತದೆ. ಪರಿಣಾಮವಾಗಿ ಯೋಗವನ್ನು ಆಚರಿಸುವವನ ಆಂತರಿಕ ಮತ್ತು ಬಾಹ್ಯ ಸತ್ತೆಗಳ ನಡುವಿನ ಅಸಾಮರಸ್ಯ ಹೆಚ್ಚಾಗುವ ಪ್ರವೃತ್ತಿ ಹೊಂದಿರುತ್ತದೆ, ಹಾಗಾಗದಿರಲು ದೇಹ ಆಂತರಿಕ ಮುನ್ನಡೆಯನ್ನು ಸಾಧ್ಯವಿದ್ದಷ್ಟು ಸನಿಹದಿಂದ ಅನುಸರಿಸುವುದಕ್ಕೆ ಸಹಾಯ ನೀಡಲು ಮುನ್ನೆಚ್ಚರಿಕೆಗಳನ್ನು ವಹಿಸಬೇಕಾಗುತ್ತದೆ, ರಕ್ಷಣೆಯನ್ನು ಭದ್ರಪಡಿಸಬೇಕಾಗುತ್ತದೆ. ಆಗಲೂ ಕೂಡ ನಿಮ್ಮನ್ನು ಹಿಂದೆ ಹಿಡಿದಿಟ್ಟು–ಕೊಳ್ಳುವುದು ದೇಹದ ಸ್ವಭಾವವೇ ಆಗಿರುತ್ತದೆ. ಈ ಕಾರಣದಿಂದಾಗಿಯೇ ನಾವು ಬಹಳಷ್ಟು ಜನರಿಗೆ "ಎಳೆದುಕೊಳ್ಳುವುದು ಬೇಡ, ಅವಸರ ಮಾಡುವುದು ಬೇಡ, ಅನುಸರಿಸಲು ನಿಮ್ಮ ದೇಹಕ್ಕೆ ಕಾಲಾವಕಾಶ ನೀಡಬೇಕು" ಎಂದು ಹೇಳುವ ನಿರ್ಬಂಧಕ್ಕೊಳಗಾಗುತ್ತೇವೆ. ಕೆಲವರನ್ನು ಹಲವಾರು ವರ್ಷಗಳ ಕಾಲ ಹಿಂದೆ ಉಳಿಯುವಂತೆ ಮಾಡಲಾಗುತ್ತದೆ, ಹೆಚ್ಚಿನ ಪ್ರಗತಿ ಸಾಧಿಸುವುದಕ್ಕೆ ಅನುವು ಮಾಡಿಕೊಡಲಾಗುವುದಿಲ್ಲ. ಕೆಲವೊಮ್ಮೆ ಅಸಮತೋಲನವನ್ನು ತಪ್ಪಿಸುವುದು ಅಸಾಧ್ಯವಾಗುತ್ತದೆ, ಆಗ ನಿಮ್ಮಲ್ಲಿ ಕ್ಷೋಭೆಯುಂಟಾಗುತ್ತದೆ, ಅದು ಪ್ರತಿರೋಧ–ಕ್ಕನುಗುಣವಾಗಿ ಮತ್ತು ನೀವು ಕಾಳಜಿ ವಹಿಸಿದ ಇಲ್ಲವೆ ಅಲಕ್ಷ್ಯಮಾಡಿದ ಪರಿಮಾಣದಲ್ಲಿ ಭಿನ್ನವಾಗಿರುತ್ತದೆ. ಪ್ರಗತಿಯಲ್ಲಿ ಬಲವತ್ತರವಾದ ಚಲನೆ–ಯುಂಟಾದಾಗ ಅದನ್ನು ಹಿಂಬಾಲಿಸಿ, ಬಹುಮಟ್ಟಿಗೆ ಬದಲಾಯಿಸಲಾಗದ ನಿಶ್ಚಲತೆಯ ಅವಧಿ ಇರುವುದಕ್ಕೆ ಇದೂ ಕೂಡ ಕಾರಣವಾಗಿರುತ್ತದೆ. ಸ್ವಲ್ಪ ಕಾಲ ಉಳಿದುಕೊಳ್ಳುವ ಮಬ್ಬಾಗಿರುವಿಕೆ, ಮಂದವಾಗಿರುವಿಕೆ, ಎದೆಗುಂದುವಿಕೆ ಇವುಗಳಿರುವ ಮತ್ತು ಪ್ರಗತಿ ನಿಂತು ಹೋದಂತಿರುವ ಈ ಅವಧಿಯ ಬಗ್ಗೆ ಮುನ್ಸೂಚನೆ ಪಡೆಯದಿದ್ದವರಿಗೆ ನಿಶ್ಚಲತೆಯುಂಟಾದ ಹಾಗೆ ತೋರಿಬರುತ್ತದೆ. ಮತ್ತು ಅವರು ಕಳವಳಕ್ಕೀಡಾಗಿ "ವಿಷಯ ಏನಾಗಿದೆ? ನಾನು ಕಾಲವನ್ನು ವ್ಯರ್ಥವಾಗಿ ಕಳೆದುಕೊಳ್ಳುತ್ತಿದ್ದೇನೆಯೆ, ಏನನ್ನೂ ಕೈಕೊಳ್ಳಲಾಗುತ್ತಿಲ್ಲ." ಆದರೆ ಇರುವ ಸತ್ಯವೆಂದರೆ ಅದು ಮೈಗೂಡಿಸಿಕೊಳ್ಳುವುದಕ್ಕೆ ಅವಶ್ಯವಾದ ಕಾಲಾವಧಿ; ದೇಹ ತನ್ನನ್ನು ಹೆಚ್ಚಿನ ರೀತಿಯಲ್ಲಿ ತೆರೆದಿರಿಸಿಕೊಳ್ಳುವುದಕ್ಕಾಗಿ, ಗ್ರಹಿಸುವಂತಾ–ಗುವುದಕ್ಕಾಗಿ, ಆಂತರಿಕ ಪ್ರಜ್ಞೆ ಸಿದ್ಧಿಸಿಕೊಂಡ ಹಂತವನ್ನು ಸಮೀಪಿಸುವುದಕ್ಕಾಗಿ ಅವಶ್ಯವಾದ ನಿಲುಗಡೆ ಅದಾಗಿರುತ್ತದೆ.

**CWM, 3/87–88** **– ಶ್ರೀಮಾತೆ**

*

## ಸೂಕ್ಷ್ಮ ಭೌತಿಕ ಆವರಣ

ರೋಗವೊಂದಕ್ಕೆ ಕಾರಣ ಏನೇ ಆಗಿರಬಹುದು, ಅದು ಭೌತಿಕದಿಂದ ಇಲ್ಲವೆ ಮಾನಸಿಕದಿಂದ, ಬಾಹ್ಯದಿಂದ ಇಲ್ಲವೆ ಅಂತರ್ಯದಿಂದ ಬಂದಿರಬಹುದು, ಅದು ಭೌತಿಕ ದೇಹದ ಮೇಲೆ ಪರಿಣಾಮ ತೋರಿಸುವುದಕ್ಕಿಂತ ಮೊದಲು ಸತ್ತೆಯ ಇನ್ನೊಂದು ಪದರನ್ನು ಸ್ಪರ್ಶಿಸಿರಲೇಬೇಕು, ಆ ಪದರು ಸತ್ತೆಯನ್ನು ಸುತ್ತುವರಿದಿರುತ್ತದೆ ಹಾಗೂ ರಕ್ಷಣೆ ನೀಡುತ್ತಿರುತ್ತದೆ. ಈ ಸೂಕ್ಷ್ಮ ಪದರನ್ನು ಬೇರೆ ಬೋಧನೆಗಳಲ್ಲಿ ನಾನಾ ಬಗೆಯ ಹೆಸರುಗಳಿಂದ ಕರೆಯಲಾಗಿದೆ – ಈಥರ(ether)ಗೆ ಸಂಬಂಧಿಸಿದ ದೇಹ, ನರವ್ಯೂಹದ ಆವರಣ ಇತ್ಯಾದಿ. ಅದು ಸೂಕ್ಷ್ಮ ದೇಹವಾಗಿದ್ದರೂ ಬಹುಮಟ್ಟಿಗೆ ಗೋಚರವಾಗುವಂತಿರುತ್ತದೆ. ಅದರ ಸಾಂದ್ರತೆ ಬಹಳ ಬಿಸಿಯಾದ, ಉಗಿಯಾಡುತ್ತಿರುವ ವಸ್ತುವಿನ ಸುತ್ತ ಇರುವ ಕಂಪನಗಳ ಸಾಂದ್ರತೆ ಇರುವ ಹಾಗಿರುತ್ತದೆ. ಅದು ಭೌತಿಕ ದೇಹದಿಂದ ಹೊರಹೊಮ್ಮುತ್ತದೆ ಮತ್ತು ಸತ್ತೆಯನ್ನು ಒತ್ತಿಕೊಂಡು ಆವರಿಸುತ್ತದೆ. ಬಾಹ್ಯ ಜಗತ್ತಿನೊಡನೆ ಎಲ್ಲ ಸಂಪರ್ಕ–ಸಾಧನಗಳು (communications) ಈ ಮಾಧ್ಯಮದ ಮೂಲಕ ಕಾರ್ಯ ಕೈಕೊಳ್ಳುತ್ತವೆ, ಮತ್ತು ದೇಹದ ಮೇಲೆ ಪರಿಣಾಮ ಬೀರುವುದಕ್ಕಿಂತ ಮೊದಲು ಇದೇ ಪದರ ಮೇಲೆ ಮುತ್ತಿಗೆ ಹಾಕಬೇಕಾಗುತ್ತದೆ ಹಾಗೂ ಒಳನುಗ್ಗಿ ಹೋಗಬೇಕಾಗುತ್ತದೆ. ಈ ಆವರಣ ಪರಿಪೂರ್ಣವಾಗಿ ದೃಢವಾಗಿದ್ದರೆ, ಕುಂದಿಲ್ಲದ ಹಾಗೆ (intact) ಇದ್ದರೆ ಪ್ಲೇಗ, ಕಾಲರಾಗಳಂತಹ ಅತ್ಯಂತ ಕೆಟ್ಟ ರೋಗಗಳು ಹರಡಿಕೊಂಡಿರುವ ಸ್ಥಳಗಳಿಗೆ ನೀವು ಹೋಗಬಹುದು, ಮತ್ತು ಬಹಳ ಪ್ರತಿರಕ್ಷಿತ(immune)ರಾಗಿ ಉಳಿದು–ಕೊಳ್ಳಬಹುದು, ಅದು ಸಾಧ್ಯವಾಗಬಹುದಾದ ಎಲ್ಲ ಆಕ್ರಮಣಗಳು ಇಲ್ಲವೆ ರೋಗಗಳು ಇವುಗಳ ವಿರುದ್ಧ ಪರಿಪೂರ್ಣ ರಕ್ಷಣೆಯನ್ನು ಒದಗಿಸುತ್ತದೆ, ಆದರೆ ಅದು ಇಡಿಯಾದದ್ದು ಹಾಗೂ ಸಂಪೂರ್ಣವಾದದ್ದು, ಅದರ ಸಂಯೋಜನೆಯಲ್ಲಿ ಆದ್ಯಂತವಾಗಿ ಸುಸಂಗತವಾದದ್ದು, ಅದರ ಅಂಶಗಳು ದೋಷರಹಿತ ಸಮತೋಲನ–ದಲ್ಲಿರುವಂತಹವು ಆಗಿರಬೇಕು. ಈ ದೇಹ, ಒಂದೆಡೆಗೆ ಭೌತಿಕ ಆಧಾರದಿಂದ, ಆದರೆ ಭೌತಿಕ ದ್ರವ್ಯಕ್ಕಿಂತಲೂ ಹೆಚ್ಚಾಗಿ ಭೌತಿಕ ಸ್ಥಿತಿಗಳಿಂದ, ಇನ್ನೊಂದೆಡೆಗೆ ನಮ್ಮ ಮನೋವೈಜ್ಞಾನಿಕ ಕಂಪನಗಳಿಂದ ನಿರ್ಮಾಣಗೊಂಡಿದೆ: ಶಾಂತಿ, ಸಮತೆ ಹಾಗೂ ಗಾಢ ನಂಬಿಕೆ, ಆರೋಗ್ಯ ಹೊಂದಿರುವುದರಲ್ಲಿ ನಂಬಿಕೆ, ಕ್ಷೋಭೆಯಿಲ್ಲದ ವಿರಾಮ ಮತ್ತು ಪ್ರಸನ್ನತೆ, ಉಜ್ವಲ ಹರ್ಷ ಇವೆಲ್ಲ ಈ ಅಂಶವನ್ನು ಅದರಲ್ಲಿ

ರಚಿಸುತ್ತವೆ ಮತ್ತು ಅದಕ್ಕೆ ಬಲವನ್ನು ಹಾಗೂ ದ್ರವ್ಯವನ್ನು ಕೊಡುತ್ತವೆ. ಅದು ಸೂಕ್ಷ್ಮ ಸಂವೇದನೆ ಇರುವ ಮಾಧ್ಯಮ, ಅದು ಎಲ್ಲ ಬಗೆಯ ಸೂಚನೆಗಳನ್ನು ಮನಸಾರೆ ಒಪ್ಪಿಕೊಳ್ಳುತ್ತದೆ, ಅದರೊಂದಿಗೆ ಗುಣಮಟ್ಟಕ್ಕೆ ಅಷ್ಟೊಂದು ಮಹತ್ವ ಕೊಡದೆ ತೀವ್ರಗತಿಯಿಂದ ಪ್ರತಿಕ್ರಿಯಿಸುತ್ತದೆ. ಮತ್ತು ಇವು ಅದರ ಸ್ಥಿತಿಯನ್ನು ತೀವ್ರಗತಿಯಿಂದ ಬದಲಿಸಬಲ್ಲವು ಮತ್ತು ಆ ಸ್ಥಿತಿಗೆ ಮರು ಎರಕ ಕೊಡಬಲ್ಲವು. ಕೆಟ್ಟ ಸೂಚನೆಯೊಂದು ಅದರ ಮೇಲೆ ಬಲವತ್ತರವಾಗಿ ಕಾರ್ಯ ಕೈಕೊಳ್ಳುತ್ತದೆ, ಒಳ್ಳೆಯ ಸೂಚನೆ ವಿರುದ್ಧಾರ್ಥದಲ್ಲಿ ಅದೇ ಶಕ್ತಿಯಿಂದ ಕಾರ್ಯ ಕೈಕೊಳ್ಳುತ್ತದೆ. ಖಿನ್ನತೆ ಮತ್ತು ಎದೆಗುಂದುವಿಕೆಗಳು ದೇಹದ ಮೇಲೆ ಬಹಳ ಪ್ರತಿಕೂಲ ಪರಿಣಾಮಗಳನ್ನು ಉಂಟುಮಾಡುತ್ತವೆ, ಅವು ದೇಹದಲ್ಲಿ, ಅದರ ದ್ರವ್ಯದಲ್ಲಿಯೇ ರಂಧ್ರಗಳನ್ನುಂಟು ಮಾಡುತ್ತವೆ, ಅದು ದುರ್ಬಲವಾಗುವಂತೆ, ಪ್ರತಿರೋಧ ತೋರಿಸದಂತೆ, ವಿರೋಧೀ ಶಕ್ತಿಗಳಿಗೆ ಸುಲಭ ಮಾರ್ಗ ತೆಗೆದಿರಿಸುವಂತೆ ಮಾಡುತ್ತವೆ.

**CWM, 3/88–90** **– ಶ್ರೀಮಾತೆ**

*

**ನರವ್ಯೂಹದ ಪ್ರಾಣಿಕ ಆವರಣವನ್ನು ಕುಂದಿಲ್ಲದಂತೆ ಕಾಪಾಡಿಕೊಂಡು ಬರುವುದು**

ಪ್ರಾಣಿಕ ದೇಹ ಭೌತಿಕ ದೇಹವನ್ನು ಒಂದು ಬಗೆಯ ಆವರಣದೊಂದಿಗೆ ಸುತ್ತುವರಿದಿರುತ್ತದೆ. ದಿನದ ಸಮಯ ಬಹಳ ಸೆಕೆಯೊಂದಿಗೆ ಕೂಡಿಕೊಂಡಾಗ, ಅವಲೋಕಿಸಬಹುದಾದ ಉಷ್ಣತೆಯಿಂದ ಉಂಟಾದ ಕಂಪನಗಳಿರುವ ಸಾಂದ್ರತೆಯನ್ನೇ ಆ ಆವರಣ ಹೊಂದಿರುತ್ತದೆ. ಈ ಆವರಣ ಸೂಕ್ಷ್ಮ ದೇಹ ಮತ್ತು ಅತ್ಯಂತ ಭೌತಿಕ–ಪ್ರಾಣಿಕ ದೇಹ ಇವುಗಳ ಮಧ್ಯೆ ಇರುತ್ತದೆ. ಇದೇ ದೇಹವನ್ನು ಎಲ್ಲ ಸೊಂಕು ರೋಗದಿಂದ, ಆಯಾಸದಿಂದ, ಶಕ್ತಿ ಗುಂದುವಿಕೆಯಿಂದ, ಮತ್ತು ಅಪಘಾತಗಳಿಂದಲೂ ಕೂಡ ರಕ್ಷಿಸುತ್ತದೆ. ಹಾಗಾಗಿ ಈ ಆವರಣ ಇಡಿಯಾಗಿ ಕುಂದಿಲ್ಲದಂತೆ ಇದ್ದರೆ ಅದು ನಿಮ್ಮನ್ನು ಪ್ರತಿಯೊಂದ–ರಿಂದಲೂ ರಕ್ಷಿಸುತ್ತದೆ, ಆದರೆ ಬಲವತ್ತರವಾದ ಭಾವೋದ್ರೇಕ, ಸ್ವಲ್ಪ ಮಟ್ಟಿಗಿನ ಆಯಾಸ, ಒಂದಿಷ್ಟು ಅಸಮಾಧಾನ ಇಲ್ಲವೆ ಯಾವುದೋ ಬಗೆಯ ಆಘಾತ ಅದನ್ನು ತರಚುವುದಕ್ಕೆ ಸಾಕಾಗುತ್ತದೆ ಮತ್ತು ಸ್ವಲ್ಪ ಮಟ್ಟಿಗಿನ ತರಚಿಕೊಳ್ಳುವಿಕೆ ಯಾವುದೇ ಬಗೆಯ ಮಧ್ಯ ಪ್ರವೇಶಿಸುವಿಕೆಗೆ ಅನುವು ಮಾಡಿಕೊಡುತ್ತದೆ. ವೈದ್ಯಕೀಯ ವಿಜ್ಞಾನ ಕೂಡ ಗುರುತಿಸಿರುವುದು ಏನೆಂದರೆ ನೀವು ಪರಿಪೂರ್ಣ

ಪ್ರಾಣಿಕ ಸಮತೋಲನದಲ್ಲಿದ್ದಾಗ ನೀವು ಯಾವ ರೋಗಕ್ಕೂ ಒಳಗಾಗುವುದಿಲ್ಲ ಇಲ್ಲವೆ ಸಂದರ್ಭ ಯಾವುದೇ ಇರಲಿ ನೀವು ಸೊಂಕು ರೋಗದಿಂದ ಪ್ರತಿರಕ್ಷಿತರಾಗಿರುತ್ತೀರಿ. ನಿಮ್ಮಲ್ಲಿ ಈ ಸಮತೋಲನ, ಆಂತರಿಕ ಸಾಮರಸ್ಯವಿದ್ದಾಗ ಅದು ನಿಮ್ಮ ಆವರಣವನ್ನು ಕುಂದಿಲ್ಲದಂತೆ ಇರಿಸುತ್ತದೆ, ಅದು ನಿಮ್ಮನ್ನು ಎಲ್ಲದರಿಂದ ರಕ್ಷಿಸುತ್ತದೆ. ಸರ್ವಸಾಧಾರಣ ಜೀವನ ನಡೆಸುವ ಜನರಿರುತ್ತಾರೆ, ನಿದ್ರೆ ಮಾಡಬೇಕಾದ ರೀತಿಯಲ್ಲಿ ನಿದ್ರೆ ಮಾಡುತ್ತಾರೆ, ಊಟ ಮಾಡಬೇಕಾದ ರೀತಿಯಲ್ಲಿ ಊಟ ಮಾಡುತ್ತಾರೆ, ಅವರ ನರವ್ಯೂಹದ ಆವರಣ ಎಷ್ಟೊಂದು ಕುಂದಿಲ್ಲದ ರೀತಿಯಲ್ಲಿ ಇರುತ್ತದೆಂದರೆ ಸಂಬಂಧ ರಹಿತರಾದವರ ಹಾಗೆ ಎಲ್ಲ ಅಪಾಯಗಳಾದ್ಯಂತ ಸಾಗಿ ಹೋಗುತ್ತಾರೆ. ಅದು ಮನುಷ್ಯ ತನ್ನಲ್ಲಿ ಅಭಿವೃದ್ಧಿ–ಪಡಿಸಬಹುದಾದ ಕ್ಷಮತೆಯಾಗಿರುತ್ತದೆ. ಮನುಷ್ಯ ತನ್ನ ಆವರಣದೊಳಗಿರುವ ದುರ್ಬಲ ಜಾಗದ ಬಗ್ಗೆ ಅರಿವುಳ್ಳವನಾದರೆ ಕೆಲ ನಿಮಿಷಗಳ ಕಾಲ ಏಕಾಗ್ರತೆ ಕೈಕೊಳ್ಳುವುದು ಹಾಗೂ, ದೈವೀ ಶಕ್ತಿಗೆ, ಆಂತರಿಕ ಶಾಂತಿಗೆ ಕರೆ ಕೊಡುವುದು ಆ ಜಾಗವನ್ನು ಸರಿಪಡಿಸಲು, ಚಿಕಿತ್ಸೆಗೆ ಒಳಪಡಿಸಲು ಮತ್ತು ದುಷ್ಪರಿಣಾಮ ಬೀರುವ ವಿಷಯ ಮಾಯವಾಗುವಂತೆ ಮಾಡಲು ಸಾಕಾಗುತ್ತದೆ.

**CWM, 4/63** **– ಶ್ರೀಮಾತೆ**

*

## ಮನೋವೈಜ್ಞಾನಿಕ ರಕ್ಷಣೆ

### ಮನೋ ವೈಜ್ಞಾನಿಕ ವಾತಾವರಣ

ನೈಜತೆಯಲ್ಲಿ, ಕೇವಲ ಅಹಂಕಾರದ ಕಾರಣಕ್ಕಾಗಿಯಾದರೂ ಕೂಡ, ಒಳ್ಳೆಯದನ್ನು ಕೈಕೊಳ್ಳುವುದು, ನ್ಯಾಯಯುತವಾಗಿರುವುದು, ಸರಳರಾಗಿರುವುದು, ಹಾಗೂ ಪ್ರಾಮಾಣಿಕರಾಗಿರುವುದು ಇದೆಲ್ಲ ಅಚಂಚಲರಾಗಿರುವುದಕ್ಕೆ, ಶಾಂತ ರೀತಿಯಲ್ಲಿ ಇರುವುದಕ್ಕೆ, ಮನುಷ್ಯ ತನ್ನ ತಳಮಳವನ್ನು ಕನಿಷ್ಠ ಮಟ್ಟದ್ದಾಗುವಂತೆ ಕುಗ್ಗಿಸುವುದಕ್ಕೆ ಅತ್ಯಂತ ಒಳ್ಳೆಯ ಸಾಧನ. ಮತ್ತು ಅಷ್ಟೇ ಅಲ್ಲದೆ ಮನುಷ್ಯ ಆಸಕ್ತಿರಹಿತನಾಗಬಲ್ಲನಾದರೆ, ವೈಯಕ್ತಿಕ ಉದ್ದೇಶಗಳು ಹಾಗೂ ಅಹಂಮನ್ಯತೆ ಇವುಗಳಿಂದ ಮುಕ್ತನಾಗಬಲ್ಲನಾದರೆ, ಆಗ ನಿಜವಾಗಿ ಸಂತುಷ್ಟನಾಗಿರುವುದು ಸಾಧ್ಯವಾಗುತ್ತದೆ.

ನೀವು ಕೈಕೊಂಡ ಕ್ರಿಯೆಗಳಿಂದ ಸೃಷ್ಟಿಯಾದ ವಾತಾವರಣವನ್ನು ನಿಮ್ಮೊಡನೆ, ನಿಮ್ಮ ಸುತ್ತ ಹಾಗೂ ನಿಮ್ಮಲ್ಲಿ ಕೊಂಡೊಯ್ಯುತ್ತೀರಿ, ಮತ್ತು ನೀವು ಕೈಕೊಂಡದ್ದು ಸುಂದರವಾದದ್ದು, ಒಳ್ಳೆಯದು ಹಾಗೂ ಸಾಮರಸ್ಯವುಳ್ಳದ್ದು ಆಗಿದ್ದರೆ ನಿಮ್ಮ ವಾತಾವರಣ ಸೌಂದರ್ಯವಿದ್ದದ್ದು, ಒಳ್ಳೆಯದು ಹಾಗೂ ಸಾಮರಸ್ಯವಿರುವಂತಹದು ಆಗಿರುತ್ತದೆ. ಇನ್ನೊಂದೆಡೆಗೆ ಅನುದಾರ ಸ್ವಾರ್ಥ, ನೀತಿ–ನಿಷ್ಠೆಯಿಲ್ಲದ ಸ್ವ–ಆಸಕ್ತಿ, ನಿರ್ದಯ ಕೆಟ್ಟ ಸಂಕಲ್ಪ ಇವುಗಳೊಡನೆ ಜೀವಿಸಿದ್ದರೆ, ಅದನ್ನೇ ನೀವು ಪ್ರತಿಕ್ಷಣ ಉಸಿರಾಡಿಸುತ್ತೀರಿ, ಅದರರ್ಥ ದುಃಖ, ಸತತ ಇರುವ ಆತಂಕ; ತನ್ನದೇ ಅವಲಕ್ಷಣದಿಂದ ನಿರಾಶೆಗೊಳಗಾಗುವಂತೆ ಮಾಡುವ ಅವಲಕ್ಷಣ.

ದೇಹವನ್ನು ತ್ಯಜಿಸುವುದರಿಂದ ನೀವು ಈ ವಾತಾವರಣದಿಂದ ಮುಕ್ತರಾಗುವಿರೆಂದು ನೆಚ್ಚಿಕೊಳ್ಳಬಾರದು, ತದ್ವಿರುದ್ಧವಾಗಿ ದೇಹ ಅಪ್ರಜ್ಞೆಯ ಒಂದು ಪರದೆ ಇದ್ದ ಹಾಗಿರುತ್ತದೆ, ಅದು ವೇದನೆಯ ಗಾಢತೆಯನ್ನು ಕಡಿಮೆ ಮಾಡುತ್ತದೆ. ಅತ್ಯಂತ ಭೌತಿಕ–ಪ್ರಾಣಿಕ ಜೀವನದಲ್ಲಿ ನಿಮಗೆ ದೇಹದ ರಕ್ಷಣೆ ಇಲ್ಲದಿದ್ದರೆ ವೇದನೆ ಹೆಚ್ಚು ತೀಕ್ಷ್ಣವಾಗುತ್ತದೆ ಮತ್ತು ಇನ್ನು ಮುಂದೆ ಬದಲಾಯಿಸಬೇಕಾದುದನ್ನು ಬದಲಿಸಲು, ತಿದ್ದಬೇಕಾದುದನ್ನು ತಿದ್ದಲು, ನಿಮ್ಮನ್ನು ಉಚ್ಚತರ, ಸಂತೋಷಕರ ಹೆಚ್ಚು ಪ್ರಕಾಶಮಯವಾದ ಜೀವನಕ್ಕೆ ಉಚ್ಚತರ ಪ್ರಜ್ಞೆಗೆ ತೆರೆದಿರಿಸಿಕೊಳ್ಳಲು ಅವಕಾಶವಿರುವುದಿಲ್ಲ. ಇಲ್ಲಿ ನಿಮ್ಮ ಕಾರ್ಯ ಕೈಕೊಳ್ಳುವುದಕ್ಕೆ ಅವಸರ ಮಾಡಬೇಕು, ಏಕೆಂದರೆ ಇಲ್ಲಿಯೇ ನೀವು ಅದನ್ನು ನಿಜವಾಗಿ ಕೈಕೊಳ್ಳಬಲ್ಲಿರಿ.

ಮೃತ್ಯುವಿನಿಂದ ಏನನ್ನೂ ನಿರೀಕ್ಷಿಸುವುದು ಬೇಡ. ಜೀವನವೇ ನಿಮಗೆ ಮುಕ್ತಿ ನೀಡುತ್ತದೆ.

ಜೀವನದಲ್ಲಿಯೇ ನೀವು ನಿಮ್ಮನ್ನು ಪರಿವರ್ತನೆಗೆ ಒಳಪಡಿಸಬೇಕು. ಪೃಥ್ವಿಯ ಮೇಲೆ ಮಾತ್ರ ಪ್ರಗತಿ ಸಾಧಿಸುವಿರಿ, ಮತ್ತು ಪೃಥ್ವಿಯ ಮೇಲೆಯೂ ನೀವು ಸಿದ್ಧಿ ಪಡೆಯುವಿರಿ. ದೇಹದಲ್ಲಿಯೇ ಜಯ ಗಳಿಸುವಿರಿ.

**CWM, 3/197–98** **– ಶ್ರೀಮಾತೆ**

*

## ಭಯ ಅಸ್ವಸ್ಥತೆಗೆ ದ್ವಾರ ತೆರೆದಿರಿಸುತ್ತದೆ

ಅತ್ಯಂತ ಹೆಚ್ಚಿನ ರೀತಿಯಲ್ಲಿ ಭಯ ಪಟ್ಟುಕೊಳ್ಳುತ್ತಿದ್ದ ಒಬ್ಬರ ಪರಿಚಯ ನನಗಿತ್ತು. ಅವನಿಗೆ ಭಯದಿಂದ ಕಾಲರಾ ರೋಗ ಬಂದಿತ್ತು. ಆವನ ನೆರೆ ಹೊರೆಯವರಲ್ಲಿ ಕಾಲರಾ ಪೀಡಿತ ಜನರಿದ್ದರು, ಮತ್ತು ಈ ಮನುಷ್ಯ ಎಷ್ಟೊಂದು ಭಯ ಪಟ್ಟುಕೊಂಡನೆಂದರೆ ಅವನಿಗೆ ಕಾಲರಾ ರೋಗ ತಗಲಿತು. ಅದಕ್ಕೆ ಭಯವಲ್ಲದೆ ಬೇರೆ ಕಾರಣಗಳಿರಲಿಲ್ಲ: ಕೇವಲ ಭಯ ಪಟ್ಟುಕೊಂಡದ್ದಷ್ಟೇ ಅದಕ್ಕೆ ಕಾರಣವಾಗಿತ್ತು. ಮತ್ತು ಸಾಂಸರ್ಗಿಕ ರೋಗವಿದ್ದಲ್ಲಿ ಅಂತಹದು ಬಹಳ ಸಾಮಾನ್ಯ ವಿಷಯ, ಬಹಳಷ್ಟು ಸಂದರ್ಭಗಳಲ್ಲಿ ಅದು ಹಾಗಿರುತ್ತದೆ. ಭಯದ ಮೂಲಕ ದ್ವಾರವನ್ನು ತೆರೆದಿರಿಸಲಾಗುತ್ತದೆ, ನೀವು ರೋಗಪೀಡಿತರಾಗುತ್ತೀರಿ. ಭಯ ರಹಿತರಾದವರು ಮುಕ್ತರಾಗಿ ಎಲ್ಲಿ ಬೇಕಾದಲ್ಲಿ ಸಂಚರಿಸಬಹುದು, ಅವರಿಗೆ ಸಾಮಾನ್ಯವಾಗಿ ಏನೂ ಆಗುವುದಿಲ್ಲ. ಆದಾಗ್ಯೂ ನಾನು ಅಲ್ಲಿ ಹೇಳಿದ ಹಾಗೆ ನಿಮ್ಮ ಮನಸ್ಸಿನಲ್ಲಿ ಭಯ ಇಲ್ಲದೆ ಇರಬಹುದು, ನಿಮ್ಮ ಪ್ರಾಣಿಕದಲ್ಲಿಯೂ ಕೂಡ ಭಯ ಇಲ್ಲದೆ ಇರಬಹುದು, ಆದರೆ ದೇಹದಲ್ಲಿ ಭಯ ಹೊಂದಿರದೆ ಇದ್ದವರು ಯಾರಿದ್ದಾರೆ? ಅತಿ ಕಡಿಮೆ ಅಂತಹ ಜನರಿರುತ್ತಾರೆ. ಭಯದಿಂದ ಕೂಡಿದ ದೇಹಕ್ಕೆ ಚಿಕಿತ್ಸೆ ನೀಡಲು ಕಟ್ಟುನಿಟ್ಟಾದ ಶಿಸ್ತುಪಾಲನೆಯ ಆವಶ್ಯಕತೆಯಿದೆ. ಜೀವಕೋಶಗಳೇ ಸ್ವತಃ ನಡುಗುತ್ತವೆ. ಶಿಸ್ತುಪಾಲನೆ ಹಾಗೂ ಯೋಗ ಇವುಗಳ ಮೂಲಕ ಭಯದ ಮೇಲೆ ಜಯಸಾಧಿಸಬಹುದು. ಆದರೆ ಭಯದ ಮೂಲಕ ಯಾವುದೇ ರೋಗಕ್ಕೆ ನೀವು ಈಡಾಗಬಹುದು ಎಂಬುದು ವಾಸ್ತವ ಸಂಗತಿ, ಅಪಘಾತಕ್ಕೂ ಕೂಡ ನೀವು ಆಮಂತ್ರಣ ಕೊಡಬಹುದು. ನಿಮಗೆ ತಿಳಿದ ಹಾಗೆ, ಒಂದು ವಿಶಿಷ್ಟ ದೃಷ್ಟಿಕೋನದಿಂದ ಪ್ರತಿಯೊಂದೂ ಸಾಂಸರ್ಗಿಕವಾಗಿರುತ್ತದೆ. ಇನ್ನೊಬ್ಬನಿಗಾದ ಗಾಯ ಕಂಡು ಒಂದು ಬಗೆಯ ಭೀತಿಗೊಳಗಾಗಿ ತನ್ನ ಮೇಲೆ ಗಾಯ ತಂದುಕೊಂಡ ಮನುಷ್ಯನ ಪರಿಚಯ ನನಗಿತ್ತು; ಅವನು ನಿಜವಾಗಿಯೂ ತನ್ನ ಮೇಲೆ ಗಾಯ ತಂದುಕೊಂಡ.

**CWM, 5/166** **– ಶ್ರೀಮಾತೆ**

*

## ಆಸೆಗಳ ವಿರುದ್ಧ ನಿಜವಾದ ರಕ್ಷಣೆ

ಮನುಷ್ಯನೊಬ್ಬ ಈ ಸೂಕ್ಷ್ಮ ಭೌತಿಕ ಆವರಣವನ್ನು ಕುಂದಿಲ್ಲದಂತೆ ಹೊಂದಿರಬಹುದು, ಅದು ಅವನನ್ನು ಎಲ್ಲ ರೋಗಗಳಿಂದ, ಅಪಘಾತಗಳಿಂದ

ರಕ್ಷಿಸಲು ಅದ್ಭುತ ರೀತಿಯಿಂದ ಕಾರ್ಯ ಕೈಕೊಳ್ಳಬಹುದು, ಆದಾಗ್ಯೂ, ಅದೇ ಕಾಲಕ್ಕೆ, ಅವನಲ್ಲಿ ಆಸೆಗಳು ತುಂಬಿಕೊಂಡಿರಬಹುದು, ಏಕೆಂದರೆ ಆಸೆಗಳು ಬೇರೊಂದು ಕ್ಷೇತ್ರಕ್ಕೆ ಸೇರಿರುತ್ತವೆ. ಆಸೆ ಭೌತಿಕ ವಿಷಯವಲ್ಲ, ಆಸೆ ಪ್ರಾಣಿಕವಾದ ಏನೋ ಒಂದು, ಮತ್ತು ಈ ಆವರಣ ಪ್ರಾಣಿಕಕ್ಕಿಂತ ಹೆಚ್ಚು ಭೌತಿಕವಾದದ್ದು: ಅದು ಪ್ರಾಣಿಕ ಜಗತ್ತಿನಲ್ಲಿ ಸಂಪರ್ಕ ಪಡೆಯಲು ಪ್ರಾಣಿಕ ಪ್ರವೇಶಿಸುವುದನ್ನು ಹಾಗೂ ಅಲ್ಲಿ ಅದು ಅದರ ಎಲ್ಲ ಒಳ ಪ್ರೇರಣೆಗಳನ್ನು ಸ್ವೀಕರಿಸುವುದನ್ನು ತಡೆಯಲಾರದು. ಸ್ವಾಭಾವಿಕವಾಗಿ, ತನ್ನ ಮೇಲೆ ಪ್ರಭುತ್ವ ಪಡೆದ ಮನುಷ್ಯ, ತನ್ನ ಚೈತ್ಯ ಸತ್ತೆಯನ್ನು ಕಂಡುಕೊಂಡವನು, ಈ ಚೈತ್ಯ ಸತ್ತೆಯ ಪ್ರಜ್ಞೆಯಲ್ಲಿ ಸತತ ಜೀವಿಸುವವನು ಜ್ಞಾನ, ಪ್ರಕಾಶ, ಸೌಂದರ್ಯ, ಪರಿಶುದ್ಧತೆ ಇವುಗಳಿರುವ ಆವರಣ ಹೊಂದಿರುತ್ತಾನೆ, ಆಸೆಗಳ ವಿರುದ್ಧ ಇರುವ ಎಲ್ಲ ರಕ್ಷಣೆಗಳಲ್ಲಿ ಅದು ಅತ್ಯಂತ ಒಳ್ಳೆಯದು, ಆದರೆ ಅದೆಲ್ಲ ಏನೇ ಆಗಿದ್ದರೂ ಮನುಷ್ಯ ಯಾವಾಗಲೂ ಎಚ್ಚರಿಕೆಯಿಂದ ಇರದಿದ್ದರೆ ಆಸೆಯೊಂದು ಒಳನುಗ್ಗಿ ಬರುವ ಸಾಧ್ಯತೆ ಇರುತ್ತದೆ, ಏಕೆಂದರೆ ಅದು ಬಾಹ್ಯದಿಂದ ಬರುತ್ತದೆ ಎಂದು ಹೇಳುತ್ತೇವೆ. ಮನುಷ್ಯ ತನ್ನಂತರಂಗದಲ್ಲಿ ಆಸೆಯೊಂದರ ಮೇಲೆ ಜಯ ಸಾಧಿಸಿರಬಹುದು, ಆದಾಗ್ಯೂ ಅದು ಸಾಂಸರ್ಗಿಕವಾಗಿ ಬಾಹ್ಯದಿಂದ ಬರಬಹುದು, ಆದರೆ ಜ್ಞಾನ, ಪ್ರಕಾಶ ಹಾಗೂ ಪರಿಶುದ್ಧತೆ ಇವುಗಳಿರುವ ಈ ಆವರಣದೊಳಗಿಂದ ಹಾಯ್ದು ಬರುವಾಗ ಆಸೆ ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತದೆ ಮತ್ತು ಅಂಥ ಮತ್ತು ಕೂಡಲೆ ನೀಡುವ ಉತ್ತರವನ್ನು ಆಹ್ವಾನಿಸುವ ಚಲನೆಯ ರೂಪದಲ್ಲಿ ಬರುವುದರ ಬದಲಾಗಿ ಮನುಷ್ಯ ಅಲ್ಲಿ ಏನು ಸಂಭವಿಸುತ್ತದೆ ಎಂಬುದನ್ನು ಗ್ರಹಿಸುತ್ತಾನೆ ಮತ್ತು ಪ್ರವೇಶಿಸಲು ಬಯಸುವ ಶಕ್ತಿಯ ಬಗ್ಗೆ ಅರಿವುಳ್ಳವನಾಗುತ್ತಾನೆ ಮತ್ತು – ಅದು ಬೇಡಾದರೆ – ಅವನು ಅಚಂಚಲತೆಯಿಂದ ಆಂತರಿಕ ಚಲನೆಯನ್ನು ಮಾಡಿ ಒಳ ಬರುತ್ತಿರುವ ಆಸೆಯನ್ನು ತಿರಸ್ಕರಿಸಬಲ್ಲನು. ಇದೇ ನಿಜವಾದ ರಕ್ಷಣೆ: ಎಚ್ಚರಿಸುವ ಪ್ರಜ್ಞೆ, ಪರಿಶುದ್ಧವಾದದ್ದು, ಮತ್ತು ಜಾಗರೂಕವಾದದ್ದು, ಅದು ನಿದ್ರಿಸುವುದಿಲ್ಲ, ಅರಿವಿಗೆ ತಂದುಕೊಳ್ಳದೆ ವಿಷಯಗಳಿಗೆ ಪ್ರವೇಶಿಸಲು ಅನುವು ಮಾಡಿಕೊಡುವುದಿಲ್ಲ.

**CWM, 4/323–24** **– ಶ್ರೀಮಾತೆ**

*

## ಯೋಚನೆಯ ಸಾಮರ್ಥ್ಯ

ಕೌಶಲಪೂರ್ವಕವಾಗಿ ನಿರ್ದೇಶಿಸಿದ ಮತ್ತು ಪೋಷಿಸಿಕೊಂಡು ಬಂದ ಯೋಚನೆ, ಆಕರ್ಷಣೆಯ ಮೂಲಕ, ಇನ್ನೂ ಅಂಧಕಾರದಲ್ಲಿ ಸುತ್ತಿಕೊಂಡಿರುವ ಬಹಳಷ್ಟು ಮನಸ್ಸುಗಳಲ್ಲಿ ಪ್ರಜ್ಞೆ ಮತ್ತು ವಿವೇಕದ ಇಣುಕು ನೋಟ ಎಚ್ಚತ್ತುಗೊಳ್ಳುವಂತೆ ಮಾಡಬಹುದು ಮತ್ತು ಹೀಗೆ ಪ್ರಗತಿಪರ ಉತ್ಕ್ರಾಂತಿಯತ್ತ ಅವುಗಳನ್ನು ಅವುಗಳ ಮಾರ್ಗದ ಮೇಲೆ ಇರಿಸಬಹುದು; ತನ್ನೆಡೆಗೆ ಪ್ರಾಣಿಕ ಶಕ್ತಿಗಳನ್ನು ಎಳೆದುಕೊಂಡು ಅಸ್ವಸ್ಥನಾದವನಿಗೆ ಚಿಕಿತ್ಸೆ ಒದಗಿಸಲು ಆ ಯೋಚನೆ ಮಧ್ಯವರ್ತಿಯಾಗಿ ಸೇವೆ ಸಲ್ಲಿಸಬಹುದು, ಅದು ಪ್ರೀತಿಪಾತ್ರನಾದ ಮಿತ್ರನ ಮೇಲೆ ಕಾವಲಿರಿಸಬಹುದು ಹಾಗೂ ಹಲವಾರು ಅಪಾಯಗಳಿಂದ ರಕ್ಷಿಸಬಹುದು, ಅದನ್ನು ಅವನಿಗೆ ಮಾನಸಿಕ ತಿಳಿವಳಿಕೆಯಿಂದ ಮುನ್ಸೂಚನೆ ಕೊಡುವುದರ ಮೂಲಕ, ಅವನ ಅಂತರ್ಬೋಧೆಯ ಮೂಲಕ, ಇಲ್ಲವೆ ಆಪತ್ತಿನ ಕಾರಣದ ಮೇಲೆ ನೇರವಾಗಿ ಕಾರ್ಯ ಕೈಕೊಳ್ಳುವುದರ ಮೂಲಕ ಮಾಡಬಹುದು.

ದುರ್ದೈವವಶಾತ್, ತಿರುಗು ಮುರುಗಾದದ್ದು(inverse) ಕೂಡ ನಿಜವಾದದ್ದು, ಕೆಟ್ಟ ಯೋಚನೆಗಳು ಸಾಮರ್ಥ್ಯದಲ್ಲಿ ಕಡಿಮೆಯಾಗಿರುವುದಿಲ್ಲ.

ಕೆಟ್ಟ ಯೋಚನೆಗಳನ್ನು, ದ್ವೇಷದ, ಸೇಡಿನ, ಮಾತ್ಸರ್ಯದ, ಹೊಟ್ಟೆ ಕಿಚ್ಚಿನ, ಕಟುವಾದ ನಿರ್ಣಯದ, ಪಂಥೀಯ ಮೌಲ್ಯ ಮಾಪನದ ಯೋಚನೆಗಳನ್ನು ಸ್ವೀಕರಿಸುವುದರ ಮೂಲಕ ಹಾಗೂ ನಮ್ಮಿಂದ ಹೊರ ಹೊಮ್ಮಿಸುವುದರ ಮೂಲಕ ಉಂಟು ಮಾಡಬಹುದಾದ ಎಲ್ಲ ಕೇಡಿನ ಬಗ್ಗೆ ನಾವು ಕಲ್ಪನೆ ಮಾಡಿಕೊಳ್ಳಲಾರೆವು.

ಮಾನಹಾನಿಕಾರಕವಾದ ಹರಟೆಯನ್ನು ಕೇಳುವುದು ಮತ್ತು ಅದನ್ನು ಪುನರಾವರ್ತಿಸಿ ಹೇಳುವುದು ಎಷ್ಟೊಂದು ಕೇಡು ಮಾಡುವುದೆಂಬುದನ್ನು ನೀವು ತಿಳಿದಿರುತ್ತೀರಿ, ಆದರೆ ಶಬ್ದಗಳನ್ನು ಉಚ್ಚರಿಸುವುದರಿಂದ ದೂರ ಉಳಿದು–ಕೊಳ್ಳಬೇಕಷ್ಟೇ ಅಲ್ಲ, ಯೋಚನೆಯಲ್ಲೂ ಕೂಡ ದೂರ ಉಳಿದುಕೊಳ್ಳಬೇಕು.

**CWM, 2/94–95** **– ಶ್ರೀಮಾತೆ**

*

**ಶಿಕ್ಷಣ ಮತ್ತು ನಯ–ನಾಜೂಕು ರಕ್ಷಣೆ ನೀಡುತ್ತದೆ**

ವಿಧಿಪೂರ್ವಕ ಮತ್ತು ಜ್ಞಾನೋದಯವನ್ನುಂಟು ಮಾಡುವ ರೀತಿಯಲ್ಲಿ ಸ್ವಲ್ಪ ಸ್ವಲ್ಪವಾಗಿ ಇಂದ್ರಿಯಗಳನ್ನು ನಯ–ನಾಜೂಕಿಗೆ ಒಳಪಡಿಸುವುದರಿಂದ ಮಗುವಿನಲ್ಲಿರುವ ಸಾಂಸರ್ಗಿಕವಾಗಿ ಬಂದ ಅಸಭ್ಯ, ಮಾಮೂಲಿಯ, ಒರಟಾದ ಎಲ್ಲವೂ ಹೊರಟು ಹೋಗುತ್ತದೆ. ಈ ಶಿಕ್ಷಣ ಅವನ ಚಾರಿತ್ರ್ಯದ ಮೇಲೆಯೂ ಕೂಡ ಸಂತೋಷಕರ ಪರಿಣಾಮಗಳನ್ನು ಉಂಟು ಮಾಡುತ್ತದೆ. ನಿಜವಾಗಿ ನಯ–ನಾಜೂಕಿರುವ ಸ್ವಾದವನ್ನು ಅಭಿವೃದ್ಧಿಪಡಿಸಿಕೊಂಡವನು, ಈ ನಯ–ನಾಜೂಕಿನಿಂದಾಗಿಯೇ ಒರಟಾದ, ಕ್ರೌರ್ಯವಿರುವ ಇಲ್ಲವೆ ಅಸಭ್ಯವಾಗಿರುವ ರೀತಿಯಲ್ಲಿ ಕಾರ್ಯ ಕೈಕೊಳ್ಳಲು ಅಸಮರ್ಥನಾಗಿರುತ್ತಾನೆ. ಈ ನಯ–ನಾಜೂಕು ನಿಷ್ಕಪಟದ್ದಾಗಿದ್ದರೆ ಸತ್ತೆಗೆ ಉದಾತ್ತತೆ ಮತ್ತು ಔದಾರ್ಯ ಇವುಗಳನ್ನು ತಂದುಕೊಡುತ್ತದೆ, ಅವು ಸ್ವಯಂಪ್ರೇರಿತವಾಗಿ ಅವನ ನಡೆನುಡಿಯಲ್ಲಿ ಅಭಿವ್ಯಕ್ತಗೊಳ್ಳುತ್ತವೆ ಮತ್ತು ಅವನನ್ನು ಕೆಳಮಟ್ಟದ, ದುರಾಗ್ರಹದ ಚಲನೆಗಳಿಂದ ರಕ್ಷಿಸುತ್ತವೆ.

**CWM, 12/21** **– ಶ್ರೀಮಾತೆ**

*

**ಹೇಗೆ ಜೀವಿಸಬೇಕು ಎಂಬುದನ್ನು ಮನುಷ್ಯ ಕಲಿತುಕೊಳ್ಳಬೇಕು**

ಉದಾಹರಣೆಗೆ ಕ್ರೀಡೆಯೊಂದರಲ್ಲಿ ನೀವು ಆಟವಾಡುತ್ತಿದ್ದೀರಿ ಎಂದು ತಿಳಿಯೋಣ, ಅದು ಹೀಗಿರುತ್ತದೆ (ಸಂಜ್ಞೆ), ಮತ್ತು ನಂತರ ಒಂದು ಬಿಂದುವಿನಲ್ಲಿ ಕಂಪನಗಳಿರುತ್ತವೆ, ಅದು ಒಮ್ಮೆಗೆ ಅಪ್ಪಳಿಸುವವರೆಗೆ, ಹೆಚ್ಚುತ್ತ ಹೋಗುತ್ತದೆ. ಅದು ಆ ಬಗೆಯ ಸಾಮೂಹಿಕ ವಾತಾವರಣ, ನಾವು ಬಂದು ಅದನ್ನು ನೋಡುತ್ತೇವೆ, ನೀವು ಆಟದ ಮಧ್ಯದಲ್ಲಿರುತ್ತೀರಿ, ಅದು ಬಾಸ್ಕೆಟ ಬಾಲ್, ಫುಟ್‌ಬಾಲ್ ಇಲ್ಲವೆ ಇನ್ನಾವುದೋ ಆಟವಾಗಿರಬಹುದು. ನಮಗೆ ಅದರ ಭಾವನೆ ಬರುತ್ತದೆ, ಅದನ್ನು ನಾವು ನೋಡುತ್ತೇವೆ, ಅದು ನಿಮ್ಮ ಸುತ್ತ ಒಂದು ಬಗೆಯ ಹೊಗೆಯನ್ನು ಉತ್ಪಾದಿಸುತ್ತದೆ, (ಸೆಕೆಯ ಆ ಆವಿ (vapour) ಕೆಲವೊಮ್ಮೆ ಬರುತ್ತದೆ, ಅಂತಹದೇ ಏನೋ ಒಂದು) ಮತ್ತು ನಂತರ ಆ ಬಗೆಯ ಕಂಪನಗಳನ್ನು ಉಂಟುಮಾಡುತ್ತದೆ, ಆ ಕಂಪನಗಳು ಹೆಚ್ಚಾಗುತ್ತ ಹೋಗುತ್ತವೆ,

ಹಾಗಾಗುವುದು ಸಮತೋಲನ ಮುರಿದು ಬೀಳುವವರೆಗೆ, ಯಾರೋ ಒಬ್ಬರು ಕಾಲು ಮುರಿದುಕೊಳ್ಳುತ್ತಾನೆ, ಇನ್ನೊಬ್ಬ ಕೆಳಗೆ ಬೀಳುತ್ತಾನೆ, ಮತ್ತೊಬ್ಬನ ಬಾಯಿಯ ಮೇಲೆ ಚೆಂಡು ಅಪ್ಪಳಿಸುತ್ತದೆ, ಇತ್ಯಾದಿ. ಅದು ಹಾಗಿರುವಾಗ ಇಂತಹದು ಸಂಭವಿಸಲಿದೆಯೆಂದು ಮನುಷ್ಯ ಭವಿಷ್ಯ ಹೇಳಬಲ್ಲ. ಆದರೆ ಯಾರಿಗೂ ಅದರ ಬಗ್ಗೆ ಅರಿವಿರುವುದಿಲ್ಲ. ಆದಾಗ್ಯೂ ಕಡಿಮೆ ಗಂಭೀರ ಸಂದರ್ಭಗಳಲ್ಲಿ ನಿಮ್ಮಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಅವನ ಸುತ್ತ ಏನೋ ಒಂದಿರುತ್ತದೆ, ಅದು ಸ್ವೀಕರಿಸಲು ಬಯಸದ ಎಲ್ಲದರಿಂದ ರಕ್ಷಿಸುವ ಈ ಇದೇ ವ್ಯಕ್ತಿಯಾಗಿರುವುದರ ಬದಲಾಗಿ ಮತ್ತು ಸ್ಥಿರವಾದ ಆವರಣವಾಗಿರುವುದರ ಬದಲಾಗಿ ... ನಾನು ಹೇಳುವುದೇನೆಂದರೆ ನಿಮ್ಮ ಗ್ರಹಿಕೆ ಉದ್ದೇಶಪೂರ್ವಕ–ವಾದದ್ದು ಮತ್ತು ಪ್ರಜ್ಞಾಪೂರ್ಣವಾದದ್ದು ಆಗುತ್ತದೆ, ಹಾಗಿಲ್ಲದಿದ್ದರೆ ನಿಮಗೆ ಸ್ವೀಕರಿಸಲಾಗುವುದಿಲ್ಲ; ಮತ್ತು ನಿಮ್ಮಲ್ಲಿ ಈ ಪ್ರಜ್ಞಾಪೂರ್ಣ ಅತ್ಯಂತ ಸ್ಥಿರವಾದ ವಾತಾವರಣವಿದ್ದಾಗ ಮಾತ್ರ, ಮತ್ತು ನಾನು ಹೇಳುವ ಹಾಗೆ ಅದು ಅಂತರಂಗದಿಂದ ಬಂದಾಗ (ಅದು ಬಾಹ್ಯದಿಂದ ಬರುವಂತಹದಲ್ಲ) ಅದು ಹೀಗಿದ್ದಾಗ ಮಾತ್ರ ಜೀವನದಲ್ಲಿ ನಿರ್ಭೀತಿಯಿಂದ ಸಾಗಿ ಹೋಗಬಹುದು, ಎಂದರೆ ಇನ್ನುಳಿದವುಗಳ ಮಧ್ಯೆ ಮತ್ತು ಪ್ರತಿಕ್ಷಣದ ಎಲ್ಲ ಸಂದರ್ಭಗಳಲ್ಲಿ ಹಾಗೆ ಸಾಗಿ ಹೋಗಬಹುದು. ... ಹಾಗಿಲ್ಲದಿದ್ದರೆ ಅಲ್ಲಿ ಕೆಟ್ಟದಾದ ಏನೋ ಒಂದಕ್ಕೆ ಒಳಗಾಗುವುದಿದ್ದರೆ, ಉದಾಹರಣೆಗೆ ಸಿಟ್ಟು, ಭಯ, ಒಂದು ರೋಗ, ಕೆಲಮಟ್ಟದಲ್ಲಿ ಆರಾಮವಿಲ್ಲದೆ ಇರುವಿಕೆ ಇಂತಹದಿದ್ದರೆ ಅದಕ್ಕೆ ನಿಶ್ಚಿತವಾಗಿ ಒಳಗಾಗುತ್ತೀರಿ. ಅದು ಇನ್ನೂ (ಸಂಜ್ಞೆ) ಕೈಕೊಳ್ಳಲು ಪ್ರಾರಂಭಿಸಿದ ಕೂಡಲೆ ಅದೇ ಬಗೆಯ ಕಂಪನಗಳಿಗೆ ಬರಲು ಮತ್ತು ನಿಮ್ಮನ್ನು ವಶಪಡಿಸಿಕೊಳ್ಳಲು ನೀವು ಕರೆ ಕೊಟ್ಟ ಹಾಗಿರುತ್ತದೆ. ಜನರು ಜೀವನದಾದ್ಯಂತ ಅಪ್ರಜ್ಞೆಯಿಂದ ಸಾಗಿ ಹೋಗುತ್ತಿರುವುದು ಆಶ್ಚರ್ಯವನ್ನುಂಟು ಮಾಡುವ ಹಾಗಿರುತ್ತದೆ, ಹೇಗೆ ಬದುಕಬೇಕು ಎಂಬುದನ್ನು ಅವರು ತಿಳಿದುಕೊಂಡಿರುವುದಿಲ್ಲ. ... ಅದನ್ನೇ ಮಕ್ಕಳಿಗೆ ಮೊದಲು ಕಲಿಸಿಕೊಡಬೇಕಾಗಿರುತ್ತದೆ: ಹೇಗೆ ಜೀವಿಸಬೇಕು ಎಂಬುದನ್ನು ಕಲಿಸಿಕೊಡಬೇಕಾಗಿರುತ್ತದೆ.

**CWM, 7/145–46** – **ಶ್ರೀಮಾತೆ**

*

## ಮನೋವೈಜ್ಞಾನಿಕ ವಾತಾವರಣ ಮಹತ್ವದ್ದಾಗಿರುತ್ತದೆ

ಇಡಿಯಾದ ಹೃದಯದಿಂದ ಭಗವಂತನಿಗೆ ನಿಷ್ಠಾವಂತರಾಗಿರುವವರಿಗೆ ಮಾತ್ರ ಅವನು ರಕ್ಷಣೆ ಒದಗಿಸಬಲ್ಲ, ಅವರು ನಿಜವಾಗಿ ಸಾಧನೆ ಕೈಕೊಳ್ಳುವ ಮನೋಭಾವದಲ್ಲಿ ಜೀವಿಸುತ್ತಾರೆ ಮತ್ತು ತಮ್ಮ ಪ್ರಜ್ಞೆಯನ್ನು, ಪೂರ್ವ ಮಗ್ನತೆಯನ್ನು ಭಗವಂತನ ಮೇಲೆ ಮತ್ತು ಅವನಿಗೆ ಸೇವೆ ಸಲ್ಲಿಸುವುದರ ಮೇಲೆ ಸ್ಥಿರಗೊಳಿಸಿರುತ್ತಾರೆ. ಆಸೆ, ಉದಾಹರಣೆಗೆ, ಮನುಷ್ಯ ತನ್ನ ಇಷ್ಟಗಳು ಮತ್ತು ಅನುಕೂಲತೆಗಳು, ಒಳ್ಳೆಯತನದ ಇಲ್ಲವೆ ಸದ್ಗುಣದ ಸೋಗಿರುವ ಎಲ್ಲ ಚಲನೆಗಳು ಮತ್ತು ಕಾಪಟ್ಯ, ಮಿಥ್ಯೆ ಇವೆಲ್ಲವುಗಳ ಮೇಲೆ ಒತ್ತು ನೀಡುವುದು ಭಗವಂತನ ರಕ್ಷಣೆಯ ಮಾರ್ಗದಲ್ಲಿ ಅಡ್ಡ ನಿಂತಿರುವ ಭವ್ಯ ಅಡೆತಡೆಗಳಾಗಿರುತ್ತವೆ. ಭಗವಂತನ ಮೇಲೆ ನಿಮ್ಮ ಸಂಕಲ್ಪವನ್ನು ಹೇರಲು ಬಯಸಿದರೆ ತಲೆಯ ಮೇಲೆ ಬಾಂಬು ಬೀಳುವುದಕ್ಕೆ ಕರೆ ಕೊಟ್ಟ ಹಾಗಿರುತ್ತದೆ. ವಿಷಯಗಳು ಈ ರೀತಿ ಸಂಭವಿಸಲೇಬೇಕೆಂದು ನಾನು ಹೇಳುತ್ತಿಲ್ಲ, ಆದರೆ ಜನರು ಪ್ರಜ್ಞಾಪೂರ್ಣರಾಗದಿದ್ದರೆ, ಕಟ್ಟುನಿಟ್ಟಾಗಿ ಜಾಗರೂಕರಾಗಿರದಿದ್ದರೆ, ಆಧ್ಯಾತ್ಮಿಕ ಅನ್ವೇಷಕನ ಮನೋಭಾವದಿಂದ ಕಾರ್ಯ ಕೈಕೊಳ್ಳದಿದ್ದರೆ ಅವು ಸಂಭವಿಸುವ ಸಾಧ್ಯತೆ ಇರುತ್ತದೆ. ಮನೋವೈಜ್ಞಾನಿಕ ವಾತಾವರಣ ಬಾಹ್ಯ ಜಗತ್ತಿನಲ್ಲಿರುವುದರ ಹಾಗೆ ಉಳಿದುಕೊಂಡರೆ, ಅಂಧಕಾರದ ಶಕ್ತಿಗಳ ವಿರುದ್ಧ ರಕ್ಷಣೆಯ ನಿಶ್ಚಿತವಾದ ಗೋಡೆ ಇರುವುದು ಸಾಧ್ಯವಿಲ್ಲ, ಇಲ್ಲಿ ಕಾರ್ಯ ಕೈಕೊಳ್ಳುತ್ತಿರುವ ಆ ಶಕ್ತಿಗಳು ಅಪಾಯದ ಸತ್ವಪರೀಕ್ಷೆ, ವೇದನೆ ಹಾಗೂ ವಿನಾಶ ಇವುಗಳನ್ನು ಕುರಿತು ಆ ವಾತಾವರಣದಲ್ಲಿ ನಿರ್ದಿಷ್ಟ ಫಲಿತಾಂಶ ನೀಡುತ್ತಿರುತ್ತವೆ.

**CWM, 13/121** **– ಶ್ರೀಮಾತೆ**

*

## ದುರ್ಗುಣದ ಸಾಂಸರ್ಗಿಕತೆಯ ವಿರುದ್ಧ ರಕ್ಷಣೆ ಮಾಡಿಕೊಳ್ಳುವುದು

ಸಾಂಸರ್ಗಿಕ ರೋಗವನ್ನು ಹೊಂದಿರುವ ಯಾರೋ ಒಬ್ಬರ ಸಹವಾಸವನ್ನು ನಾವು ಇಷ್ಟಪಡುವುದಿಲ್ಲ ಮತ್ತು ಕಾಳಜಿಪೂರ್ವಕ ಅವನಿಂದ ದೂರ ಉಳಿದು–ಕೊಳ್ಳುತ್ತೇವೆ. ಸಾಮಾನ್ಯವಾಗಿ ಅಂತಹನನ್ನು ಪ್ರತ್ಯೇಕವಾಗಿ ಇರಿಸಲಾಗಿರುತ್ತದೆ, ಅದರಿಂದಾಗಿ ಆ ರೋಗ ಹರಡದಂತಾಗುತ್ತದೆ. ಆದರೆ ದುರ್ಗುಣದ ಹಾಗೂ ಕೆಟ್ಟ ನಡೆವಳಿಕೆಯ ಸಾಂಸರ್ಗಿಕತೆ, ನೀತಿಭ್ರಷ್ಟತೆಯ, ಮಿಥ್ಯೆಯ ಹಾಗೂ

ಹೇಯವಾದುದರ ಸಾಂಸರ್ಗಿಕತೆ ಯಾವುದೇ ರೋಗದ ಸಾಂಸರ್ಗಿಕತೆಗಿಂತ ಅನಂತಪಟ್ಟು ಅಪಾಯಕಾರಿಯಾದದ್ದು, ಇದನ್ನೇ ಕಾಳಜಿಪೂರ್ವಕ ದೂರವಿರಿಸಬೇಕು. ತಾನು ಯಾವುದೇ ಕೆಟ್ಟ ಇಲ್ಲವೆ ಅವಲಕ್ಷಣದ ಕಾರ್ಯದಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳುವವನು ಮತ್ತು ನಿಮ್ಮ ಪ್ರಲೋಭನೆಗಳನ್ನು ಪ್ರತಿರೋಧಿಸಲು ನಿಮಗೆ ಧೈರ್ಯ ನೀಡುವವನು ನಿಮ್ಮ ಅತ್ಯಂತ ಒಳ್ಳೆಯ ಮಿತ್ರನಾಗಿರುತ್ತಾನೆ. ನೀವು ಅಂತಹನ ಸಹವಾಸದಲ್ಲಿರಬೇಕು, ನಿಮಗೆ ಮೋಜನ್ನು ಒದಗಿಸುವ ಮತ್ತು ನಿಮ್ಮ ಅನಿಷ್ಟ ಪ್ರವೃತ್ತಿಗೆ ಬಲ ನೀಡುವ ಮನುಷ್ಯನ ಸಹವಾಸವನ್ನಲ್ಲ. ಕೈಕೊಳ್ಳುವುದು ಅದಷ್ಟೇ ಆಗಿದೆ. ಈಗ ಆ ವಿಷಯವನ್ನು ಕುರಿತು ಶ್ರಮ ಪಡುವುದು ಬೇಡ. ನನ್ನ ಮನಸ್ಸಿನಲ್ಲಿ ಯಾರನ್ನು ಕುರಿತು ಹೇಳುವುದಿತ್ತೋ ಅವರು ತಿಳಿದುಕೊಳ್ಳುವರೆಂದು ಆಶಿಸುತ್ತೇನೆ. ನಿಜ ಹೇಳುವುದಾದರೆ ನೀವು ನಿಮಗಿಂತ ಜಾಣರಾದವರನ್ನು, ಯಾರ ಜೊತೆಗಿನ ಸಹವಾಸ ನಿಮ್ಮನ್ನು ಉದಾತ್ತರನ್ನಾಗಿ ಮಾಡುತ್ತದೆಯೋ, ನಿಮ್ಮ ಮೇಲೆ ಪ್ರಭುತ್ವ ಪಡೆಯಲು ಸಹಾಯಕವಾಗುತ್ತದೆಯೋ, ಪ್ರಗತಿ ಸಾಧಿಸುವಂತೆ ಮಾಡುತ್ತದೆಯೋ, ಹೆಚ್ಚು ಒಳ್ಳೆಯ ರೀತಿಯಲ್ಲಿ ಕಾರ್ಯ ಕೈಕೊಳ್ಳುವಂತೆ ಮಾಡುತ್ತದೆಯೋ, ಹೆಚ್ಚು ಸ್ಪಷ್ಟವಾಗಿ ನೋಡುವಂತೆ ಮಾಡುತ್ತದೆಯೋ ಅಂತಹರ ಸಹವಾಸವನ್ನು ಆಯ್ದುಕೊಳ್ಳಬೇಕು. ಮತ್ತು ಕೊನೆಯಲ್ಲಿ ಹೇಳುವುದೇನೆಂದರೆ ಮನುಷ್ಯ ಹೊಂದಬಹುದಾದ ಅತ್ಯಂತ ಒಳ್ಳೆಯ ಮಿತ್ರ ಭಗವಂತನಾಗಿರುವುದಿಲ್ಲವೆ? ಅವನ ಬಳಿ ಪ್ರತಿಯೊಂದನ್ನು ಹೇಳಬಹುದು, ಪ್ರತಿಯೊಂದನ್ನು ತೆರೆದು ತೋರಿಸಬಹುದು. ಏಕೆಂದರೆ ಅಲ್ಲಿ ಎಲ್ಲ ಕರುಣೆಯ, ದೋಷವನ್ನು ಮತ್ತೆ ಎಸಗದಿದ್ದರೆ ಅದನ್ನು ತೆಗೆದು ಹಾಕುವ, ನಿಜವಾದ ಸಿದ್ಧಿಗಾಗಿ ಮಾರ್ಗವನ್ನು ತೆರೆದಿರಿಸುವ ಸಾಮರ್ಥ್ಯದ ಮೂಲವಿದೆ, ಅವನು ಎಲ್ಲವನ್ನೂ ತಿಳಿದುಕೊಳ್ಳಬಲ್ಲನು, ಎಲ್ಲರಿಗೂ ಚಿಕಿತ್ಸೆ ಒದಗಿಸಬಲ್ಲನು, ಮಾರ್ಗದ ಮೇಲೆ ಯಾವಾಗಲೂ ಸಹಾಯ ಮಾಡಬಲ್ಲನು, ನೀವು ವಿಫಲಗೊಳ್ಳದಂತೆ ನಿಮಗೆ ಸಹಾಯ ನೀಡಬಲ್ಲನು, ಮುಗ್ಗರಿಸದಂತೆ, ಪತನಗೊಳ್ಳದಂತೆ ಆದರೆ ಗುರಿಯತ್ತ ನೇರವಾಗಿ ಸಾಗುವಂತೆ ಸಹಾಯ ಒದಗಿಸಬಲ್ಲನು. ಒಳ್ಳೆಯ ಹಾಗೂ ಕೆಟ್ಟ ದಿನಗಳಲ್ಲಿ ಅವನು ನಿಜವಾದ ಮಿತ್ರ, ಅರ್ಥ ಮಾಡಿಕೊಳ್ಳಬಲ್ಲವನು, ಚಿಕಿತ್ಸೆ ಒದಗಿಸಬಲ್ಲವನು, ಅವಶ್ಯವೆನಿಸಿದಾಗ ಯಾವಾಗಲೂ ನಿಮ್ಮ ಜೊತೆಗಿರುವವನು ಅವನೇ ಆಗಿರುತ್ತಾನೆ. ಅವನಿಗೆ ನೀವು ನಿಷ್ಕಾಪಟ್ಯದಿಂದ ಕರೆಕೊಟ್ಟಾಗ, ನಿಮಗೆ ಮಾರ್ಗದರ್ಶನ ಮಾಡಲು, ನಿಮ್ಮನ್ನು

ಮೇಲಕ್ಕೆತ್ತಿ ಹಿಡಿಯಲು, ನಿಮ್ಮ ಮೇಲೆ ನಿಜವಾದ ಪ್ರೇಮ ತೋರಿಸಲು ಅವನು ಯಾವಾಗಲೂ ಅಲ್ಲಿರುತ್ತಾನೆ.

**CWM, 9/57** **– ಶ್ರೀಮಾತೆ**

*

**ಸರಿಯಾದ ಮನೋಭಾವದ ಸಾಮರ್ಥ್ಯ**

ಸಂಭವಿಸಲಿರುವ ಪರಿಸ್ಥಿತಿಗಳ ಸಮ್ಮುಖದಲ್ಲಿ, ಸಾಧ್ಯವಾಗಬಹುದಾದ ಅತ್ಯುಚ್ಚ ಮನೋಭಾವ ಹೊಂದಬಲ್ಲಿರಾದರೆ – ಎಂದರೆ ನಿಮ್ಮ ಪ್ರಜ್ಞೆಯನ್ನು ತಲುಪಬಹುದಾದ ಅತ್ಯುಚ್ಚ ಪ್ರಜ್ಞೆಯ ಸಂಪರ್ಕದಲ್ಲಿ ಇರಿಸಬಲ್ಲಿರಾದರೆ, ಆ ಸಂದರ್ಭದಲ್ಲಿ ಅತ್ಯಂತ ಒಳ್ಳೆಯದು ಸಂಭವಿಸುವುದು ಎಂಬುದರ ಬಗ್ಗೆ ನೀವು ನಿಶ್ಚಿತತೆ ಹೊಂದಿರಬಹುದು. ಈ ಪ್ರಜ್ಞೆ ನಿಮ್ನತರ ಸ್ಥಿತಿಯತ್ತ ಪತನಗೊಂಡರೆ, ಆಗ ಸ್ಪಷ್ಟವಾಗಿ ಸಂಭವಿಸುವುದು ಅತ್ಯಂತ ಒಳ್ಳೆಯದಾಗಿರುವುದಿಲ್ಲ, ಅದಕ್ಕೆ ಸರಳ ಕಾರಣವೆಂದರೆ ನೀವು ನಿಮ್ಮ ಅತ್ಯುಚ್ಚ ಪ್ರಜ್ಞೆಯಲ್ಲಿರುವುದಿಲ್ಲ. ನಾನು ಇನ್ನೂ ಮುಂದೆ ಹೋಗಿ ದೃಢೀಕರಿಸುವುದೇನೆಂದರೆ, ಪ್ರತಿಯೊಬ್ಬನ ಪ್ರಭಾವದ ಅತಿ ಹತ್ತಿರದ ವಲಯದಲ್ಲಿ ಇರುವ ಸರಿಯಾದ ಮನೋಭಾವ ಪ್ರತಿಯೊಂದು ಪರಿಸ್ಥಿತಿಯನ್ನು ಅನುಕೂಲಕರವಾಗುವಂತೆ ಹೊರಳಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆಯಷ್ಟೇ ಅಲ್ಲ, ಅದು ಪರಿಸ್ಥಿತಿಯನ್ನೇ ಬದಲಾಯಿಸಬಲ್ಲದು. ಉದಾಹರಣೆಗೆ ಮನುಷ್ಯನೊಬ್ಬ ನಿಮ್ಮನ್ನು ಹತ್ಯೆ ಮಾಡಲು ಬಂದಾಗ, ನೀವು ಸರ್ವಸಾಧಾರಣ ಪ್ರಜ್ಞೆಯಲ್ಲಿ ಉಳಿದುಕೊಂಡರೆ ಮತ್ತು ಬುದ್ಧಿಕೆಟ್ಟು ಹೆದರಿಕೊಂಡರೆ, ಅವನು ಬಹುಶಃ ತಾನು ಕೈಕೊಳ್ಳಲು ಬಂದಿದ್ದ ಕಾರ್ಯದಲ್ಲಿ ಯಶಸ್ವಿಯಾಗಬಹುದು. ಪ್ರಜ್ಞೆಯಲ್ಲಿ ನೀವು ಸ್ವಲ್ಪ ಉಚ್ಚಮಟ್ಟಕ್ಕೇರಿದರೆ, ಭಯಪಟ್ಟುಕೊಂಡಾಗಲೂ, ದೈವೀ ಸಹಾಯಕ್ಕಾಗಿ ಕರೆ ಕೊಟ್ಟರೆ, ಅವನಿಂದ ತಪ್ಪಿಸಿಕೊಳ್ಳಬಹುದು, ಅವನು ನಿಮಗೆ ಅಲ್ಪ ಸ್ವಲ್ಪ ಗಾಯಗಳನ್ನು ಮಾಡಬಹುದು. ಆದಾಗ್ಯೂ ನಿಮ್ಮಲ್ಲಿ ಸರಿಯಾದ ಮನೋಭಾವವಿದ್ದರೆ, ನಿಮ್ಮ ಸುತ್ತ ಎಲ್ಲೆಡೆಯಲ್ಲಿ ದೈವೀ ಸಾನ್ನಿಧ್ಯವಿರುವುದರ ಬಗ್ಗೆ ಪೂರ್ಣಪ್ರಜ್ಞೆಯಿದ್ದರೆ ಅವನು ನಿಮ್ಮ ವಿರುದ್ಧ ಒಂದು ಬೆರಳನ್ನೂ ಕೂಡ ಎತ್ತಲಾರ. ಈ ಸತ್ಯ, ಪರಿವರ್ತನೆಯ ಇಡೀ ಸಮಸ್ಯೆಗೆ ಯೋಗ್ಯವಾದ ಬೀಗದ ಕೈಯಾಗಿರುತ್ತದೆ. ಯಾವಾಗಲೂ ದೈವೀ ಸಾನ್ನಿಧ್ಯದ ಸ್ಪರ್ಶವನ್ನು ಕಾಪಾಡಿಕೊಂಡು ಬರಬೇಕು, ಅದನ್ನು ಕೆಳಗಿಳಿಸಿ ತರಲು ಪ್ರಯತ್ನಿಸಬೇಕು – ಅತ್ಯಂತ ಒಳ್ಳೆಯದು, ಯಾವಾಗಲೂ ಸಂಭವಿಸುತ್ತದೆ.

ಸಹಜವಾಗಿ ಜಗತ್ತು ಒಮ್ಮೆಗೆ ಬದಲಾಗುವುದಿಲ್ಲ, ಆದರೆ ಸಾಧ್ಯವಿದ್ದಷ್ಟು ತೀವ್ರಗತಿಯಿಂದ ಅದು ಮುಂದೆ ಸಾಗುತ್ತದೆ. ಇದು ಹಾಗಿರುವುದು ನೀವು ಯೋಗದ ನೇರವಾದ ಮಾರ್ಗದಲ್ಲಿ ಇದ್ದಾಗ ಮಾತ್ರ, ನೀವು ಹೊರಳಿಕೊಂಡು ನಿಮ್ಮ ಮಾರ್ಗನ್ನು ಕಳೆದುಕೊಂಡಾಗ ಮತ್ತು ಯಾರೂ ಕಾಲಿರಿಸಿರದ ಅರಣ್ಯದಲ್ಲಿ ಅಚಂಚಲತೆಯಿಲ್ಲದೆ ಇಲ್ಲವೆ ಅಸಹಾಯಕರಾಗಿ ಅಲೆದಾಡುತ್ತಿದ್ದಾಗ ಅಲ್ಲ ಎಂಬುದನ್ನು ನೀವು ಮರೆಯಬಾರದು.

**CWM, 3/154** **– ಶ್ರೀಮಾತೆ**

*

## ರಕ್ಷಣೆಗಾಗಿ ಆಧ್ಯಾತ್ಮಿಕ ಹಾಗೂ ರಹಸ್ಯ ಸಾಧನಗಳು

### ವಿಶೇಷ ರಕ್ಷಣೆ ಇರುವುದು ಮತ್ತು ರಕ್ಷಣೆಯಿಂದ ಹೊರಗೆ ಹೊರಟು ಹೋಗುವುದು

"ರಕ್ಷಣೆಯಡಿಯಲ್ಲಿ ಇರುವುದು" ಎಂದರೆ ಏನು ಎಂಬುದನ್ನು ನೀವು ಸರಿಯಾಗಿ ಅರ್ಥ ಮಾಡಿಕೊಂಡಿರುವಿರಿ ಅಲ್ಲವೆ? "ರಕ್ಷಣೆಯಿಂದ ಹೊರಗೆ ಹೊರಟು ಹೋಗುವುದೆಂದರೇನು" ಎಂಬುದನ್ನೂ ನೀವು ಅರ್ಥಮಾಡಿ–ಕೊಂಡಿರುವಿರಿ. ನೀವು ಭಗವಂತನ ರಕ್ಷಣೆಯಡಿಯಲ್ಲಿ ಇರುವಾಗ ಅದಕ್ಕೆ ತದ್ವಿರುದ್ಧವಾದ ಏನೋ ಒಂದನ್ನು ಕೈಕೊಂಡರೆ, ಉದಾಹರಣೆಗೆ ಒಂದು ಕ್ಷಣಕಾಲ ಸಂಶಯದ ಇಲ್ಲವೆ ದುಷ್ಟ ಸಂಕಲ್ಪದ, ಇಲ್ಲವೆ ಬಂಡಾಯದ ಯೋಚನೆ ನಿಮ್ಮಲ್ಲಿದ್ದರೆ ನೀವು ಕೂಡಲೆ ಆ ರಕ್ಷಣೆಯಿಂದ ಹೊರಗೆ ಹೋಗಿ ಬಿಡುತ್ತೀರಿ. ವಿರೋಧೀ ಶಕ್ತಿಗಳು ನಿಮ್ಮ ಮೇಲೆ ಎರಗಿ ಬರುವುದನ್ನು, ಇಲ್ಲವೆ ಅಪಘಾತವೊಂದು ಸಂಭವಿಸುವುದನ್ನು ತಡೆಯಲು ರಕ್ಷಣೆ ನಿಮ್ಮ ಸುತ್ತ ಕಾರ್ಯಕೈಕೊಳ್ಳುತ್ತದೆ, ಎಂದರೆ ನೀವು ಪ್ರಜ್ಞೆಯನ್ನು ಕಳಕೊಂಡಾಗಲೂ ಹಾಗಾಗುತ್ತದೆ, ಏಕೆಂದರೆ ನಿಮ್ಮಲ್ಲಿ ಪ್ರಜ್ಞೆಯ ಕೊರತೆ ಉಂಟಾದಾಗಲೂ ಕೆಟ್ಟ ಪರಿಣಾಮವನ್ನು ಕೂಡಲೆ ಉತ್ಪಾದಿಸುವುದಿಲ್ಲ. ನೀವು ರಕ್ಷಣೆಯ ಹೊರಗೆ ಹೋಗಿ ಬಿಟ್ಟರೆ ಮತ್ತು ಎಲ್ಲ ಕಾಲದಲ್ಲಿ ಜಾಗರೂಕರಾಗಿರದಿದ್ದರೆ, ಆಗ ವಿರೋಧೀ ಶಕ್ತಿಗಳ ಆಕ್ರಮಣಕ್ಕೊಳಗಾಗುತ್ತೀರಿ ಇಲ್ಲವೆ ಅಪಘಾತವೊಂದು ಸಂಭವಿಸುತ್ತದೆ.

**ಪ್ರಶ್ನೆ :** *ಪ್ರಜ್ಞಾಪೂರ್ಣರಾಗಿರದೆ ಇದ್ದವರ ಗತಿಯೇನು?*

**ಶ್ರೀಮಾತೆ :** ಪ್ರಜ್ಞಾಪೂರ್ಣರಾಗಿರದ ಜನರೇ? ಆದರೆ ಅಲ್ಲಿಯೂ ಕೂಡ ನಾನು ಸಾಮಾನ್ಯ ಜನರನ್ನು ಕುರಿತು ಮಾತನಾಡುತ್ತಿಲ್ಲ ಎಂದು ಹೇಳಿದ್ದೆ. ಅಂತಹರು

ವಿಶೇಷ ರಕ್ಷಣೆಯಡಿಯಲ್ಲಿರುವುದಿಲ್ಲ. ಸಾಮಾನ್ಯ ಜನರು ಸಾಮಾನ್ಯ ಪರಿಸ್ಥಿತಿಗಳಡಿಯಲ್ಲಿ ಇರುತ್ತಾರೆ. ಅವರ ಮೇಲೆ ಜಾಗರೂಕ ಕಾವಲಿರಿಸುವ ವಿಶೇಷ ರಕ್ಷಣೆ ಇರುವುದಿಲ್ಲ. ನಾನು ಇದನ್ನೆಲ್ಲ ಅವರಿಗಾಗಿ ಹೇಳುತ್ತಿಲ್ಲ. ಅವರು ಜೀವನದ ಸಾಮಾನ್ಯ ನಿಯಮಗಳನ್ನು ಅನುಸರಿಸುತ್ತಾರೆ, ಮತ್ತು ನೀವು ಅವರಿಗೆ ಅದೇ ರೀತಿಯಲ್ಲಿ ವಿವರಿಸಿ ಹೇಳಲಾಗುವುದಿಲ್ಲ. ನೀನು ಎಲ್ಲರನ್ನೂ ಕುರಿತು ಯೋಚಿಸುತ್ತಿದ್ದೀ, ಅದು ಎಲ್ಲರಿಗೂ ಅದೇ ರೀತಿಯದು ಎಂದುಕೊಳ್ಳುತ್ತಿದ್ದೀ. ಅದು ಯೋಗವನ್ನು ಆಚರಿಸುವವರಿಗೆ ಮಾತ್ರ, ಪ್ರತಿಯೊಬ್ಬನಿಗಾಗಿ ಅಲ್ಲ.

**CWM, 5/165** **– ಶ್ರೀಮಾತೆ**

*

**ದೂರದಲ್ಲಿದ್ದವರಿಗೆ ಸಹಾಯ ಸಲ್ಲಿಸುವುದು**

ನಾನು ಈಗಾಗಲೆ ಹಲವಾರು ಸಲ ನಿಮಗೆ ಹೇಳಿದ್ದೇನೆ: ಮನುಷ್ಯ ಸ್ಪಷ್ಟವಾಗಿ ಮತ್ತು ಸಾಮರ್ಥ್ಯಪೂರ್ಣವಾಗಿ ಯೋಚಿಸಿದರೆ ಅವನು ಮಾನಸಿಕ ರಚನೆಯೊಂದನ್ನು ಮಾಡುತ್ತಾನೆ, ಮತ್ತು ಪ್ರತಿಯೊಂದು ಮಾನಸಿಕ ರಚನೆ ಅದರ ತಯಾರಕನಿಂದ ಸ್ವತಂತ್ರವಾಗಿರುವ ಅಸ್ತಿತ್ವವಾಗಿರುತ್ತದೆ, ಅದು ತನ್ನದೇ ಜೀವನವನ್ನು ಹೊಂದಿದ್ದು ಮಾನಸಿಕ ಲೋಕದಲ್ಲಿ ತನ್ನನ್ನು ಸಿದ್ಧಿಸಿಕೊಳ್ಳುವ ಪ್ರವೃತ್ತಿ ಹೊಂದಿರುತ್ತದೆ. ನೀವು ನಿಮ್ಮ ರಚನೆಯನ್ನು ಭೌತಿಕ ಕಣ್ಣುಗಳಿಂದ ನೋಡುತ್ತೀರಿ ಎಂಬ ಅರ್ಥದಲ್ಲಿ ನಾನು ಹೇಳುತ್ತಿಲ್ಲ, ಆದರೆ ಅದು ಮಾನಸಿಕ ಜಗತ್ತಿನಲ್ಲಿ ಅಸ್ತಿತ್ವದಲ್ಲಿರುತ್ತದೆ, ಅದಕ್ಕೆ ಅದರದೇ ವಿಶಿಷ್ಟ ಅಸ್ತಿತ್ವವಿರುತ್ತದೆ. ನೀವು ನಿರ್ದಿಷ್ಟ ಗುರಿಯನ್ನಿಟ್ಟುಕೊಂಡು ಒಂದು ರಚನೆ ಮಾಡಿದ್ದರೆ, ಅದರ ಇಡೀ ಜೀವನ ಆ ಗುರಿಯನ್ನು ಸಿದ್ಧಿಸಿಕೊಳ್ಳುವ ಪ್ರವೃತ್ತಿಯನ್ನು ಹೊಂದಿರುತ್ತದೆ. ಆದ್ದರಿಂದ ದೂರದಲ್ಲಿರುವ ಯಾರೋ ಒಬ್ಬರಿಗೆ ಸಹಾಯ ಮಾಡಬೇಕೆಂದು ಬಯಸಿದರೆ, ನೀವು ಕೇವಲ ಬಹಳ ಸ್ಪಷ್ಟವಾಗಿ, ಬಹಳ ನಿಖರವಾಗಿ ಮತ್ತು ಬಲವತ್ತರವಾಗಿ ನೀವು ಕೊಡಲು ಬಯಸುವ ಸಹಾಯದ ಹಾಗೂ ಅದರಿಂದ ನೀವು ದೊರಕಿಸಲು ಬಯಸುವ ಪರಿಣಾಮದ ರೂಪ ರಚನೆಯನ್ನು ಮಾಡಬೇಕು. ಅದರ ಪರಿಣಾಮ ಉಂಟಾಗುವುದು. ಅದು ಸರ್ವಸಾಮರ್ಥ್ಯವುಳ್ಳದ್ದಾಗುತ್ತದೆ ಎಂದು ನಾನು ಹೇಳಲಾರೆ, ಏಕೆಂದರೆ ಮಾನಸಿಕ ಜಗತ್ತು ಈ ಬಗೆಯ ಅಸಂಖ್ಯಾತ ರಚನೆಗಳಿಂದ ತುಂಬಿಕೊಂಡಿದೆ ಮತ್ತು ಸ್ವಾಭಾವಿಕವಾಗಿ ಅವುಗಳಲ್ಲಿ ಒಂದು ಇನ್ನೊಂದರೊಡನೆ ಹೋರಾಡುತ್ತದೆ ಇಲ್ಲವೆ ಒಂದು ಇನ್ನೊಂದನ್ನು

ಅಲ್ಲಗಳೆಯುತ್ತದೆ, ಹಾಗಾಗಿ ಅತಿ ಬಲಿಷ್ಠವಾದದ್ದು, ಅತ್ಯಂತ ಹೆಚ್ಚಿನ ರೀತಿಯಲ್ಲಿ ಪಟ್ಟುಹಿಡಿಯುವಂತಹದು ಅತ್ಯಂತ ಒಳ್ಳೆಯದನ್ನು ದೊರಕಿಸುವುದು. ಮಾನಸಿಕ ರಚನೆಗಳಿಗೆ ಯಾವುದು ಬಲವನ್ನು ಮತ್ತು ಪಟ್ಟುಹಿಡಿಯುವಿಕೆಯನ್ನು ತಂದುಕೊಡುತ್ತದೆ? ಭಾವನಾತ್ಮಕ ಮನೋವೃತ್ತಿ, ಒಲವು, ಕೋಮಲತೆ, ಪ್ರೇಮ ಹಾಗೂ ಸಂಕಲ್ಪದ ಗಾಢತೆ, ಕ್ರಿಯಾಶೀಲತೆ ಇವೆಲ್ಲವುಗಳನ್ನು ಮಾನಸಿಕ ರಚನೆಗೆ ಅಧಿಕವಾಗಿ ಇರಿಸಿದರೆ ಆಗ ಅದು ಯಶಸ್ವಿಯಾಗುವ ಅವಕಾಶ ಬಹಳ ಹೆಚ್ಚಾಗಿರುತ್ತದೆ. ಅದು ಮೊದಲನೆಯ ವಿಧಾನ. ಹೇಗೆ ಯೋಚಿಸಬೇಕು ಹಾಗೂ ಅದಕ್ಕಿಂತಲೂ ಹೆಚ್ಚಾಗಿ ಪ್ರೇಮವನ್ನು ಹೇಗೆ ವ್ಯಕ್ತಪಡಿಸಬೇಕು ಎಂಬುದನ್ನು ತಿಳಿದುಕೊಂಡವರ ವ್ಯಾಪ್ತಿಯಲ್ಲಿ ಅದಿರುತ್ತದೆ. ಆದರೆ ನಾನು ಹೇಳಿದ ಹಾಗೆ ಆ ಸಾಮರ್ಥ್ಯ ಸೀಮಿತವಾಗಿರುತ್ತದೆ ಮತ್ತು ಜಗತ್ತಿನಲ್ಲಿ ಸ್ಪರ್ಧೆ ಹೆಚ್ಚಿನ ರೀತಿಯಲ್ಲಿದೆ.

ಹಾಗಾಗಿ ಮನುಷ್ಯನಲ್ಲಿ ಎಳ್ಳಷ್ಟೂ ಜ್ಞಾನವಿಲ್ಲದೆ ಹೋದಾಗಲೂ ಕೂಡ ದೈವೀ ಕೃಪೆಯಲ್ಲಿ ವಿಶ್ವಾಸವಿದ್ದಾಗ, ಜಗತ್ತಿನಲ್ಲಿ ದೈವೀ ಕೃಪೆಯಂತಹ ಏನೋ ಒಂದಿದೆ, ಮತ್ತು ಈ ಏನೋ ಒಂದು ಪ್ರಾರ್ಥನೆಗೆ, ಅಭೀಪ್ಸೆಗೆ, ಆವಾಹನೆಗೆ ಉತ್ತರ ನೀಡುತ್ತದೆ ಎಂಬ ನಂಬಿಕೆ ಇದ್ದಾಗ ಮಾನಸಿಕ ರಚನೆಯೊಂದನ್ನು ಮಾಡಿ ಮನುಷ್ಯ ದೈವೀ ಕೃಪೆಗೆ ಅರ್ಪಿಸಿದರೆ ಮತ್ತು ಅದರಲ್ಲಿ ತನ್ನ ವಿಶ್ವಾಸವನ್ನಿರಿಸಿದರೆ ಮತ್ತು ದೈವೀ ಕೃಪೆಗೆ ಮಧ್ಯಸ್ಥಿಕೆ ವಹಿಸಲು ಕೇಳಿಕೊಂಡರೆ ಮತ್ತು ಅದು ಮಧ್ಯಸ್ಥಿಕೆ ವಹಿಸುತ್ತದೆ ಎಂಬ ನಂಬಿಕೆ ಇದ್ದರೆ, ಆಗ ನಿಜವಾಗಿ ಮನುಷ್ಯನಿಗೆ ಯಶಸ್ಸು ಪಡೆಯುವ ಅವಕಾಶವಿರುತ್ತದೆ

**CWM, 8/253** **– ಶ್ರೀಮಾತೆ**

*

**ಅಜೇಯವಾಗಿರುವ ಸ್ಥಿತಿಯನ್ನು ದೊರಕಿಸಬೇಕು**

ತಪ್ಪು ಮಾರ್ಗದರ್ಶನಕ್ಕೊಳಗಾದ, ವಿಕೃತಗೊಂಡ ರಹಸ್ಯ ಜ್ಞಾನವಿದೆ, ಅದನ್ನು ಮಾಟ (black magic) ಎಂದು ಕರೆಯುತ್ತಾರೆ, ಮನುಷ್ಯ ಅದನ್ನು ಎಂದಿಗೂ ಸ್ಪರ್ಶಿಸಬಾರದು. ಆದರೆ ದುರ್ದೈವವಶಾತ್ ಅದನ್ನು ಕೇವಲ ದುಷ್ಟತನದಿಂದ ಸ್ಪರ್ಶಿಸುವ ಜನರಿದ್ದಾರೆ. ಅದು ಭ್ರಮೆಯೆಂದು ಇಲ್ಲವೆ ಮೂಢನಂಬಿಕೆಯೆಂದು ನಂಬಬಾರದು, ಅದು ನಿಜವಾಗಿರುತ್ತದೆ. ಮಾಟವನ್ನು ಹೇಗೆ ಮಾಡಬೇಕೆಂದು ಎಂಬುದನ್ನು ತಿಳಿದುಕೊಂಡ ಜನರಿರುತ್ತಾರೆ, ಹಾಗೂ

ಅವರು ಮಾಟ ಮಾಡುತ್ತಾರೆ, ಮತ್ತು ಅವರ ಮಾಟದ ಮೂಲಕ ಒಟ್ಟಿನಲ್ಲಿ ಅಸಹ್ಯವಾದ ಪರಿಣಾಮಗಳನ್ನು ದೊರಕಿಸುತ್ತಾರೆ. ಸಹಜವಾಗಿ, ನಿಮ್ಮಲ್ಲಿ ಭಯ ಇಲ್ಲದೇ ಇದ್ದಾಗ ಮತ್ತು ನೀವು ರಕ್ಷಣೆಯಲ್ಲಿ ಉಳಿದುಕೊಂಡಾಗ ಸುರಕ್ಷಿತರಾಗಿರುತ್ತೀರಿ ಎಂಬುದು ನಿಮಗೆ ತಿಳಿದ ವಿಷಯ. ಆದರೆ ಅಲ್ಲಿ 'ಯಾವಾಗ' ಎಂಬುದಿದೆ, ಒಂದು ನಿಬಂಧನೆಯಿದೆ, ಮತ್ತು ಆ ನಿಬಂಧನೆಯನ್ನು ಯಾವಾಗಲೂ ಪೂರೈಸದೆ ಇದ್ದಾಗ ಬಹಳ ಅಸಂತೋಷಕರ ಸಂಗತಿಗಳು ಸಂಭವಿಸುತ್ತವೆ. ನೀವು ಬಲ ಹಾಗೂ ಪರಿಶುದ್ಧತೆ ಇವುಗಳಿಂದ ತುಂಬಿಕೊಂಡಿರುವ ಸ್ಥಿತಿಯಲ್ಲಿ ಇರುವವರೆಗೆ – ಎಂದರೆ ಅಜೇಯ ಸ್ಥಿತಿಯಲ್ಲಿ ಇರುವವರೆಗೆ ಯಾರಾದರೂ ನಿಮ್ಮ ವಿರುದ್ಧ ಏನನ್ನಾದರೂ ಕೈಕೊಂಡರೆ, ಅದು ಸ್ವಯಂಚಾಲಿತವಾಗಿ ಅವನ ಮೇಲೆ ತಿರುಗಿ ಬೀಳುತ್ತದೆ, ಅದು ನೀವು ಟೆನ್ನಿಸ್ ಚೆಂಡನ್ನು ಗೋಡೆಗೆ ಎಸೆದಾಗ ಅದು ನಿಮ್ಮೆಡೆಗೆ ಮರಳಿ ಬರುವ ರೀತಿಯದಾಗಿರುತ್ತದೆ, ಆ ವಿಷಯ ಅವರೆಡೆಗೆ ನಿಖರವಾಗಿ ಅದೇ ರೀತಿಯಲ್ಲಿ ತಿರುಗಿ ಹೋಗುತ್ತದೆ, ಕೆಲವೊಮ್ಮೆ ಇನ್ನೂ ಹೆಚ್ಚಿನ ಶಕ್ತಿಯೊಂದಿಗೆ ತಿರುಗಿ ಹೋಗುತ್ತದೆ, ತಮ್ಮದೇ ದುಷ್ಟತನದಿಂದ ಅವರು ಶಿಕ್ಷೆಗೊಳಗಾಗುತ್ತಾರೆ. ಆದರೆ ಸ್ವಾಭಾವಿಕವಾಗಿ ಅದೆಲ್ಲ ಯಾವ ವ್ಯಕ್ತಿಯ ವಿರುದ್ಧ ಮಾಟ ಕೈಕೊಳ್ಳಲಾಗಿರುತ್ತದೆ ಎಂಬುದರ ಮೇಲೆ, ಅವನ ಆಂತರಿಕ ಶಕ್ತಿ ಹಾಗೂ ಪರಿಶುದ್ಧತೆಯ ಮೇಲೆ ಅವಲಂಬಿಸಿರುತ್ತದೆ. ನಾನು ಇಂತಹ ವಿಷಯಗಳನ್ನು ಹಲವಾರು ಸಂದರ್ಭಗಳಲ್ಲಿ ನೋಡಿದ್ದೇನೆ. ಇಂತಹ ಸಂದರ್ಭದಲ್ಲಿ ಪ್ರತಿರೋಧ ಮಾಡಲು ಮನುಷ್ಯ, ನಾನು ಹೇಳಿದ ಹಾಗೆ, ಪ್ರಾಣಿಕದಲ್ಲಿ ಯೋಧನಾಗಿರಬೇಕು, ಎಂದರೆ ಪ್ರಾಣಿಕದಲ್ಲಿ ಆಧ್ಯಾತ್ಮಿಕ ಹೋರಾಟಗಾರನಾಗಿರಬೇಕು. ಯೋಗಾಚರಣೆ ಮಾಡುವವರೆಲ್ಲರೂ ಅದಾಗಬೇಕು, ಆಗ ಅವರಿಗೆ ರಕ್ಷಣೆ ದೊರೆತಿರುತ್ತದೆ. ಅದಾಗಲು ಇರುವ ಒಂದು ನಿಬಂಧನೆ ಎಂದರೆ ಇತರರ ವಿರುದ್ಧ ಕೆಟ್ಟ ಯೋಚನೆ ಇಲ್ಲವೆ ಕೆಟ್ಟ ಸಂಕಲ್ಪ ಇಲ್ಲದೆ ಇರುವುದಾಗಿದೆ, ಏಕೆಂದರೆ ನಿಮ್ಮಲ್ಲಿ ಕೆಟ್ಟ ಭಾವನೆ, ಇಲ್ಲವೆ ಕೆಟ್ಟ ಯೋಚನೆ ಇಲ್ಲವೆ ದುಷ್ಟ ಸಂಕಲ್ಪ ಇದ್ದರೆ ನೀವು ಅವರ ಮಟ್ಟಕ್ಕೆ ಕೆಳಗಿಳಿದು ಬರುತ್ತೀರಿ ಮತ್ತು ನೀವು ಅವರ ಮಟ್ಟದಲ್ಲಿಯೇ ಇದ್ದಾಗ, ಸರಿ, ನೀವು ಅವರಿಂದ ಹೊಡೆತಗಳನ್ನು ಪಡೆಯಬಹುದು.

**CWM, 5/178–79** **– ಶ್ರೀಮಾತೆ**

*

**ಶಕ್ತಿಗಳ ಬ್ಯಾಟರಿ ಹಾಗಿರುವ ಹರಳುಗಳು**

ಹರಳು ಶಕ್ತಿಯನ್ನು ಅನಿರ್ದಿಷ್ಟ ಕಾಲದವರೆಗೆ ರಕ್ಷಿಸಿಕೊಂಡು ಬರಬಲ್ಲದು.

ಕೊಂಡಿಯ ಹಾಗೆ ಸೇವೆ ಸಲ್ಲಿಸುವ ಹರಳುಗಳಿವೆ, ಬ್ಯಾಟರಿಯ ಹಾಗಿರುವ ಹರಳುಗಳಿವೆ. ರಕ್ಷಣೆಗಾಗಿ ಶಕ್ತಿಯೊಂದನ್ನು ಹಿಡಿದಿಟ್ಟುಕೊಳ್ಳಬಲ್ಲ ಹರಳುಗಳಿವೆ. ನನ್ನ ಮಗು, ಅದು ನಿಜವಾಗಿ ಗಮನಾರ್ಹವಾದದ್ದು. ಮನುಷ್ಯ ಹರಳಿನಲ್ಲಿ ರಕ್ಷಣೆಯ ಶಕ್ತಿಯನ್ನು (ವಿಶೇಷವಾಗಿ ಪದ್ಮರಾಗ ಎಂಬ ಹರಳಿನಲ್ಲಿ) ಸಂಗ್ರಹಿಸಿ ಇಟ್ಟುಕೊಳ್ಳಬಹುದು, ಮತ್ತು ಆ ಶಕ್ತಿ ಅದನ್ನು ಧರಿಸಿದ ಮನುಷ್ಯನನ್ನು ರಕ್ಷಿಸುತ್ತದೆ. ಅದು ಬಹಳ ಸ್ವಾರಸ್ಯಕರವಾದದ್ದು. ನಾನು ಆ ಅನುಭವವನ್ನು ಪಡೆದಿದ್ದೇನೆ. ಈ ಬಗೆಯ ಹರಳನ್ನು ಹೊಂದಿದ ವ್ಯಕ್ತಿಯೊಬ್ಬನ ಪರಿಚಯ ನನಗಿತ್ತು, ಅದು ರಕ್ಷಣೆಯನ್ನು ತುಂಬಿಕೊಂಡಿತ್ತು (charged). ಅವನು ಅದನ್ನು ಧರಿಸಿದಾಗ ಅದು ಅದ್ಭುತವಾಗಿರುತ್ತಿತ್ತು. ಘಟನೆಗಳನ್ನು ಕುರಿತು ಭವಿಷ್ಯ ನುಡಿಯಲು ಉಪಯೋಗಿಸಬಹುದಾದ ಹರಳುಗಳಿವೆ. ಸಂಭವಿಸಲಿರುವ ಘಟನೆಗಳ ಭವಿಷ್ಯವನ್ನು ಈ ಹರಳುಗಳಲ್ಲಿ ಹೇಗೆ ಓದಬೇಕೆಂದು ತಿಳಿದುಕೊಂಡ ಜನರಿರುತ್ತಾರೆ. ಹರಳುಗಳು ಸಂದೇಶಗಳನ್ನು ಕೊಂಡೊಯ್ಯಬಲ್ಲವು. ಸ್ವಾಭಾವಿಕವಾಗಿ ಎರಡೂ ಬದಿಗಳಲ್ಲಿ ಜಾಣ್ಮೆ ಇರಬೇಕಾಗುತ್ತದೆ; ಒಂದೆಡೆಗೆ ಏಕಾಗ್ರತೆಯ ಸಾಕಷ್ಟು ಬಲವತ್ತರವಾದ ಸಾಮರ್ಥ್ಯವಿರಬೇಕಾಗುತ್ತದೆ, ಇನ್ನೊಂದೆಡೆಗೆ, ನಿಖರವಾದ ಶಬ್ದಗಳನ್ನು ಉಪಯೋಗಿಸದೆ, ನೇರವಾಗಿ ನೋಡಲು ಹಾಗೂ ಓದಲು ಸಾಮರ್ಥ್ಯವಿರಬೇಕಾಗುತ್ತದೆ. ಅವು ಬ್ಯಾಟರಿಗಳ ಹಾಗೆ ಸೇವೆ ಸಲ್ಲಿಸುವುದರಿಂದ ಅದರರ್ಥ ಅವು ತಮ್ಮಲ್ಲಿ ಆ ಶಕ್ತಿಯ ಮೂಲವನ್ನೇ ಕೊಂಡೊಯ್ಯುತ್ತವೆ ಎಂದಾಗುತ್ತದೆ, ಹಾಗಿಲ್ಲದಿದ್ದರೆ ಅವುಗಳಿಗೆ ಗ್ರಹಿಸಲು ಸಾಧ್ಯವಾಗುತ್ತಿರಲಿಲ್ಲ. ಸ್ಫಟಿಕೀಕರಣಗಳ ಮೂಲದಲ್ಲಿ ಈ ಬಗೆಯ ಶಕ್ತಿ ಇರುತ್ತದೆ, ಉದಾಹರಣೆಗೆ ಶಿಲಾಸ್ಫಟಿಕಗಳು. ಅವು ಅದೆಂತಹ ಭವ್ಯ, ಅತ್ಯುತ್ತಮ ನಮೂನೆಗಳದಾಗಿರುತ್ತವೆ, ಅವುಗಳಲ್ಲಿ ಸಂಪೂರ್ಣ ಸಾಮರಸ್ಯವಿರುತ್ತದೆ, ಮತ್ತು ಅದು ಕೇವಲ ಕೇಂದ್ರದಲ್ಲಿರುವ ಈ ದೈವೀ ಸಾನ್ನಿಧ್ಯದಿಂದ ಬರುತ್ತದೆ. ಮನುಷ್ಯ ಅದನ್ನು ನೋಡುವುದಿಲ್ಲ, ಏಕೆಂದರೆ ಅವನಲ್ಲಿ ಆಂತರಿಕ ಸಂವೇದನ ಶಕ್ತಿ–ಸಾಮರ್ಥ್ಯವಿರುವುದಿಲ್ಲ. ಆದರೆ ಒಮ್ಮೆ ವಸ್ತು–ವಿಷಯಗಳ ಹಿಂದಿರುವ ಪ್ರೇಮದ ಶಕ್ತಿಗಳ ಬಗ್ಗೆ ನೇರವಾದ ಗ್ರಹಿಕೆ ಉಂಟಾದಾಗ, ಅವು ಎಲ್ಲೆಡೆಯಲ್ಲಿ ಅದೇ

ಆಗಿರುವುದನ್ನು ನೋಡುತ್ತಾನೆ. ರಚನೆಗೊಂಡ ವಸ್ತುಗಳಲ್ಲಿಯೂ ಕೂಡ ಅವು ಏನು ಹೇಳುತ್ತವೆ ಎಂಬುದನ್ನು ಮನುಷ್ಯ ತಿಳಿದುಕೊಳ್ಳುವತ್ತ ಬರಬಲ್ಲನು.

**CWM, 5/229** – ಶ್ರೀಮಾತೆ

*

**ಮೃತ್ಯುವಿನ ನಂತರ ಸಾಗಿ ಹೋಗುವಾಗಿನ ಸಮಯದಲ್ಲಿ ರಕ್ಷಣೆ**

ಸಾಮಾನ್ಯವಾಗಿ 'ಮೃತ್ಯುವಿನ ಕ್ಷೇತ್ರ' ಎಂಬ ಹೆಸರನ್ನು ಅತ್ಯಂತ ಭೌತಿಕವಾದ ಪ್ರಾಣಿಕದ ವಿಶಿಷ್ಟ ಪ್ರಾಂತಕ್ಕೆ ಕೊಡಲಾಗಿದೆ, ಮನುಷ್ಯ ದೇಹವನ್ನು ತ್ಯಜಿಸಿ ಹೋಗುವಾಗ ಅವನನ್ನು ಆ ಪ್ರಾಂತದಲ್ಲಿ ಪ್ರಕ್ಷೇಪಿಸಲಾಗುತ್ತದೆ. ಮನುಷ್ಯನ ಜೀವನದ ಆ ಭಾಗ – ಅದನ್ನು ಹೇಳುವುದು ಹೇಗೆ? – ಸಾಮಾನ್ಯವಾಗಿ ಅತ್ಯಂತ ಪ್ರಜ್ಞಾಪೂರ್ಣವಾದದ್ದನ್ನು ಅಲ್ಲಿ ಮೃತ್ಯುವಿನ ಸಮಯದಲ್ಲಿ ಪ್ರಕ್ಷೇಪಿಸಲಾಗುತ್ತದೆ. ಆ ಪ್ರಾಂತ, ಎಂದರೆ ಭೌತಿಕ ಪ್ರಾಣಿಕ ಜಗತ್ತು, ಬಹಳ ಅಂಧಕಾರದಿಂದ ಕೂಡಿರುತ್ತದೆ, ಅದು ವಿರೋಧೀ ರಚನೆಗಳಿಂದ ತುಂಬಿಕೊಂಡಿರುತ್ತದೆ, ಅವು ತಮ್ಮ ಕೇಂದ್ರದಲ್ಲಿ ಆಸೆಗಳನ್ನು ಇಲ್ಲವೆ ವಿರೋಧೀ ಸಂಕಲ್ಪಗಳನ್ನು ಹೊಂದಿರುತ್ತವೆ, ಇವು ಪ್ರಾಥಮಿಕ ಸ್ವರೂಪದ ಅಸ್ತಿತ್ವಗಳಾಗಿರುತ್ತವೆ, ಅವುಗಳ ಜೀವನ ತುಂಡು ತುಂಡಾಗಿರುತ್ತದೆ, ಮಾನವ ಸತ್ತೆಗಳಿಂದ ಹೊರಚೆಲ್ಲಿದ್ದನ್ನೆಲ್ಲ ತಿನ್ನುತ್ತವೆ ಎಂಬ ಅರ್ಥದಲ್ಲಿ ಅವು ರಕ್ತಪಿಶಾಚಿ(vampire)ಗಳಾಗಿರುತ್ತವೆ. ಮೃತ್ಯುವಿನಿಂದ ಆಘಾತಕ್ಕೊಳಗಾದ ಕ್ಷಣದಲ್ಲಿ – ಏಕೆಂದರೆ ಅತಿ ಕಡಿಮೆ ಜನರು ಆಘಾತಕ್ಕೊಳಗಾಗದೆ ಮರಣ ಹೊಂದುತ್ತಾರೆ, ಪ್ರಜ್ಞಾಪೂರ್ವಕವಾಗಿ ಹೊರಗೆ ಹೋಗುತ್ತಾರೆ, ಆ ವಿಷಯ ಕುರಿತು ಪೂರ್ಣ ಜ್ಞಾನ ಹೊಂದಿರುತ್ತಾರೆ, ಅಂತಹ ಜನರು ಹೆಚ್ಚಿನ ಸಂಖ್ಯೆಯಲ್ಲಿರುವುದಿಲ್ಲ – ಸಾಮಾನ್ಯವಾಗಿ ಅದು ಒಂದು ಅಪಘಾತವಾಗಿರುತ್ತದೆ: ಅದು ಕೊನೆಯ ಅಪಘಾತ; ಸರಿ, ಮೃತ್ಯುವಿನ ಆ ಅಪಘಾತದಲ್ಲಿ ಹೊರಗೆ ಹೊರಟುಹೋಗುವ ಜೀವ ಸತ್ವದ ಮೇಲೆ ಆ ಅಸ್ತಿತ್ವಗಳು ಮುತ್ತಿಕೊಂಡು ಬರುತ್ತವೆ, ಮತ್ತು ಪೋಷಿತವಾಗುತ್ತವೆ. ಮನುಷ್ಯ ಜೀವಂತ–ವಿರುವವರೆಗೆ ಅವನನ್ನು ಅವು ಸ್ಪರ್ಶಿಸುವುದಿಲ್ಲ. ನಿಮ್ಮೆಲ್ಲರಿಗೂ ಘೋರ ದುಃಸ್ವಪ್ನದಂತಹದರ ಅನುಭವವಾಗಿರಬೇಕು, ಅದರಲ್ಲಿ ಸನ್ನಿವೇಶ ನಿಜವಾಗಿ ಬಹಳ ಅಪಾಯಕಾರಕವಾಗಿದ್ದಾಗ, ಹಠಾತ್ತಾಗಿ ನೀವು ಎಚ್ಚತ್ತುಕೊಳ್ಳುತ್ತೀರಿ, ನಿಮ್ಮ ದೇಹದಲ್ಲಿ ಮರಳಿ ಬರುತ್ತೀರಿ, ಏಕೆಂದರೆ ದೇಹ ನಿಮ್ಮ ರಕ್ಷಣೆಯಾಗಿರುತ್ತದೆ.

ಭೌತಿಕ ದೇಹದಲ್ಲಿ ಅವು ಏನನ್ನೂ ಮಾಡಲಾರವು, ಆದರೆ ನೀವು ಸಂಪೂರ್ಣವಾಗಿ ಭೌತಿಕ ದೇಹದ ಹೊರಗಿದ್ದಾಗ, ನಾನು ಹೇಳಿದ ಭೌತಿಕ ಹಾಗೂ ಪ್ರಾಣಿಕ ಇವುಗಳ ನಡುವಿರುವ ಕೊಂಡಿ ರಕ್ಷಣೆಯ ರೀತಿಯಲ್ಲಿ ಸ್ವಲ್ಪ ಮಟ್ಟಿಗೆ ಸೇವೆ ಸಲ್ಲಿಸುತ್ತದೆ. ಆದರೆ ಕೊಂಡಿಗಳು ಮುರಿದು ಹೋದರೆ ಮತ್ತು ನೀವು ದೇಹದ ಹೊರಗಿದ್ದಾಗ, ಸರಿ, ನೀವು ವಿಶೇಷ ಪರಿಸ್ಥಿತಿಗಳ ಪ್ರಯೋಜನ ಪಡೆಯಬೇಕಾಗುತ್ತದೆ: ಉದಾಹರಣೆಗೆ ಮನುಷ್ಯ ಜೀವಂತವಿದ್ದ ಇತರರ ಪ್ರೀತಿಗೆ ಪಾತ್ರನಾಗಿದ್ದರೆ ಮೃತನಾಗುವ ಕ್ಷಣದಲ್ಲಿ ಅವನನ್ನು ಪ್ರೀತಿಸುವ ಈ ಜನರು ತಮ್ಮ ಯೋಚನೆಯನ್ನು ಹಾಗೂ ಪ್ರೀತಿಯನ್ನು ಮೃತನಾದ ವ್ಯಕ್ತಿಯ ಮೇಲೆ ಏಕಾಗ್ರಗೊಳಿಸಿದರೆ ಅವನು ಅದರಲ್ಲಿ ಆಶ್ರಯ ಕಂಡುಕೊಳ್ಳುವನು ಮತ್ತು ಇದು ಆ ಅಸ್ತಿತ್ವಗಳ ವಿರುದ್ಧ ಸಂಪೂರ್ಣವಾಗಿ ರಕ್ಷಿಸುತ್ತದೆ, ಆದರೆ ಯಾರಿಂದಲೂ ವಿಶೇಷ ಒಲವು ಪಡೆದಿರದ, ಏಕೆಂದರೆ ಅವನ ಸುತ್ತಲಿದ್ದವರಿಗೆ ಹಾನಿಯನ್ನುಂಟು ಮಾಡಿದ್ದ ಎಂಬ ಕಾರಣಕ್ಕಾಗಲಿ ಇಲ್ಲವೆ ಭಯಾನಕ ರೀತಿಯಲ್ಲಿ ಅಪ್ರಜ್ಞೆಯುಳ್ಳವರು ಅವನ ಸುತ್ತ ಇದ್ದರು ಎಂಬ ಕಾರಣಕ್ಕಾಗಲಿ ಅವನು ಆ ವಿರೋಧೀ ಅಸ್ತಿತ್ವಗಳಿಗೆ ಬಲಿಯಾಗುತ್ತಾನೆ.

ಸಹಜವಾಗಿ ಅದು ಸರ್ವಸಾಧಾರಣ ನಿಯಮ. ಅಲ್ಲಿ ಸೇತುವೆಗಳಿವೆ, "ರಕ್ಷಿತ ಸಾಗುವ ಮಾರ್ಗಗಳು", ಇವುಗಳನ್ನು ಪ್ರಾಣಿಕ ಜಗತ್ತಿನಲ್ಲಿ ನಿರ್ಮಾಣ ಮಾಡಲಾಗಿದೆ. ಅದರಿಂದಾಗಿ ಈ ಎಲ್ಲ ಅಪಾಯಗಳನ್ನು ದಾಟಿಕೊಂಡು ಹೋಗಬಹುದು. ದೇಹವನ್ನು ತ್ಯಜಿಸಿ ಹೋದವರನ್ನು ಬರಮಾಡಿಕೊಳ್ಳಲು ಅಲ್ಲಿ ವಾತಾವರಣಗಳಿವೆ, ಅವು ರಕ್ಷಣೆ ನೀಡುತ್ತವೆ, ಆಶ್ರಯ ನೀಡುತ್ತವೆ. ಅಲ್ಲಿ ಎಲ್ಲ ಬಗೆಯ ಇತರ ಸ್ಥಿತಿಗಳಿವೆ. ಸರ್ವಸಾಧಾರಣ ಮಾನವ ಸತ್ತೆಗಳು ಮೃತರಾದಾಗ ಇರುವ ಸರ್ವಸಾಮಾನ್ಯ ಸ್ಥಿತಿಗಳನ್ನು ಕುರಿತು ಇದೀಗ ನಾನು ನಿಮಗೆ ಹೇಳಿದ್ದೇನೆ, ಆದರೆ ಸ್ವಲ್ಪ ಉಚ್ಚತರ ಮಾದರಿಯ ಮನುಕುಲಕ್ಕೆ ಈ ಎಲ್ಲ ಸ್ಥಿತಿಗಳು ಬದಲಾಗುತ್ತವೆ. ಸತ್ತೆಯೊಳಗೆ ವಿಶೇಷ ಉಚ್ಚತರ ಅಭಿವೃದ್ಧಿ ಇಲ್ಲದೆ ಹೋದರೆ ಸರ್ವಸಾಧಾರಣ ನಿಯಮ ಉಳಿದುಕೊಳ್ಳುತ್ತದೆ. ಸತ್ತೆಯೊಳಗೆ ಎಷ್ಟೊಂದು ಇಡಿಯಾದ ಸಂಸಕ್ತಿ (cohesion) ಇರುವ ಜನರಿರುತ್ತಾರೆ ಎಂದರೆ ಇನ್ನು ಮುಂದೆ ಅಲ್ಲಿರಲಿ, ಇಲ್ಲವೆ ಇಲ್ಲದಿರಲಿ, ದೇಹದ ಮೇಲೆ ಅವರು ಅವಲಂಬಿಸಿರುವುದಿಲ್ಲ.

**CWM, 6/56** **– ಶ್ರೀಮಾತೆ**

*

## ಮೃತರಾದವರನ್ನು ರಕ್ಷಿಸುವುದು

ಈ ದೃಷ್ಟಿಕೋನದಿಂದ ಹೇಳಬಹುದಾದುದು ಏನೆಂದರೆ ಮೃತನಾದ, ದೇಹ ತ್ಯಜಿಸಿದ ವ್ಯಕ್ತಿ ಕುರಿತು ಆಳವಾದ ಹಾಗೂ ನಿಷ್ಕಪಟವಾದ ಸಂಬಂಧವನ್ನು ನೀವು ಹೊಂದಿದ್ದರೆ, ನೀವೇ ಸ್ವತಃ ಸ್ಥಿರವಾಗಿರುವವರು, ಬಲವುಳ್ಳವರು ಆಗಿದ್ದರೆ ಈ ವ್ಯಕ್ತಿ ಪ್ರಾಣಿಕವಾಗಿ ನಿಮ್ಮ ವಾತಾವರಣದಲ್ಲಿ ಆಶ್ರಯ ಪಡೆಯಬಹುದು – ಅದು ಪ್ರೀತಿಸುವವರ ವಾತಾವರಣವಾಗಿರುತ್ತದೆ – ಹೀಗೆ ಆಶ್ರಯ ಪಡೆಯುವುದು ದೀರ್ಘಕಾಲಕ್ಕಾಗಿರಬಹುದು ಇಲ್ಲವೆ ಅಲ್ಪಕಾಲಕ್ಕಾಗಿರಬಹುದು. ಈ ಸಂದರ್ಭದಲ್ಲಿ ಅದರರ್ಥ ಆ ಸಂಬಂಧ ಬಹಳ ಹತ್ತಿರದ್ದು, ಬಹಳ ಸಲಿಗೆಯದು ಆಗಿತ್ತು ಎಂದಾಗುತ್ತದೆ. ಮತ್ತು ಆ ವ್ಯಕ್ತಿಯ ಬಗ್ಗೆ ನೀವು ಒಟ್ಟಿನಲ್ಲಿ, ನೇರವಾದ ಗ್ರಹಿಕೆ ಪಡೆಯದಷ್ಟು ಪ್ರಾಪಂಚಿಕರಾಗಿರದೆ ಇದ್ದರೆ ಈ ವ್ಯಕ್ತಿಯೊಡನೆ ಮಾನಸಿಕ ಸಂಪರ್ಕ ಹಾಗೂ ಸಂಸರ್ಗ ಹೊಂದಿರುತ್ತ ಉಳಿದುಕೊಳ್ಳಬಹುದು. ಅದು ಹೆಚ್ಚಾಗಿ ಅಪರೂಪಕ್ಕೆ ಕಂಡು ಬರುವಂತಹದು, ಏಕೆಂದರೆ ಸಾಮಾನ್ಯವಾಗಿ ನಮ್ಮ ವಾತಾವರಣ ಸ್ಥಿರವಾದದ್ದು ಮತ್ತು ಬಲವುಳ್ಳದ್ದು ಆಗಿದ್ದರೆ, ನಿಜವಾಗಿ ರಕ್ಷಣೆಯನ್ನು ಕೊಡುವ ಸೇವೆ ಸಲ್ಲಿಸಲು ಶಕ್ತವಾಗಿದ್ದರೆ, ದೇಹ ತ್ಯಜಿಸಿದ ವ್ಯಕ್ತಿ ಅಲ್ಲಿ ಆಳವಾದ ವಿಶ್ರಾಂತಿಯಲ್ಲಿ ಪ್ರವೇಶಿಸುತ್ತಾನೆ, ಅದನ್ನು ಕ್ಷೋಭೆಗೊಳಪಡಿಸುವುದು ಒಳ್ಳೆಯದಲ್ಲವೇ ಅಲ್ಲ. ನೀವು ಈ ವ್ಯಕ್ತಿಯನ್ನು ಆವರಿಸಿಕೊಂಡು ಅವನು ಶಾಂತಿಯಲ್ಲಿ ಉಳಿಯುವಂತೆ ಬಿಟ್ಟುಕೊಡುವುದು ನೀವು ಕೈಕೊಳ್ಳಬಹುದಾದ ಅತ್ಯಂತ ಒಳ್ಳೆಯ ವಿಷಯ.

**CWM, 9/362** **– ಶ್ರೀಮಾತೆ**

*

## ರಕ್ಷಿಸುವ ವಾತಾವರಣ

ಇದರರ್ಥ ಮನುಷ್ಯ ದೈವೀ ಸತ್ಯದ ಸಮೀಪ ಹೋದಾಗ ಅವನು ಎಲ್ಲ ಪಂಡಿತ ವೇಷ, ಎಲ್ಲ ಆಡಂಬರ ಹಾಗೂ ಎಲ್ಲ ಮಿಥ್ಯೆ ಇವುಗಳಿಂದ ತೊಂದರೆಗೊಳಗಾಗದೆ ಸುರಕ್ಷಿತನಾಗಿರುತ್ತಾನೆ. ಇದನ್ನು ಕುರಿತು ನನ್ನಲ್ಲಿ ಅಸಂಖ್ಯಾತ ಹಾಗೂ ಬಹಳ ಮನಗಾಣಿಸುವ ಪ್ರಮಾಣಗಳಿವೆ. ಹಾಗಾಗಿ ನಿಜವಾದ ಮಾಂತ್ರಿಕ ಸಾಮರ್ಥ್ಯವನ್ನು ಹೊಂದಿದ ಮನುಷ್ಯ ಅದೇ ವೇಳೆಗೆ, ಈ ಆಂತರಿಕ ಸತ್ಯದ ಸಾಮರ್ಥ್ಯದಿಂದ ಯಾವುದೇ ಮಾಂತ್ರಿಕ ಕ್ರಿಯೆಯನ್ನು

ನಿಷ್ಫಲಗೊಳಿಸಬಲ್ಲನು, ಕೇವಲ ಆ ಸತ್ಯದ ಹನಿಯೊಂದನ್ನು ಬಳಸುವುದರ ಮೂಲಕ ಮಾಂತ್ರಿಕ ಕ್ರಿಯೆಯನ್ನು, ಅದು ಶುಭ್ರವಾಗಿರಲಿ, ಕಪ್ಪಾದದ್ದಾಗಿರಲಿ, ಇಲ್ಲವೆ ಯಾವುದೇ ಬಣ್ಣ ಹೊಂದಿರಲಿ, ಅವನು ತೊಡೆದುಹಾಕಬಲ್ಲನು. ಆ ಸಾಮರ್ಥ್ಯವನ್ನು ಪ್ರತಿರೋಧಿಸುವಂತಹದು ಯಾವುದೂ ಇರುವುದಿಲ್ಲ. ಮಾಂತ್ರಿಕ ವಿದ್ಯೆಯನ್ನು ಪ್ರಯೋಗದಲ್ಲಿ ತರುವವರಿಗೆ ಇದು ಸರಿಯಾಗಿ ತಿಳಿದಿರುತ್ತದೆ, ಎಲ್ಲ ದೇಶಗಳಲ್ಲಿ, ವಿಶೇಷವಾಗಿ ಭಾರತದಲ್ಲಿ ತಮ್ಮ ಮಾಂತ್ರಿಕ ವಿದ್ಯೆಯ ಸೂತ್ರಗಳನ್ನು ಯೋಗಿಗಳ ಹಾಗೂ ಸಂತರ ವಿರುದ್ಧ ಅವರು ಪ್ರಯೋಗ ಮಾಡಲು ಪ್ರಯತ್ನಿಸುವುದಿಲ್ಲ, ಏಕೆಂದರೆ ಅಲ್ಪ ರೀತಿಯಲ್ಲಿ ಯಾಂತ್ರಿಕವಾದ ಹಾಗೂ ಮೇಲ್ಮೈಯಲ್ಲಿ ಮಾತ್ರ ಸಮರ್ಥವಾಗಿರುವ ಈ ಸೂತ್ರಗಳನ್ನು ಅವರು ಹೊರಗೆ ಕಳಿಸಿಕೊಡುತ್ತಾರೆ, ಅವು ಗೋಡೆಯ ಮೇಲೆ ಚೆಂಡು ಬಡಿದ ಹಾಗೆ ಹೊಡೆತ ಕೊಡುತ್ತವೆ, ಆ ಹೊಡೆತ ಆಧ್ಯಾತ್ಮಿಕ ಜೀವನ ನಡೆಸುವ, ನಿಜವಾದ ಸಾಮರ್ಥ್ಯದಿಂದ ರಕ್ಷಿಸಲ್ಪಡುವ ವ್ಯಕ್ತಿಯ ಮೇಲೆ ಬಿದ್ದಾಗ ಸ್ವಾಭಾವಿಕವಾಗಿ ಅದು ಹಿಂಪುಟಿತ ಮಾಡಿ ಅದನ್ನು ಕಳಿಸಿದವನ ಮೇಲೆ ತಿರುಗಿ ಬೀಳುತ್ತದೆ. ಯೋಗಿ ಇಲ್ಲವೆ ಸಂತ ತನ್ನನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಏನನ್ನೂ ಕೈಕೊಳ್ಳುವ ಆವಶ್ಯಕತೆ ಇರುವುದಿಲ್ಲ, ಅದು (ರಕ್ಷಣೆ) ಸ್ವಯಂಚಾಲಿತವಾಗಿರುತ್ತದೆ. ಅವನು ಪ್ರಜ್ಞಾ-ಪೂರ್ಣವಾಗಿರುವ, ಆಂತರಿಕ ಸಾಮರ್ಥ್ಯ ಹೊಂದಿರುವ ಸ್ಥಿತಿಯಲ್ಲಿರುತ್ತಾನೆ. ಆ ಸ್ಥಿತಿ ಅವನನ್ನು ನಿಮ್ನತರವಾದ ಪ್ರತಿಯೊಂದರಿಂದ ರಕ್ಷಿಸುತ್ತದೆ. ಸ್ವಾಭಾವಿಕವಾಗಿ ಅವನು ತನ್ನ ಸಾಮರ್ಥ್ಯವನ್ನು ಉದ್ದೇಶಪೂರ್ವಕವಾಗಿ ಇತರರಿಗೆ ರಕ್ಷಣೆ ನೀಡುವುದಕ್ಕೆ ಉಪಯೋಗಿಸಬಲ್ಲನು. ಮಾಂತ್ರಿಕರ ಕೆಟ್ಟ ರಚನೆ ಅವನ ವಾತಾವರಣದಲ್ಲಿ ಹಿಂಪುಟಿತ ಪಡೆದು ಸ್ವಯಂಚಾಲಿತವಾಗಿ ಅವನನ್ನು ರಕ್ಷಿಸುತ್ತದೆ, ಆದರೆ ಅವನು ರಕ್ಷಣೆ ನೀಡುತ್ತಿರುವ ಇಲ್ಲವೆ ಅವನ ಸಹಾಯ ಬೇಡಿದ ಯಾರೋ ಒಬ್ಬರ ವಿರುದ್ಧ ಈ ಕೆಟ್ಟ ರಚನೆಯನ್ನು ಕೈಕೊಂಡಿದ್ದರೆ ಆಗ ಅವನು ತನ್ನದೇ ವಾತಾವರಣದ ಚಲನೆಯೊಂದರಿಂದ ತನ್ನದೇ ಸೂಕ್ಷ್ಮ ಪ್ರಭೆ(aura)ಯ ಮೂಲಕ ಅನಿಷ್ಟ ಮಾಂತ್ರಿಕನ ಮಂತ್ರಗಳಿಗೆ ತೆರೆದುಕೊಂಡಿದ್ದ ವ್ಯಕ್ತಿಯನ್ನು ಸುತ್ತುವರಿಯಬೇಕು ಮತ್ತು ಹಿಂಪುಟಿತದ ಕ್ರಿಯೆ ಅದೇ ರೀತಿಯಲ್ಲಿ ಕಾರ್ಯ ಕೈಕೊಳ್ಳುತ್ತದೆ ಮತ್ತು ಮಾಂತ್ರಿಕನ ಅನಿಷ್ಟ ಮಂತ್ರ ಬಹಳ ಸ್ವಾಭಾವಿಕವಾಗಿ ಅವನ ಮೇಲೆ ತಿರುಗಿ ಬೀಳುವುದಕ್ಕೆ ಕಾರಣವಾಗುತ್ತದೆ. ಆದರೆ ಈ ಸಂದರ್ಭದಲ್ಲಿ ಯೋಗಿಯ ಇಲ್ಲವೆ ಸಂತನ ಪ್ರಜ್ಞಾಪೂರ್ಣ ಸಂಕಲ್ಪದ

ಆವಶ್ಯಕತೆ ಇರುತ್ತದೆ. ಏನು ಸಂಭವಿಸಿತೆಂಬುದನ್ನು ಅವನಿಗೆ ತಿಳಿಸಬೇಕು ಮತ್ತು ಅವನು ಮಧ್ಯೆ ಪ್ರವೇಶಿಸಲು ನಿರ್ಧಾರ ಕೈಕೊಳ್ಳಬೇಕು.

**CWM, 9/392** – **ಶ್ರೀಮಾತೆ**

*

**ಆಂತರಿಕ ಇಂದ್ರಿಯಗಳು**

ಆದರೆ ಹಲವಾರು ಸಲ ಈ ರೀತಿಯ ಅನುಭವಗಳು ನನಗಾಗಿವೆ. ಉದಾಹರಣೆಗೆ ಒಮ್ಮೆ ನಾನು ಪರ್ವತಗಳ ಮೇಲೆ ಅಡ್ಡಾಡುತ್ತಿದ್ದಾಗ ನಾನೊಂದು ಮಾರ್ಗದಲ್ಲಿದ್ದೆ. ಅಲ್ಲಿ ಒಬ್ಬಳಿಗೆ ಮಾತ್ರ ನಡೆದುಕೊಂಡು ಹೋಗುವಷ್ಟು ಸ್ಥಳವಿತ್ತು. ಒಂದೆಡೆ ಕಲ್ಲು ತುಂಬಿಕೊಂಡಿತ್ತು, ಇನ್ನೊಂದೆಡೆ ಪ್ರಪಾತವಿತ್ತು. ನನ್ನ ಹಿಂದೆ ಮೂರು ಚಿಕ್ಕಮಕ್ಕಳು ನಡೆದುಕೊಂಡು ಬರುತ್ತಿದ್ದವು ಮತ್ತು ನಾಲ್ಕನೆಯವರು ಹಿಂದಿನ ಭಾಗವನ್ನು ರಕ್ಷಿಸಿಕೊಂಡು ಬರುತ್ತಿದ್ದರು. ನಾನು ಅವರನ್ನು ಮುಂದೆ ಕರೆದೊಯ್ಯುತ್ತಿದ್ದೆ. ಆ ಮಾರ್ಗ ಕಲ್ಲುಬಂಡೆಯ ತುದಿಯೊಂದಿಗೆ ಸಾಗಿತ್ತು. ನಾವೆಲ್ಲಿಗೆ ಹೊರಟಿದ್ದೇವೆ ಎಂಬುದನ್ನು ನೋಡಲಾಗುತ್ತಿರಲಿಲ್ಲ, ಅಲ್ಲದೆ ಅದು ಬಹಳ ಅಪಾಯಕಾರಿಯಾಗಿತ್ತು, ಯಾರಾದರೂ ಜಾರಿ ಬಿದ್ದರೆ ಅವನು ಆ ತುದಿಯ ಮೇಲಿರುತ್ತಿದ್ದ. ನಾನು ಮುಂದೆ ನಡೆದು ಹೋಗುತ್ತಿದ್ದೆ, ಆಗ ನನ್ನ ಸಹಜ ಕಣ್ಣುಗಳಲ್ಲದ ಬೇರೆ ಕಣ್ಣುಗಳಿಂದ ನೋಡಿದೆ – ಆದಾಗ್ಯೂ ನನ್ನ ಹೆಜ್ಜೆಗಳನ್ನು ಜಾಗರೂಕವಾಗಿ ಇರಿಸುತ್ತಿದ್ದೆ – ಕಲ್ಲು ಬಂಡೆಯ ಮೇಲೆ ಒಂದು ಹಾವಿರುವುದನ್ನು ನೋಡಿದೆ, ಅದು ಆ ಇನ್ನೊಂದು ಬದಿಯಲ್ಲಿ ಕಾದುಕೊಂಡು ಕುಳಿತಿತ್ತು.

ಆಗ ನಾನು ಒಂದು ಹೆಜ್ಜೆಯನ್ನು ಮೃದುವಾಗಿ ಇರಿಸಿದೆ ಮತ್ತು ನಿಜವಾಗಿ ಇನ್ನೊಂದು ಬದಿಯಲ್ಲಿ ಹಾವು ಇರುವುದು ಕಂಡುಬಂದಿತು. ಅದು ನನ್ನನ್ನು ಆಶ್ಚರ್ಯದಿಂದ ಆಘಾತಕ್ಕೊಳಗಾಗುವುದನ್ನು ತಪ್ಪಿಸಿತು, ಏಕೆಂದರೆ ನಾನು ನೋಡಿದ್ದೆ, ಹಾಗಾಗಿ ಕಾಳಜಿಪೂರ್ವಕ ಮುಂದುವರಿದುಕೊಂಡು ಹೋಗುತ್ತಿದ್ದೆ; ಮತ್ತು ಅಲ್ಲಿ ಆಶ್ಚರ್ಯದಿಂದ ಆಘಾತಕ್ಕೊಳಗಾಗುವುದು ಇರಲಿಲ್ಲವಾದ್ದರಿಂದ ನಾನು ಮಕ್ಕಳಿಗೆ ಆಘಾತವನ್ನುಂಟು ಮಾಡದೆ ಅವರಿಗೆ "ನಿಲ್ಲಿರಿ, ಶಾಂತ ರೀತಿಯಿಂದಿರಿ, ಅಲುಗಾಡುವುದು ಬೇಡ" ಎಂದು ಹೇಳಲು ಶಕ್ತಳಾದೆ. ಅಲ್ಲಿ ಆಘಾತವಾಗಿದ್ದರೆ ಏನೋ ಒಂದು ಸಂಭವಿಸಬಹುದಾಗಿತ್ತು. ಆ ಹಾವು ಸದ್ದನ್ನು

ಕೇಳಿಸಿಕೊಂಡಿತ್ತು, ತನ್ನ ಸುತ್ತ ಸುತ್ತಿಕೊಂಡು ಒಂದು ರಂಧ್ರದ ಬಳಿ ತನ್ನ ರಕ್ಷಣೆ ಮಾಡಿಕೊಳ್ಳುವ ಹಾಗೆ ಉಳಿದುಕೊಂಡಿತ್ತು, ಅದರ ಶಿರ ಹೊಯ್ದಾಡುತ್ತಿತ್ತು ಅದು ಘೋರ ಸರ್ಪವಾಗಿತ್ತು.

ಇದು ನಡೆದದ್ದು ಫ್ರಾನ್ಸ್ ದೇಶದಲ್ಲಿ. ಕೆಟ್ಟದೇನೂ ಸಂಭವಿಸಲಿಲ್ಲ, ಅದು ಹಾಗಿರುವಾಗ ಅಲ್ಲಿ ಏನಾದರೂ ಗೊಂದಲವಾಗಿದ್ದರೆ ಇಲ್ಲವೆ ಗಲಭೆ–ಯುಂಟಾಗಿದ್ದರೆ ಏನೆಲ್ಲವೂ ಸಂಭವಿಸಬಹುದಾಗಿತ್ತು. ಇಂತಹ ಸಂಗತಿ ನನಗೆ ಹಲವಾರು ಸಲ ಸಂಭವಿಸಿದೆ.

ನನಗೆ ಆ ಬಗೆಯ ನೂರಾರು ಅನುಭವಗಳಾಗಿವೆ, ಅವು ಕೊನೆಯ ಗಳಿಗೆಯಲ್ಲಾಗಿವೆ, ಒಂದು ಸೆಕೆಂಡು ಕಾಲ ಬಹಳ ಮೊದಲಲ್ಲ, ಆದರೆ ನನಗೆ ತಿಳಿಸಿಕೊಡಲಾಗುತ್ತಿತ್ತು.

**CWM, 10/130** **– ಶ್ರೀಮಾತೆ**

*

## ರಕ್ಷಣೆಯ ಪ್ರಭಾಮಂಡಲ (aura)

ಪ್ಯಾರಿಸ್ ನಗರದಲ್ಲಿ ನಾನು ಒಮ್ಮೆ ಬೌಲೆವಾರ್ಡ್ ಸೇಂಟ್ ಮೈಕೇಲ (Boulevard Saint Michel)ದ ಬಳಿ ರಸ್ತೆ ದಾಟಿ ಹೋಗುತ್ತಿದ್ದೆ. ಅದು ಕೊನೆಯ ವಾರಗಳಲ್ಲಾಗಿತ್ತು. ಕೆಲವೊಂದು ತಿಂಗಳುಗಳೊಳಗೆ ನಾನು ಆಂತರಿಕ ದೈವೀ ಸತ್ತೆಯಾದ ಚೈತ್ಯದ ಸಾನ್ನಿಧ್ಯದೊಡನೆ ಏಕತೆ ಪಡೆಯುವುದನ್ನು ಸಾಧಿಸಲು ನಿರ್ಧರಿಸಿದ್ದೆ. ಮತ್ತು ಆಗ ಅದರ ಹೊರತಾಗಿ ಬೇರೆ ಯಾವ ಯೋಚನೆಯೂ ಇರಲಿಲ್ಲ, ಹಿತಾಸಕ್ತಿ ಇರಲಿಲ್ಲ; ಆಗ ನಾನು ಲುಕ್ಸೆಂಬರ್ಗ ಗಾರ್ಡನ್ಸ್ ಹತ್ತಿರ ವಾಸಿಸುತ್ತಿದ್ದೆ. ದಿನಾಲು ಸಾಯಂಕಾಲ ಅಲ್ಲಿ ನಾನು ವಾಯುವಿಹಾರ ಮಾಡುತ್ತಿದ್ದೆ. – ಆದರೆ ಯಾವಾಗಲೂ ಅಂತರಂಗದೊಳಗೆ ಮಗ್ನಳಾಗಿರುತ್ತಿದ್ದೆ. ಅಲ್ಲಿ ರಸ್ತೆಯ ಮೇಲೆ ಒಂದು ಬಗೆಯ ಅಡ್ಡ ಹಾಯ್ದು ಹೋಗುವುದಿದೆ. ಮನುಷ್ಯ ಆಳವಾಗಿ ಅಂತರಂಗದಲ್ಲಿ ಮಗ್ನವಾದಾಗ ಹಾಯ್ದು ಹೋಗುವ ಸ್ಥಳ ಅದಲ್ಲ, ಅದು ತಿಳಿವಳಿಕೆಯಿರುವ ವಿಷಯವಾಗಿರಲಿಲ್ಲ. ನಾನು ಹಾಗಿದ್ದೆ, ಮತ್ತು ಆ ರೀತಿ ನಾನು ಅಡ್ಡಾಡುತ್ತಿದ್ದಾಗ ಹಠಾತ್ತನೆ ನನಗೆ ಆಘಾತವಾಯಿತು; ಅದು ನಾನೊಂದು ಹೊಡೆತಕ್ಕೆ ಈಡಾದ ಹಾಗಿತ್ತು, ಏನೋ

ಒಂದು ನನಗೆ ಬಡಿದ ಹಾಗಿತ್ತು. ನಾನು ಸಹಜ ಪ್ರೇರಣೆಯಿಂದ ಹಿಂದೆ ಜಿಗಿತ ಮಾಡಿದೆ. ಮತ್ತು ನಾನು ಜಿಗಿತ ಮಾಡಿದ ತತ್ಕ್ಷಣ ಒಂದು ಟ್ರಾಮ್ ಬದಿಯಿಂದ ತೆರಳಿತು. ಒಂದು ತೋಳಳತೆಗಿಂತ ಸ್ವಲ್ಪ ಹೆಚ್ಚು ದೂರದಲ್ಲಿ ಈ ಟ್ರಾಮಿನ್ ಬಗ್ಗೆ ನನಗೆ ಭಾವನೆ ಬಂದಿತ್ತು. ಅದು ರಕ್ಷಣೆ ನೀಡುವ ನನ್ನ ಪ್ರಭಾಮಂಡಲವನ್ನು ಸ್ಪರ್ಶಿಸಿತ್ತು – ಅದು ಆ ಸಮಯದಲ್ಲಿ ಬಹಳ ಬಲವತ್ತರವಾಗಿತ್ತು. ನಾನು ಅತೀಂದ್ರಿಯ ವಿದ್ಯೆ(occultism)ಯ ಅಭ್ಯಾಸದಲ್ಲಿ ಆಳವಾಗಿ ಮಗ್ನಳಾಗಿದ್ದೆ, ಅದನ್ನು (ಪ್ರಭಾ ಮಂಡಲವನ್ನು) ಹೇಗೆ ಕಾಪಾಡಿಕೊಂಡು ಬರಬೇಕೆಂಬುದನ್ನು ತಿಳಿದುಕೊಂಡಿದ್ದೆ – ರಕ್ಷಣೆಯ ಪ್ರಭಾಮಂಡಲಕ್ಕೆ ಹೊಡೆತ ಬಿದ್ದಿತ್ತು ಮತ್ತು ಅದು ಅಕ್ಷರಶಃ ನನ್ನನ್ನು ಹಿಂದೆ ಚೆಲ್ಲಿಕೊಟ್ಟಿತ್ತು, ನಾನು ಭೌತಿಕವಾದ ಆಘಾತವನ್ನು ಪಡೆದ ಹಾಗಿತ್ತು. ಅದು ಅವಶ್ಯವಾಗಿದೆ, ಅದು ನಿಮ್ಮ ಕ್ಷಮತೆಗಳನ್ನು ಹೆಚ್ಚಿಸುತ್ತದೆ. ಅತೀಂದ್ರಿಯ ವಿದ್ಯೆಯನ್ನು ನನಗೆ ಕಲಿಸಿಕೊಟ್ಟ ವ್ಯಕ್ತಿ ನನಗೆ ನೇರವಾಗಿ ಹೇಳಿದ: "ಅತ್ಯಂತ ಸಾಮಾನ್ಯ ಜೀವನಕ್ಕೂ ಅತ್ಯಂತ ಉಪಯುಕ್ತವಾಗುವ ಇಂದ್ರಿಯ ಅನುಭೋಗದಿಂದ ನಿಮ್ಮನ್ನು ತಪ್ಪಿಸಿಕೊಳ್ಳುತ್ತೀರಿ." ಇದು ಬಹಳ ಸತ್ಯವಾದದ್ದು. ಸರಳವಾಗಿ ನಮ್ಮ ಇಂದ್ರಿಯಗಳನ್ನು ಉಪಯೋಗಿಸುವುದರ ಮೂಲಕ ನಾವು ಸಾಮಾನ್ಯವಾಗಿ ತಿಳಿದುಕೊಳ್ಳುವುದಕ್ಕಿಂತ ಅನಂತ ಪಟ್ಟು ಹೆಚ್ಚು ವಿಷಯಗಳನ್ನು ತಿಳಿದುಕೊಳ್ಳಬಲ್ಲೆವು. ಅದನ್ನು ಕೇವಲ ಮಾನಸಿಕ ದೃಷ್ಟಿಕೋನದಿಂದ ಮಾತ್ರವಲ್ಲ, ಆದರೆ ಪ್ರಾಣಿಕ ಹಾಗೂ ಭೌತಿಕ ದೃಷ್ಟಿಕೋನದಿಂದಲೂ ಮಾಡಬಲ್ಲೆವು.

**CWM, 10/339** **– ಶ್ರೀಮಾತೆ**

*

**ರಕ್ಷಣೆಯ ವಾತಾವರಣದಲ್ಲಿ ಮನುಷ್ಯ ತನ್ನನ್ನು ಪ್ರತ್ಯೇಕಗೊಳಿಸಿಕೊಳ್ಳುವುದು**

ಅಲ್ಲದೆ ಯಾವಾಗಲೂ ರಕ್ಷಣೆಯ ವಾತಾವರಣವೊಂದರ ಮೂಲಕ ಮನುಷ್ಯ ತನ್ನನ್ನು ಪ್ರತ್ಯೇಕಗೊಳಿಸಿಕೊಳ್ಳುವ ಮಾರ್ಗ ಯಾವಾಗಲೂ ಇರುತ್ತದೆ, ಅದಕ್ಕಾಗಿ ಅವನು ಅಚಂಚಲವಾದ ಕಂಪನವನ್ನು ಹೇಗೆ ಹೊಂದಬೇಕು ಎಂಬುದನ್ನು ತಿಳಿದುಕೊಂಡಿರಬೇಕು, ಅದೆಷ್ಟರ ಮಟ್ಟಿಗೆ ಎಷ್ಟೊಂದು ಅಚಂಚಲ–ವಾಗಿರಬೇಕೆಂದರೆ ಅದು ನಿಮ್ಮ ಸುತ್ತ ಒಂದು ಗೋಡೆಯಂತಾಗಬೇಕು. ಆದರೆ ಎಲ್ಲ ಕಾಲದಲ್ಲಿ ಮನುಷ್ಯ ಹೊರಗಿನಿಂದ ಬರುವ ಓಲಾಟ(vibration)ಗಳಿಗೆ ಸ್ಪಂದಿಸುತ್ತ ಓಲಾಡುತ್ತಿರುತ್ತಾನೆ. ನೀವು ಇದರ ಬಗ್ಗೆ ಅರಿವುಳ್ಳವರಾದರೆ, ಎಲ್ಲ

ಕಾಲದಲ್ಲಿ ಇದನ್ನು ಈ ರೀತಿ (ಸಂಜ್ಞೆ) ಕೈಕೊಳ್ಳುವ ಏನೋ ಒಂದಿರುತ್ತದೆ, ಅದು ಹೊರಗಿನಿಂದ ಬರುವ ಎಲ್ಲ ಓಲಾಟಗಳಿಗೆ ಪ್ರತಿಸ್ಪಂದಿಸುತ್ತದೆ. ನೀವು ಎಂದಿಗೂ ಪರಿಪೂರ್ಣವಾಗಿ ಅಚಂಚಲವಾದ, ನಿಮ್ಮ ಅಂತರಂಗದಿಂದ ಹೊರಹೊಮ್ಮುವ ವಾತಾವರಣದಲ್ಲಿ ಇರುವುದಿಲ್ಲ, ಎಂದರೆ ಅಂತರಂಗದಿಂದ ಬಾಹ್ಯದಲ್ಲಿ ಬರುವ (ಹೊರಗಿನಿಂದ ಅಂತರಂಗದೊಳಗೆ ಬರುವಂತಹ ಏನೋ ಅಲ್ಲ) ಏನೋ ಒಂದು, ಅದು ನಿಮ್ಮ ಸುತ್ತ ಒಂದು ಆವರಣವಿದ್ದ ಹಾಗಿರುತ್ತದೆ, ಅತ್ಯಂತ ಅಚಂಚಲವಾದದ್ದು– ಮತ್ತು ನೀವು ಎಲ್ಲಿ ಬೇಕಾದಲ್ಲಿ ಹೋಗಬಹುದು ಮತ್ತು ಹೊರಗಿನಿಂದ ಬರುವ ಈ ಓಲಾಟಗಳು ಇದನ್ನು (ಸಂಜ್ಞೆ) ನಿಮ್ಮ ವಾತಾವರಣದ ಸುತ್ತ ಕೈಕೊಳ್ಳಲು ಪ್ರಾರಂಭಿಸುವುದಿಲ್ಲ.

**CWM, 7/144** – **ಶ್ರೀಮಾತೆ**

*

**ನಿದ್ರೆ ಮಾಡುವ ಮೊದಲು ಪ್ರಾರ್ಥನೆ ಮಾಡುವುದು**

ಯಾವುದೇ ಸಂದರ್ಭದಲ್ಲಿ, ನೀವು ಎಲ್ಲ ನಿರ್ಭಯತೆಯಿಂದ, ಒಂದು ಕಾರ್ಯವನ್ನು ಕೈಕೊಳ್ಳಬಹುದು, ಅದು ನಿದ್ರೆ ಮಾಡುವುದಕ್ಕಿಂತ ಮೊದಲು ಏಕಾಗ್ರತೆ ಕೈಕೊಳ್ಳುವುದಾಗಿದೆ, ಭೌತಿಕ ಸತ್ತೆಯಲ್ಲಿಯ ಎಲ್ಲ ಉದ್ವಿಗ್ನತೆಯನ್ನು ಸಡಿಲುಗೊಳಿಸುವುದಾಗಿದೆ. ಇದನ್ನು ದೇಹದಲ್ಲಿ ಕೈಕೊಳ್ಳಲು ಪ್ರಯತ್ನಿಸಬೇಕು, ಅದರಿಂದಾಗಿ ದೇಹ ಹಾಸಿಗೆಯಲ್ಲಿ ಮೃದು, ಚೂರಾದ ಬಟ್ಟೆಯ ಹಾಗೆ ಒರಗಿಕೊಳ್ಳುತ್ತದೆ, ಅದು ನಂತರ ಎಳೆತ ಹಾಗೂ ಸೆಡೆತಗಳಿಂದ ಕೂಡಿಕೊಂಡದ್ದಾ–ಗಿರುವುದಿಲ್ಲ, ನೀವು ಒಂದು ಬಗೆಯ ಚೂರಾದ ಬಟ್ಟೆಯ ಹಾಗಿರುವಿರೇನೋ ಎನ್ನುವಂತೆ ಸಡಿಲುಗೊಳ್ಳುವುದಾಗಿರುತ್ತದೆ ಮತ್ತು ನಂತರ ಪ್ರಾಣಿಕ: ಸ್ಥಿರಗೊಳಿಸುವುದು, ನಿಮಗೆ ಸಾಧ್ಯವಿದ್ದಷ್ಟು ಅದನ್ನು ಸ್ಥಿರಗೊಳಿಸಬೇಕು, ಸಾಧ್ಯವಿದ್ದಷ್ಟು ಅಚಂಚಲವಾದದ್ದನ್ನಾಗಿ, ಶಾಂತಿಯುತವಾದದ್ದನ್ನಾಗಿ ಮಾಡಬೇಕು. ನಂತರ ಮನಸ್ಸು ಕೂಡ – ಮನಸ್ಸನ್ನೂ ಹಾಗೆಯೇ, ಯಾವುದೇ ಚಲನೆ ಮಾಡದಂತೆ ಇರಿಸಬೇಕು. ನೀವು ಮಿದುಳಿನ ಮೇಲೆ ಶ್ರೇಷ್ಠ ಶಾಂತಿಯ, ಶ್ರೇಷ್ಠ ಅಚಂಚಲತೆಯ, ಸಾಧ್ಯವಾದರೆ ನಿಶ್ಚಲನೀರವತೆಯ ಶಕ್ತಿಯನ್ನು ಇರಿಸಬೇಕು ಮತ್ತು ವಿಚಾರಗಳನ್ನು ಕ್ರಿಯಾಶೀಲತೆಯಿಂದ ಅನುಸರಿಸಬಾರದು, ಯಾವುದೇ ಪ್ರಯತ್ನ ಮಾಡಬಾರದು, ಏನೂ ಇಲ್ಲದಿರುವಂತಾಗಬೇಕು, ಆದರೆ

ಸಾಧ್ಯವಾಗಬಹುದಾದ ಶ್ರೇಷ್ಠ ನಿಶ್ಚಲನೀರವತೆ ಮತ್ತು ಅಚಂಚಲತೆಯಲ್ಲಿ ಸಡಿಲುಗೊಳ್ಳಬೇಕು.

ಒಮ್ಮೆ ನೀವು ಇದೆಲ್ಲವನ್ನೂ ಕೈಕೊಂಡಾಗ ನಿಮ್ಮ ಸ್ವಭಾವಕ್ಕೆ ಅನುಗುಣವಾಗಿ ಒಂದು ಪ್ರಾರ್ಥನೆಯನ್ನೋ ಇಲ್ಲವೆ ಅಭೀಪ್ಸೆಯನ್ನೋ ಅಧಿಕವಾಗಿ ಸೇರಿಸಬಹುದು, ಅದು ಪ್ರಜ್ಞೆಯನ್ನು, ಶಾಂತಿಯನ್ನು ಕೇಳಿಕೊಳ್ಳುವುದಕ್ಕಾಗಿ ಮತ್ತು ನಿದ್ರೆಯಾದ್ಯಂತ ವಿರೋಧೀ ಶಕ್ತಿಗಳ ವಿರುದ್ಧ ರಕ್ಷಣೆ ಪಡೆಯುವುದಕ್ಕಾಗಿ, ಅಚಂಚಲವಾದ ಅಭೀಪ್ಸೆಯಲ್ಲಿ, ರಕ್ಷಣೆಯಲ್ಲಿ ಇರುವುದಕ್ಕಾಗಿ ನಿಮ್ಮ ನಿದ್ರೆಯ ಮೇಲೆ ಕಾವಲಿರಿಸುವಂತೆ ದೈವೀ ಕೃಪೆಯನ್ನು ಕೇಳಿಕೊಳ್ಳಿರಿ ಮತ್ತು ನಂತರ ನಿದ್ರೆ ಮಾಡಿರಿ. ಇದು ಸಾಧ್ಯವಿದ್ದಷ್ಟು ಅತ್ಯಂತ ಒಳ್ಳೆಯ ಸ್ಥಿತಿಯಲ್ಲಿ ನಿದ್ರೆ ಮಾಡುವುದಾಗಿದೆ. ನಂತರ ಏನು ಸಂಭವಿಸುತ್ತದೆ ಎಂಬುದು ನಿಮ್ಮ ಆಂತರಿಕ ಪ್ರಚೋದನೆಗಳ ಮೇಲೆ ಅವಲಂಬಿಸಿರುತ್ತದೆ, ಆದರೆ ನೀವು ಪಟ್ಟುಹಿಡಿದು ರಾತ್ರಿಯ ನಂತರ ರಾತ್ರಿಯಲ್ಲಿ ಕೈಕೊಂಡರೆ ಕೆಲ ಸಮಯದ ನಂತರ ಅದರ ಪರಿಣಾಮ ಕಂಡುಬರುತ್ತದೆ.

**CWM, 7/66** **– ಶ್ರೀಮಾತೆ**

*

**ನಿಷ್ಕಾಪಟ್ಯ ರಕ್ಷಿಸುತ್ತದೆ**

**ಪ್ರಶ್ನೆ :** *ಆಧ್ಯಾತ್ಮಿಕ ಜೀವನಕ್ಕಾಗಿ ತಯಾರು ಮಾಡಿಕೊಳ್ಳಲು ಯಾವ ಸದ್ಗುಣವನ್ನು ಬೆಳೆಸಿಕೊಳ್ಳಬೇಕು?*

**ಶ್ರೀಮಾತೆ :** ಅದನ್ನು ನಾನು ಹಲವಾರು ಸಲ ಹೇಳಿದ್ದೇನೆ, ಆದರೆ ಅದನ್ನು ಪುನರಾವರ್ತಿಸಿ ಹೇಳಲು ಇದೊಂದು ಅವಕಾಶವಾಗಿದೆ: ಅದು ನಿಷ್ಕಾಪಟ್ಯ.

ಇಡಿಯಾಗಿರುವ ಮತ್ತು ಪರಿಪೂರ್ಣವಾಗಿರುವ ನಿಷ್ಕಾಪಟ್ಯ, ಏಕೆಂದರೆ ಆಧ್ಯಾತ್ಮಿಕ ಮಾರ್ಗದಲ್ಲಿ ನಿಷ್ಕಾಪಟ್ಯ ಮಾತ್ರ ರಕ್ಷಣೆ ಒದಗಿಸುತ್ತದೆ. ನೀವು ನಿಷ್ಕಪಟರಾಗಿರದಿದ್ದರೆ ಮುಂದಿನ ಹೆಜ್ಜೆಯಲ್ಲಿಯೇ ನೀವು ಪತನಗೊಳ್ಳುವುದು ಮತ್ತು ಶಿರ ಒಡೆದುಕೊಳ್ಳುವುದು ನಿಶ್ಚಿತ. ಎಲ್ಲ ಬಗೆಯ ಶಕ್ತಿಗಳು, ಸಂಕಲ್ಪಗಳು, ಪ್ರಭಾವಗಳು, ಅಸ್ತಿತ್ವಗಳು ಅಲ್ಲಿವೆ, ಅವು ಈ ನಿಷ್ಕಾಪಟ್ಯದಲ್ಲಿ ಕನಿಷ್ಠ ಮಟ್ಟದ ಬಿರುಕು ಉಂಟಾಗುವುದನ್ನು ಹುಡುಕುತ್ತಿರುತ್ತವೆ ಮತ್ತು ಅವು ಆ ಬಿರುಕಿನ

ಮೂಲಕ ರಭಸದಿಂದ ಒಳಸೇರುತ್ತವೆ ಮತ್ತು ನಿಮ್ಮನ್ನು ಗೊಂದಲದಲ್ಲಿ ಚೆಲ್ಲಿಕೊಡಲು ಪ್ರಾರಂಭಿಸುತ್ತವೆ.

ಆದ್ದರಿಂದ ಏನನ್ನಾದರೂ ಕೈಕೊಳ್ಳುವ, ಇಲ್ಲವೆ ಪ್ರಾರಂಭಿಸುವ ಇಲ್ಲವೆ ಪ್ರಯತ್ನಿಸುವ ಮೊದಲು ನೀವು ಸಾಧ್ಯವಿದ್ದಷ್ಟು ನಿಷ್ಕಪಟರಾಗಿದ್ದೀರಿ ಎಂಬುದನ್ನು ನಿಶ್ಚಿತಪಡಿಸಿಕೊಳ್ಳಬೇಕು ಅಷ್ಟೇ ಅಲ್ಲ, ಆದರೆ ಇನ್ನೂ ಹೆಚ್ಚು ನಿಷ್ಕಪಟರಾಗುವ ಉದ್ದೇಶ ಹೊಂದಿರಬೇಕು.

ಏಕೆಂದರೆ ಅದು ಮಾತ್ರ ನಿಮ್ಮ ರಕ್ಷಣೆಯಾಗಿರುತ್ತದೆ.

**CWM, 8/247** **– ಶ್ರೀಮಾತೆ**

*

**ಸತ್ಯ ರಕ್ಷಿಸುತ್ತದೆ**

ಸನ್ಯಾಸಿಯೊಬ್ಬನನ್ನು ಕುರಿತು ಗಮನಾರ್ಹವಾದ ದೃಷ್ಟಾಂತ ನನಗೆ ತಿಳಿದಿತ್ತು, ಅವನು ತನ್ನ ಶಿಷ್ಯನಾಗಲು ಒಪ್ಪಿಕೊಳ್ಳದ ಒಬ್ಬನ ಮೇಲೆ ಕ್ರೋಧಾವಿಷ್ಠನಾಗಿದ್ದ – ಅದಾಗಲೇ ಅವನು ಸನ್ಯಾಸಿಯ ಸ್ಥಿತಿಯನ್ನು ಸಿದ್ಧಿಸಿ–ಕೊಳ್ಳುವುದರಿಂದ ಬಹಳ ದೂರವಿದ್ದ ಎಂಬುದನ್ನು ಸಿದ್ಧಮಾಡಿ ತೋರಿಸುತ್ತಿತ್ತು – ಮತ್ತು ಅವನು ಸೇಡು ತೀರಿಸಿಕೊಳ್ಳಲು ಬಯಸಿದ್ದ. ಮತ್ತು ನಿಜವಾಗಿ ಅವನಲ್ಲಿ ಸಾಮರ್ಥ್ಯಗಳಿದ್ದವು. ಶಿಷ್ಯನಾಗಲು ಒಪ್ಪಿಕೊಳ್ಳದ ಈ ವ್ಯಕ್ತಿಯನ್ನು ಕೊಲ್ಲಲು ಅವನು ಸಾಮರ್ಥ್ಯಪೂರ್ಣ ರಚನೆಯೊಂದನ್ನು ಮಾಡಿದ್ದ. ಆಗ ಸಂಭವಿಸಿದ್ದು ಏನೆಂದರೆ ಈ ವ್ಯಕ್ತಿ ಶ್ರೀ ಅರವಿಂದರ ಸಂಪರ್ಕದಲ್ಲಿದ್ದ, ಅವರಿಗೆ ತನ್ನ ಕತೆಯನ್ನು ಹೇಳಿದ. ಇದನ್ನು ಶ್ರೀ ಅರವಿಂದರು ನನಗೆ ಹೇಳಿದರು. ಪರಿಣಾಮ ಏನಾಯಿತೆಂದರೆ ತನ್ನ ದೈವೀ ಸಂಕಲ್ಪ ಎಂದು ಕರೆಯಬಹುದಾದುದರೊಂದಿಗೆ ಆ ಮನುಷ್ಯ ಮಾಡಿದ ರಚನೆ ಅವನ ಮೇಲೆಯೇ ತಿರುಗಿ ಬಿದ್ದುಬಿಟ್ಟಿತು ಮತ್ತು ಅವನೇ ಮರಣ ಹೊಂದಿದ! ಮತ್ತು ಅದು ಸತ್ಯವನ್ನು ಮರುಸ್ಥಾಪಿಸುವುದರ ವಾಸ್ತವತೆಯಾಗಿತ್ತು. ಅಲ್ಲಿ ಬೇರೇನೂ ಕೈಕೊಳ್ಳುವುದಿರಲಿಲ್ಲ.

ಆ ಕತೆಯ ನೀತಿ ಪಾಠವೆಂದರೆ ಮನುಷ್ಯ ನಟನೆ ಮಾಡಬಾರದು, ಅವನು ಅವನೇ ಆಗಿರಬೇಕು, ಅವನು ಪರಿಪೂರ್ಣವಾಗಿ ನಿಷ್ಕಪಟನಾಗಿರಬೇಕು ಮತ್ತು ತನ್ನ ಆಸೆಗಳನ್ನು ಸುಂದರವಾದ ಸಿದ್ಧಾಂತಗಳಿಂದ ಮುಚ್ಚಿಡಬಾರದು.

**ಪ್ರಶ್ನೆ :** *ಮಧುರ ಮಾತೆಯವರೆ, ಈ ಜನರಲ್ಲಿ ಸಾಮರ್ಥ್ಯಗಳಿರುತ್ತವೆಯೆ?*

**ಶ್ರೀಮಾತೆ :** ಹೌದು, ಶ್ರೇಷ್ಠ ಸಾಮರ್ಥ್ಯಗಳನ್ನು ಹೊಂದಿದ ಕೆಲವರಿರುತ್ತಾರೆ. ಆದರೆ ಅವು ಈ ಪ್ರಾಣಿಕದಿಂದ, ಪ್ರಾಣಿಕ ಅಸ್ತಿತ್ವಗಳ ಸಹವಾಸದಿಂದ ಬರುತ್ತವೆ. ಅಲ್ಲಿ ಎಲ್ಲ ಬಗೆಯ ಸಾಮರ್ಥ್ಯಗಳಿರುತ್ತವೆ. ಕೇವಲ, ಆ ಸಾಮರ್ಥ್ಯಗಳು ದೈವೀ ಸಾಮರ್ಥ್ಯದ ಮುಂದೆ ತಡೆದು ನಿಲ್ಲಲಾರವು – ಅವು ಪ್ರತಿರೋಧಿಸಲಾರವು. ಆದರೆ ಸಾಮಾನ್ಯ ಮನುಷ್ಯರ ಮೇಲೆ ಅವುಗಳಿಗೆ ಹೆಚ್ಚಿನ ಸಾಮರ್ಥ್ಯವಿರುತ್ತದೆ.

**ಪ್ರಶ್ನೆ :** *ಹಾಗಾದರೆ ಅವು ಹಾನಿಯನ್ನುಂಟು ಮಾಡಬಲ್ಲವು?*

**ಶ್ರೀಮಾತೆ :** ಅವು ಬಹಳಷ್ಟು ಮಾಡಬಲ್ಲವಷ್ಟೇ ಅಲ್ಲ, ಅವು ಮಾಡುತ್ತವೆ. ಅವು ಬಹಳ ಹಾನಿಯನ್ನುಂಟು ಮಾಡುತ್ತವೆ. ಸನ್ಯಾಸಿ[1] ಎಂದು ಕರೆಯಲಾದವ–ನೊಬ್ಬನನ್ನು ದುರ್ದೈವವಶಾತ್ ಭೇಟಿ ಮಾಡಿ ಪೀಡೆಗೊಳಗಾದ ಜನರ ಸಂಖ್ಯೆ ಹೆಚ್ಚಿನದಿದೆ. ನಾನು ಇದನ್ನು ನಿಮ್ಮನ್ನು ಬೆದರಿಸಲೆಂದು ಹೇಳುತ್ತಿಲ್ಲ, ಏಕೆಂದರೆ ಇಲ್ಲಿ ನೀವು ರಕ್ಷಣೆಗೆ ಒಳಗಾಗಿದ್ದೀರಿ, ಆದರೆ ಅದು ವಾಸ್ತವ ಸಂಗತಿ. ದೀಕ್ಷೆ ತೆಗೆದುಕೊಳ್ಳುವಾಗ ಈ ಜನರು ಪ್ರಾಣಿಕ ಜಗತ್ತಿನಿಂದ ಒಂದು ಶಕ್ತಿಯ ಹೇರಿಕೆಯನ್ನು ಸ್ವೀಕರಿಸಿರುತ್ತಾರೆ, ಅದು ಅತ್ಯಂತ ಅಪಾಯಕಾರಿಯಾಗಿರುತ್ತದೆ. ಇದು ಯಾವಾಗಲೂ ಕಂಡುಬರುವ ಉದಾಹರಣೆಯಾಗಿರುವುದಿಲ್ಲ, ಆದರೆ ಬಹಳಷ್ಟು ಸಲ ಇದೇ ರೀತಿಯದಾಗಿರುತ್ತದೆ, ಏಕೆಂದರೆ ನಿಷ್ಕಾಪಟ್ಯ ಅಪರೂಪಕ್ಕೆ ಕಂಡುಬರುವ ಸದ್ಗುಣ. ಅದನ್ನು ಭೇಟಿ ಮಾಡಿದಾಗ ಗೌರವದಿಂದ ಅದಕ್ಕೆ ಬಾಗಿ

---

1. **ಸನ್ಯಾಸಿ ಕುರಿತು ಅಡಿಟಿಪ್ಪಣಿ:** ನಂತರ ಶ್ರೀಮಾತೆಯವರು ಅಧಿಕವಾಗಿ ಸೇರಿಸಿದ ವಿವರಣೆ ಹೀಗಿದೆ: ಕಾವಿ ವಸ್ತ್ರಧಾರಣ ಮಾಡುವವರನ್ನು ಸಾಮಾನ್ಯವಾಗಿ ಗೌರವಿಸಲಾಗುತ್ತದೆ. ಇಲ್ಲಿ ಹೇಳಿದ್ದು, ಸಹಜವಾಗಿ, ತಮ್ಮ ಅಹಂಮನ್ಯತೆಯ ಭಾವೋದ್ರೇಕಗಳನ್ನು ಅಡಗಿಸಿಡುವುದಕ್ಕಾಗಿ ಕಾವಿ ವಸ್ತ್ರಧಾರಣ ಮಾಡುವವರನ್ನು ಕುರಿತಾಗಿದೆ. ಯಾರಲ್ಲಿ ಪರಿಶುದ್ಧ ಹೃದಯವಿರುವುದೋ, ಮತ್ತು ಆಧ್ಯಾತ್ಮಿಕ ಜೀವನಕ್ಕೆ ಸಮಗ್ರವಾಗಿ ಮುಡುಪಾಗಿರಿಸಿಕೊಂಡವರು ಧರಿಸಿದ ಕಾವಿ ಬಟ್ಟೆ ಕೇವಲ ಅದರ ಬಾಹ್ಯ ಕುರುಹಾಗಿರುತ್ತದೆಯೋ, ಅಂತಹರನ್ನು ಕುರಿತು ಪ್ರಶ್ನಿಸಬೇಕಾಗಿರುವುದಿಲ್ಲ.

**CWM, 8/72** **– ಶ್ರೀಮಾತೆ**

*

ನಮಸ್ಕರಿಸಬೇಕು. ನಾವು ನಿಷ್ಕಾಪಟ್ಯ ಎಂದು ಕರೆಯುವುದು ಪರಿಪೂರ್ಣ ಪ್ರಾಮಾಣಿಕತೆ ಮತ್ತು ಪಾರದರ್ಶಕತ್ವ ಆಗಿರುತ್ತದೆ: ಅದರಿಂದಾಗಿ ಸತ್ತೆಯಲ್ಲಿ ಎಲ್ಲಿಯೂ ನಟನೆ ಮಾಡುವಂತಹದಾಗಲಿ, ಅಡಗಿಕೊಳ್ಳುವಂತಹದಾಗಲಿ, ಇಲ್ಲವೆ ತಾನಲ್ಲದೇ ಇರುವುದನ್ನು ಖೋಟಾ ರೀತಿಯಲ್ಲಿ ತೋರಿಸಿಕೊಡಲು ಬಯಸು–ವಂತಹದಾಗಲಿ ಇರದಂತಾಗಬೇಕು.

**CWM, 8/72** **– ಶ್ರೀಮಾತೆ**

*

ನಿಮ್ಮ ನಂಬಿಕೆ, ನಿಷ್ಕಾಪಟ್ಯ ಹಾಗೂ ಸಮರ್ಪಣ ಹೆಚ್ಚು ಸಂಪೂರ್ಣವಾಗುತ್ತ ಹೋಗುತ್ತಿದ್ದಂತೆ ದೈವೀ ಕೃಪೆ ಹಾಗೂ ರಕ್ಷಣೆಗಳೂ ಹೆಚ್ಚುತ್ತ ಹೋಗುತ್ತವೆ. ದೈವೀ ಕೃಪೆ ಮತ್ತು ರಕ್ಷಣೆ ನಿಮ್ಮೊಂದಿಗಿದ್ದಾಗ ನಿಮ್ಮನ್ನು (ಯೋಗ್ಯವಲ್ಲದ) ಯಾವುದು ತಟ್ಟಬಲ್ಲದು, ಮತ್ತು ನಿಮಗೆ ಭಯವನ್ನುಂಟು ಮಾಡುವವರು ಯಾರಿರುತ್ತಾರೆ? ಅದರ ಅಲ್ಪ ಮಾತ್ರದ್ದೂ ಕೂಡ ನಿಮ್ಮನ್ನು ಎಲ್ಲ ತೊಂದರೆಗಳಿಂದ, ಅಡೆತಡೆಗಳಿಂದ ಹಾಗೂ ಅಪಾಯಗಳಿಂದ ಪಾರು–ಮಾಡುವುದು. ನಿಮ್ಮನ್ನು ಸುತ್ತುವರಿದ ಪೂರ್ತಿ ದೈವೀ ಸಾನ್ನಿಧ್ಯದಿಂದ ನೀವು (ಆಧ್ಯಾತ್ಮಿಕ) ಮಾರ್ಗದಲ್ಲಿ ಸುರಕ್ಷಿತವಾಗಿ ಸಾಗಿ ಹೋಗಬಹುದು, ಏಕೆಂದರೆ ಆ ದೈವೀ ಸಾನ್ನಿಧ್ಯ ಶ್ರೀಮಾತೆಯವರದು, ಎಲ್ಲ ಪೀಡೆಗಳನ್ನು ನಿರ್ಲಕ್ಷಿಸುವಂತಹದು, ವಿರೋಧ ಎಷ್ಟೇ ಸಾಮರ್ಥ್ಯಪೂರ್ಣವಾಗಿರಲಿ, ಅದು ಈ ಲೋಕದ್ದೇ ಆಗಿರಲಿ ಇಲ್ಲವೆ ಇತರ ಲೋಕಗಳಿಗೆ ಸೇರಿದ್ದೇ ಆಗಿರಲಿ, ಆ ಸಾನ್ನಿಧ್ಯದ ಮೇಲೆ ಯಾವ ಪರಿಣಾಮವನ್ನೂ ಬೀರಲಾರದು. ಅದರ ಸ್ಪರ್ಶ ತೊಂದರೆಗಳು ಸದವಕಾಶ–ಗಳಾಗುವಂತೆ, ವಿಫಲತೆ ಯಶಸ್ಸಾಗುವಂತೆ, ದೌರ್ಬಲ್ಯ ವಿಫಲವಾಗದ ಬಲವಾಗುವಂತೆ ಮಾರ್ಪಾಡು ಮಾಡಬಲ್ಲದು, ಏಕೆಂದರೆ ಶ್ರೀಮಾತೆಯವರ ಕೃಪೆ, ಪರಮೋಚ್ಚನ ಅನುಮತಿ ಇದ್ದ ಹಾಗೆ, ಇಂದಾಗಲಿ ಇಲ್ಲವೆ ನಾಳೆಯಾಗಲಿ ಅದರ ಪರಿಣಾಮ ಖಚಿತ, ಶಾಸನ ರೀತಿಯದು ಮತ್ತು ಎದುರಿಸಲಾಗದಂತಹದು.

**CWSA, 25/9–10** **– ಶ್ರೀ ಅರವಿಂದರು**

*



ಯಾವುದೇ ಬಗೆಯ ಆಸೆಗಳಾಗಲಿ, ಆಸಕ್ತಿಗಳಾಗಲಿ, ಪ್ರಚೋದನೆಗಳಾಗಲಿ, ಆದ್ಯತೆ ನೀಡುವಿಕೆಗಳಾಗಲಿ ಇರುವುದು ಬೇಡ; ಪರಿಪೂರ್ಣ ಸಮತೆ, ಬದಲಾಗದ ಶಾಂತಿ ಮತ್ತು ದೈವೀ ರಕ್ಷಣೆಯಲ್ಲಿ ಪರಿಪೂರ್ಣ ನಂಬಿಕೆ ಇವುಗಳೊಂದಿಗೆ ನೀವು ಸುರಕ್ಷಿತರಾಗಿರುತ್ತೀರಿ, ಇವುಗಳಿಲ್ಲದೆ ಅಪಾಯಕ್ಕೊಳ–ಗಾಗುತ್ತೀರಿ. ನೀವು ಸುರಕ್ಷಿತರಾಗದಿರುವವರೆಗೆ ಕೋಳಿ ಮರಿಗಳು ತಮ್ಮ ತಾಯಿಯ ರೆಕ್ಕೆಗಳಡಿಯಲ್ಲಿ ಆಶ್ರಯ ಪಡೆಯುವ ಹಾಗೆ ಮಾಡುವುದು ಒಳ್ಳೆಯದು.

**CWM, 3/18** **– ಶ್ರೀಮಾತೆ**

*

## ದೈವೀ ರಕ್ಷಣೆ

**ಉಚ್ಚತರ ದೈವೀ ಶಕ್ತಿಯನ್ನು ಭೌತದ್ರವ್ಯ ಹೆಚ್ಚು ತೀವ್ರ ಗತಿಯಿಂದ ಗ್ರಹಿಸುವಂತೆ ಮಾಡುವುದು**

ನಾನು ಈ ತೀರ್ಮಾನಕ್ಕೆ ಬಂದಿದ್ದೇನೆ, ನೋಡಿದ್ದೇನೆ, ಅವಲೋಕಿಸಿದ್ದೇನೆ ಹೆಚ್ಚು ಒಳ್ಳೆಯ ಶಬ್ದದ ಕೊರತೆಯಿಂದಾಗಿ ನಾವು 'ಅತಿಮಾನಸ' ಎಂದು

ಕರೆದದ್ದು ಉಚ್ಚತರ ದೈವೀ ಸಾಮರ್ಥ್ಯಕ್ಕೆ, ಸೃಷ್ಟಿ ಹೆಚ್ಚು ಸೂಕ್ಷ್ಮ ಸಂವೇದನೆ ಇದ್ದದ್ದನ್ನಾಗಿ ಮಾಡುತ್ತದೆ, ಅದನ್ನು ನಾವು ದೈವಿಕವಾದದ್ದು ಎಂದು ಕರೆಯುತ್ತೇವೆ. ಅದನ್ನು ನಾವಿರುವುದಕ್ಕೆ ಹೋಲಿಸಿದರೆ ಅದು ದೈವಿಕವಾಗಿರುತ್ತದೆ, ಆದರೆ ... ಅದು ಏನೋ ಒಂದು (ಅವರೋಹಣದ ಹಾಗೂ ಒತ್ತಡವಿರುವುದರ ಸಂಜ್ಞೆ) ಅದು ಭೌತದ್ರವ್ಯ ದೈವೀ ಶಕ್ತಿಗೆ ಹೆಚ್ಚು ಸೂಕ್ಷ್ಮಸಂವೇದನೆಯುಳ್ಳದ್ದನ್ನಾಗಿ ಪ್ರತಿಕ್ರಿಯಾಶೀಲವಾದದ್ದನ್ನಾಗಿ ಮಾಡಬೇಕು. ಅದನ್ನು ಹೇಳುವುದು ಹೇಗೆ? ಸದ್ಯ ಯಾವುದು ಅಗೋಚರವಾಗಿದೆಯೋ, ಅತಿಸೂಕ್ಷ್ಮವಾಗಿದೆಯೋ ಅಂತಹದು ನಮಗೆ ನೈಜವಾಗಿರುವುದಿಲ್ಲ (ಸಾಮಾನ್ಯ ಮನುಷ್ಯರಿಗೆ ಎಂಬ ಅರ್ಥದಲ್ಲಿ ಹೇಳಿದ್ದು). ಮೂರ್ತರೂಪದ ಹಾಗೂ ಮೂರ್ತರೂಪದವಲ್ಲದ ವಿಷಯಗಳಿವೆ ಎಂದು ನಾವು ಹೇಳುತ್ತೇವೆ. ಭೌತಿಕವಲ್ಲದ ಈ ಅಪಾರ ಸಾಮರ್ಥ್ಯ ಪೃಥ್ವಿಯ ಮೇಲೆ ಮೂರ್ತರೂಪದ್ದಾಗಿರುವ ವಿಷಯಗಳಿಗಿಂತ ಹೆಚ್ಚು ಮೂರ್ತರೂಪದಲ್ಲಿ ಸಾಮರ್ಥ್ಯವುಳ್ಳದ್ದಾಗುತ್ತದೆ, ಹೌದು, ಅದೇ ಅದು.

ಇದು ಅತಿಮಾನಸ ಸತ್ತೆಗಳಿಗೆ ರಕ್ಷಣೆಯಾಗಿರುತ್ತದೆ ಮತ್ತು ರಕ್ಷಣೆ ದೊರಕಿಸುವ ಸಾಧನವಾಗಿರುತ್ತದೆ. ಅದು ತೋರಿಕೆಯಲ್ಲಿ ಭೌತಿಕವಾಗಿರುವುದಿಲ್ಲ, ಆದರೆ ಭೌತದ್ರವ್ಯದ ಮೇಲೆ ಭೌತಿಕ ವಸ್ತುಗಳಿಗಿಂತ ಹೆಚ್ಚಿನ ಸಾಮರ್ಥ್ಯವಿರುತ್ತದೆ. ಇದು ಹೆಚ್ಚು ಹೆಚ್ಚಾಗಿ, ದಿನದಿಂದ ದಿನಕ್ಕೆ, ಗಳಿಗೆಯಿಂದ ಗಳಿಗೆಗೆ ಸತ್ಯವಾಗುತ್ತಲಿದೆ. ನಾವು ಭಗವಂತ ಎಂದು ಕರೆಯುವುದರಿಂದ ಈ ದೈವೀ ಶಕ್ತಿ ನಿರ್ದೇಶಿತವಾದಾಗ ಅದಕ್ಕೆ ಭೌತದ್ರವ್ಯ ಚಲಿಸುವಂತೆ ಮಾಡುವ ಸಾಮರ್ಥ್ಯವಿದೆ, ತಿಳಿಯಿತೆ? ಅದು ಭೌತಿಕ ಅಪಘಾತ ಉಂಟಾಗುವಂತೆ ಮಾಡಬಲ್ಲದು ಮತ್ತು ಸಂಪೂರ್ಣವಾಗಿ ಭೌತಿಕ ವಸ್ತುವಾಗಿರುವುದರ ಪರಿಣಾಮಗಳನ್ನು ಅಳಿಸಿ ಹಾಕಬಲ್ಲದು. ಅದು ಭೌತದ್ರವ್ಯಕ್ಕಿಂತ ಹೆಚ್ಚು ಬಲಿಷ್ಠವಾಗಿದೆ. ಇದು ಒಟ್ಟಿನಲ್ಲಿ ಹೊಸದಾದದ್ದು ಮತ್ತು ಅರ್ಥಮಾಡಿಕೊಳ್ಳಲಾಗದ್ದು, ಮತ್ತು ಹಾಗಾಗಿ ಜನರ ಸಾಮಾನ್ಯ ಪ್ರಜ್ಞೆಯಲ್ಲಿ ಒಂದು ಬಗೆಯ ಭಯವನ್ನು ಉಂಟುಮಾಡುತ್ತದೆ. ಹೌದು ಅದೇ ಅದು. ಅದು ಮೊದಲಿದ್ದುದು ಆಗಿಲ್ಲ. ಮತ್ತು ನಿಜವಾಗಿ ಅಲ್ಲಿ ಹೊಸದಾದ ಏನೋ ಇದೆ – ಅದು ಇನ್ನು ಮುಂದೆ ಅದಿದ್ದ ಹಾಗಿರುವುದಿಲ್ಲ.

**CWM, 11/315–16** **– ಶ್ರೀಮಾತೆ**

*

**ಆದರ್ಶ ಮನೋಭಾವ**

ಅಸ್ತಿತ್ವಕ್ಕಾಗಿ ನಿಮಗೆ ಒಂದೇ ಕಾರಣವಿದೆ. ಒಂದೇ ಗುರಿಯಿದೆ, ಒಂದೇ ಉದ್ದೇಶವಿದೆ ಅದು ಇಡಿಯಾಗಿ, ಪರಿಪೂರ್ಣವಾಗಿ, ಸಂಪೂರ್ಣವಾಗಿ ಭಗವಂತನಿಗೆ ಮುಡುಪಾಗಿರಿಸಿಕೊಳ್ಳಬೇಕೆಂಬ ಭಾವನೆಯಾಗಿರುತ್ತದೆ, ಅದೆಷ್ಟರ ಮಟ್ಟಿಗೆಂದರೆ ಇನ್ನು ಮುಂದೆ ಅವನಿಂದ ನೀವು ಭಿನ್ನರಾಗಿದ್ದೀರಿ ಎಂದು ಕಂಡುಕೊಳ್ಳಲಾಗದಷ್ಟು, ಇಡಿಯಾಗಿ, ಸಂಪೂರ್ಣವಾಗಿ, ಯಾವುದೇ ವೈಯಕ್ತಿಕ ಪ್ರತಿಕ್ರಿಯೆ ಮಧ್ಯೆ ಪ್ರವೇಶಿಸದಂತೆ ಅವನೇ ನೀವಾಗಿ ಬಿಡುವಷ್ಟು ಆ ಮುಡುಪಾಗಿರಿಸುವಿಕೆ ಇರುತ್ತದೆ; ಇದು ಆದರ್ಶ ಮನೋಭಾವ ಅಲ್ಲದೆ ನೀವು ಜೀವನದಲ್ಲಿ ಹಾಗೂ ಕಾರ್ಯದಲ್ಲಿ ಮುಂದೆ ಸಾಗುವುದಕ್ಕೆ ಅದು ನಿಮ್ಮನ್ನು ಶಕ್ತರನ್ನಾಗಿ ಮಾಡುತ್ತದೆ. ನೀವು ಎಲ್ಲದರಿಂದ ರಕ್ಷಿತರಾಗಿರುತ್ತೀರಿ, ನೀವು ನಿಮ್ಮಿಂದಲೇ ರಕ್ಷಿತರಾಗಿರುತ್ತೀರಿ, ಬರುವ ಎಲ್ಲ ಅಪಾಯಗಳಲ್ಲಿ ನೀವೇ ಅಪಾಯ ತಂದುಕೊಳ್ಳುವುದು ಹೆಚ್ಚಿನ ಅಪಾಯವಾಗಿರುತ್ತದೆ, ಅಹಂಕಾರದ ಆತ್ಮಕ್ಕಿಂತ ಹೆಚ್ಚಿನ ಅಪಾಯ ಬೇರೊಂದಿಲ್ಲ.

**CWM, 7/190** **– ಶ್ರೀಮಾತೆ**

*

**ಎಲ್ಲದರಲ್ಲಿ ಕೇವಲ ದೈವೀ ಸಾನ್ನಿಧ್ಯವನ್ನು ನೋಡುವುದು**

ಈ ಪ್ರಜ್ಞೆಗೆ ಪ್ರತಿಯೊಂದನ್ನು ದಿವ್ಯಾನಂದದ್ದನ್ನಾಗಿ ಬದಲಿಸುವ ಕ್ಷಮತೆ ಇದೆ, ಏಕೆಂದರೆ ವಸ್ತು ವಿಷಯಗಳನ್ನು ಅವುಗಳ ಅಸಮಂಜಸ ತೋರಿಕೆಯಲ್ಲಿ ನೋಡುವುದರ ಬದಲಾಗಿ ಮನುಷ್ಯ ಈಗ ಕೇವಲ ದೈವೀ ಸಾನ್ನಿಧ್ಯವನ್ನು, ದೈವೀ ಸಂಕಲ್ಪವನ್ನು ಮತ್ತು ದೈವೀ ಕೃಪೆಯನ್ನು ಎಲ್ಲೆಡೆಯಲ್ಲಿ ನೋಡುತ್ತಾನೆ ಮತ್ತು ಪ್ರತಿಯೊಂದು ಘಟನೆ, ಪ್ರತಿಯೊಂದು ಅಂಶ, ಪ್ರತಿಯೊಂದು ಪರಿಸ್ಥಿತಿ, ಪ್ರತಿಯೊಂದು ರೂಪ ಒಂದು ರೀತಿಯಲ್ಲಿ ಬದಲಾಗುತ್ತದೆ, ಅದು ನೀಡುವ ವಿವರಣೆಯ ಮೂಲಕ ಮನುಷ್ಯ ಹೆಚ್ಚು ಆತ್ಮೀಯವಾಗಿ ಹಾಗೂ ಗಾಢವಾಗಿ ಭಗವಂತ ಹತ್ತಿರ ತನ್ನನ್ನು ಎಳೆದುಕೊಂಡು ಹೋಗಬಲ್ಲನು. ಅಸಮಂಜಸತೆಗಳು, ಕುರೂಪ ಮಾಯವಾಗುತ್ತವೆ, ಅಲ್ಲಿ ಈಗ ಎಲ್ಲ ವಸ್ತು–ವಿಷಯಗಳಲ್ಲಿ ಪ್ರಕಾಶಿಸುತ್ತಿರುವ ದೈವೀ ಪ್ರೇಮದಲ್ಲಿ ಕೇವಲ ದೈವೀ ಸಾನ್ನಿಧ್ಯದ ಭವ್ಯತೆಯಿದೆ.

ಇದನ್ನು ವಿವರಿಸುವಂತಹ ಅಸಂಖ್ಯಾತ ಪುರಾಣ ಕತೆಗಳಿವೆ.

ಉದಾಹರಣೆಗೆ ನಾವು ಇತ್ತೀಚೆಗೆ ಪ್ರಹ್ಲಾದನ[2] ಕತೆಯನ್ನು ಸಿನಿಮಾ ಒಂದರಲ್ಲಿ ನೋಡಿದ್ದೇವೆ, ಈ ಕತೆಗಳು ಆ ಬಗೆಯ ಪ್ರಜ್ಞೆಯನ್ನು ಉದಾಹರಣೆ ಮೂಲಕ ತೋರಿಸಿಕೊಡುತ್ತವೆ. ನನಗೆ ಮನವರಿಕೆ ಆಗಿದೆಯಷ್ಟೇ ಅಲ್ಲ, ಆದರೆ ಸ್ಪಷ್ಟವಾದ ಅನುಭವ ಕೂಡ ನನಗಾಗಿದೆ: ಯಾವುದೊಂದು ಅಪಾಯ, ಇಲ್ಲವೆ ಒಬ್ಬ ಶತ್ರು, ಇಲ್ಲವೆ ದುಷ್ಟ ಸಂಕಲ್ಪ. ಇಂತಹವೆಲ್ಲದರ ಸಾನ್ನಿಧ್ಯವಿದ್ದಾಗ ನೀವು ಈ ಸ್ಥಿತಿಯಲ್ಲಿ ಉಳಿದುಕೊಳ್ಳಬಲ್ಲಿರಾದರೆ, ಮತ್ತು ಎಲ್ಲ ವಸ್ತು–ವಿಷಯಗಳಲ್ಲಿ ಭಗವಂತನನ್ನು ನೋಡಬಲ್ಲಿರಾದರೆ, ಸರಿ, ಆ ಅಪಾಯ ಯಾವ ಪರಿಣಾಮವನ್ನೂ ಉಂಟು ಮಾಡುವುದಿಲ್ಲ, ದುಷ್ಟ ಸಂಕಲ್ಪ ನಿಮಗೆ ಏನನ್ನೂ ಮಾಡಲಾರದು, ಶತ್ರು ಪರಿವರ್ತನೆ ಹೊಂದುತ್ತಾನೆ ಇಲ್ಲವೆ ದೂರ ಓಡಿ ಹೋಗುತ್ತಾನೆ. ಅದು ನಿಶ್ಚಿತವಾದದ್ದು.

ಆದರೆ ಅತ್ಯಂತ ಮಹತ್ವದ್ದಾದ ಒಂದು ಶಬ್ದವನ್ನು ನಾನು ಅಧಿಕವಾಗಿ ಸೇರಿಸಬೇಕು. ಪ್ರಜ್ಞೆಯ ಈ ಸ್ಥಿತಿಯನ್ನು ಯಾವುದೊಂದು ಉದ್ದೇಶವನ್ನಿಟ್ಟು–ಕೊಂಡು ಅರಸಬಾರದು, ಇಲ್ಲವೆ ಅದು ರಕ್ಷಣೆ ಹಾಗೂ ಸಹಾಯ ನೀಡುವುದೆಂಬ ಕಾರಣಕ್ಕಾಗಿ ಅರಸಬಾರದು. ನೀವು ಅದನ್ನು ನಿಷ್ಕಪಟರಾಗಿ ಸ್ವಯಂಪ್ರೇರಿತವಾಗಿ, ಸತತ ಹೊಂದಿರಬೇಕು, ಅದು ಸತ್ತೆಯ ಸಾಮಾನ್ಯ, ಸ್ವಾಭಾವಿಕ ಹಾಗೂ ಪ್ರಯತ್ನರಹಿತ ರೀತಿಯದಾಗಿರಬೇಕು. ಆಗ ಅದು ಪರಿಣಾಮಕಾರಿ ಆಗುತ್ತದೆ. ಆದರೆ ವಿಶಿಷ್ಟ ಪರಿಣಾಮ ದೊರಕಿಸುವ ವಿಚಾರವನ್ನಿಟ್ಟುಕೊಂಡು ಆ ಚಲನೆಯನ್ನು ಕನಿಷ್ಠ ಮಟ್ಟದಲ್ಲೇ ಆಗಲಿ

---

2. ಭಾರತದ ಪುರಾಣ ಕತೆಯಲ್ಲಿ ಪ್ರಹ್ಲಾದ, ವಿಷ್ಣುವಿನ ಕಡುವೈರಿಯಾಗಿದ್ದ ರಾಜ ಹಿರಣ್ಯಕಶಿಪುವಿನ ಮಗನಾಗಿದ್ದ. ಆ ರಾಜ ತನ್ನ ಸಾಮ್ರಾಜ್ಯದಲ್ಲಿ ವಿಷ್ಣುವಿನ ಪೂಜೆ ಮಾಡುವುದನ್ನು ನಿಷೇಧಿಸಿದ್ದ ಮತ್ತು ತನ್ನದೇ ಅರಮನೆಯಲ್ಲಿ ತನ್ನ ಮಗ ವಿಷ್ಣುವಿನ ಪೂಜೆ ಮಾಡುತ್ತಿದ್ದಾನೆಂದು ತಿಳಿದಾಗ ಅವನನ್ನು ಹಾವುಗಳಿರುವಲ್ಲಿ ಬಿಟ್ಟುಕೊಟ್ಟ, ಅವು ಅವನನ್ನು ಕಚ್ಚಲಿಲ್ಲ. ನಂತರ ಅವನನ್ನು ಪರ್ವತ ಶಿಖರಕ್ಕೆ ಒಯ್ದು ಅಲ್ಲಿಂದ ಸಮುದ್ರದಲ್ಲಿ ಬೀಳುವಂತೆ ಮಾಡಿದ, ಆದರೆ ಮಗುವನ್ನು ಪವಾಡ ಸದೃಶವಾಗಿ ರಕ್ಷಿಸಲಾಗಿತ್ತು, ಸಮುದ್ರದ ನೀರು ಅವನನ್ನು ಮೇಲ್ಗಡೆ ಕೊಂಡೊಯ್ಯಿತು. ಸಿಟ್ಟಿಗೆದ್ದ ರಾಜ ಮಗುವನ್ನು ಕೇಳಿದ: “ನಿನ್ನನ್ನು ರಕ್ಷಿಸಿದವರು ಯಾರು?” ಮಗ: “ವಿಷ್ಣು ಎಲ್ಲೆಡೆಯಲ್ಲೂ ಇದ್ದಾನೆ, ಹಾವುಗಳಲ್ಲಿ ಹಾಗೂ ಸಮುದ್ರದಲ್ಲಿ ಕೂಡ ಇರುವನು” ಎಂದು ಉತ್ತರ ಕೊಟ್ಟ.

ಅನುಕರಿಸಲು ಪ್ರಯತ್ನಿಸಿದರೆ ಅದು ಯಶಸ್ವಿಯಾಗುವುದಿಲ್ಲ. ಪರಿಣಾಮವನ್ನು ದೊರಕಿಸಲಾಗುವುದೇ ಇಲ್ಲ. ಆಗ ಬಹುಶಃ ನಿಮ್ಮ ಅಜ್ಞಾನದಲ್ಲಿ ನೀವು ಹೇಳಬಹುದು: “ಓಹ್, ಆದರೆ ಅದನ್ನು ಕುರಿತು ಅವರು ಹೇಳಿದರು, ಆದರೆ ಅದು ಸತ್ಯವಲ್ಲ.” ಅದು ಹಾಗಿರುವುದೇಕೆಂದರೆ ಅಲ್ಲಿ ಎಲ್ಲಿಯೋ ಒಂದೆಡೆ ಕಪಟತನವಿತ್ತು.

ಹಾಗಿರದಿದ್ದರೆ, ನೀವು ನಿಜವಾಗಿ ನಿಷ್ಕಪಟರಾಗಿದ್ದರೆ ಎಂದರೆ ಅದು ಸಮಗ್ರ, ಸ್ವಯಂಪ್ರೇರಿತ ಅನುಭವವಾಗಿದ್ದರೆ ಸರ್ವಸಾಮರ್ಥ್ಯಪೂರ್ಣವಾಗಿರುತ್ತದೆ. ಯಾರೋ ಒಬ್ಬರ ಕಣ್ಣುಗಳಲ್ಲಿ ನೋಡುತ್ತ ಅಲ್ಲಿ ದೈವೀ ಸಾನ್ನಿಧ್ಯವನ್ನು ನೋಡಬಲ್ಲಿರಾದರೆ ಅತ್ಯಂತ ಕೆಟ್ಟ ಚಲನೆಗಳು ನಿರ್ಮೂಲವಾಗುತ್ತವೆ, ಅತ್ಯಂತ ಕೆಟ್ಟ ಅಡೆತಡೆಗಳು ಮಾಯವಾಗುತ್ತವೆ, ಸಂತೋಷದ ಅನಂತಪಟ್ಟು ಜ್ವಾಲೆ ಎಚ್ಚತ್ತುಗೊಳ್ಳುತ್ತದೆ, ಕೆಲವೊಮ್ಮೆ ತನ್ನಲ್ಲಿ ಆದ ಹಾಗೆ ಆ ಇನ್ನೊಬ್ಬನಲ್ಲೂ ಆಗುತ್ತದೆ. ಆ ಇನ್ನೊಬ್ಬ ವ್ಯಕ್ತಿಯಲ್ಲಿ ಅತ್ಯಂತ ಕನಿಷ್ಠ ಮಟ್ಟದ ಸಾಧ್ಯತೆ ಇದ್ದಾಗ ಇಲ್ಲವೆ ಅವನ ದುಷ್ಟ ಸಂಕಲ್ಪದಲ್ಲಿ ಚಿಕ್ಕ ಬಿರುಕುಂಟಾದಾಗ ಆ ಜ್ವಾಲೆ ಪ್ರಜ್ವಲಿಸುತ್ತದೆ.

**CWM, 8/222** **– ಶ್ರೀಮಾತೆ**

*

**ದೈವೀ ಕೃಪೆ ಹಾಗೂ ಕಾರ್ಮಿಕ ಪರಿಣಾಮಗಳು**

ಕೈಕೊಂಡ ಕ್ರಿಯೆಗೆ ಯಾವಾಗಲೂ ಒಂದು ಪರಿಣಾಮವಿರುತ್ತದೆ. ಮತ್ತು ಈ ಪರಿಣಾಮ ಇನ್ನೊಂದು ಪರಿಣಾಮವನ್ನು ಉಂಟುಮಾಡುತ್ತದೆ. ಇದು ಪರಿಪೂರ್ಣವಾಗಿ ತಪ್ಪಿಸಿಕೊಳ್ಳಲಾಗದಂತಹುದು. ಅದು ವಿಶ್ವಂಭರ ನ್ಯಾಯ. ನಿಮ್ಮಲ್ಲಿ ಒಂದು ಕೆಟ್ಟ ಯೋಚನೆ ಬರುತ್ತದೆ, ಅದಕ್ಕೊಂದು ಪರಿಣಾಮವಿರುತ್ತದೆ. ಆ ಪರಿಣಾಮಕ್ಕೆ ಇನ್ನೊಂದು ಪರಿಣಾಮವಿರುತ್ತದೆ. ನೀವದನ್ನು ದೈವೀ ಕೃಪೆಯ ಮಧ್ಯಸ್ಥಿಕೆಯ ಮೂಲಕ ತಪ್ಪಿಸಿಕೊಳ್ಳಬಲ್ಲಿರಿ. ಅದೆಲ್ಲವನ್ನೂ ಬದಲು ಮಾಡುವ ಸಾಮರ್ಥ್ಯವುಳ್ಳ ಏನೋ ಒಂದು ನಿಖರವಾಗಿ ದೈವೀ ಕೃಪೆಯಾಗಿರುತ್ತದೆ. ಆದರೆ ಕೇವಲ ದೈವೀ ಕೃಪೆ ಅದನ್ನು ಬದಲು ಮಾಡಬಹುದು. ಅದು ಎಷ್ಟೊಂದು ಕಟ್ಟುನಿಟ್ಟಿನ ನಿಯಮ, ಎಷ್ಟೊಂದು ಭಯಾನಕವಾಗಿದೆಯೆಂದರೆ ಮನುಷ್ಯ ಒಮ್ಮೆ ಅದರೊಳಗೆ ಪ್ರವೇಶಿಸಿದ ನಂತರ ಅದರಿಂದ ಹೊರಗೆ ಬರಲಾರ. ಮನುಷ್ಯ ಪೃಥ್ವಿಯ ಮೇಲೆ ಇದ್ದ ಕ್ಷಣದಿಂದ ಅವನು ಇದರಲ್ಲಿ ಪ್ರವೇಶಿಸುತ್ತಾನೆ. ಪೃಥ್ವಿಯ

ಇಡೀ ಅಸ್ತಿತ್ವ ಹಾಗಿದೆ, ಅದನ್ನು ಆ ರೀತಿ ರಚಿಸಲಾಗಿದೆ. ಮನುಷ್ಯ ಕೈಕೊಂಡ ಪ್ರತಿಯೊಂದು ಕಾರ್ಯ, ಮಾತನಾಡಿದ ಪ್ರತಿಯೊಂದು ವಿಷಯ, ಯೋಚಿಸಿದ ಹಾಗೂ ಭಾವನೆಗೆ ತಂದುಕೊಂಡ ಪ್ರತಿಯೊಂದು ವಿಷಯ ಇವೆಲ್ಲವುಗಳಿಗೆ ಅವುಗಳ ಪರಿಣಾಮಗಳಿರುತ್ತವೆ ಮತ್ತು ಈ ಪರಿಣಾಮ ಮತ್ತೊಂದು ಪರಿಣಾಮವನ್ನು ತರುತ್ತದೆ ಇತ್ಯಾದಿ. ಈಗ ಮನುಷ್ಯ ಹೆಚ್ಚು ವ್ಯಾವಹಾರಿಕ ದೃಷ್ಟಿಕೋನವನ್ನು ಹೊಂದಲು ಬಯಸಿದರೆ, ಉದಾಹರಣೆಗಳನ್ನು ಕೈಗೆತ್ತಿಕೊಂಡು ಹೇಳಬಹುದು: "ನೀವಿದನ್ನು ಕೈಕೊಂಡರೆ ಅದು ಸ್ವಯಂಚಾಲಿತವಾಗಿ ಅದನ್ನು ಉತ್ಪಾದಿಸಬಹುದು." ಉದಾಹರಣೆಗೆ ಜನರು ಸಂಘಟಿಸಿದ ಸಮಾಜಗಳಲ್ಲಿ ನೀವು ಅಪರಾಧವೊಂದನ್ನು ಎಸಗಿದರೆ ನಿಮ್ಮ ಅಪರಾಧಕ್ಕಾಗಿ ನಿಮ್ಮನ್ನು ಶಿಕ್ಷೆಗೆ ಒಳಪಡಿಸಲಾಗುವುದು, ನಿಮ್ಮದೇ ಪ್ರಜ್ಞೆಯಲ್ಲಿ ನೀವು ತಪ್ಪೊಂದನ್ನು ಮಾಡಿದರೆ ನೀವು ಕೈಕೊಂಡ ತಪ್ಪಿಗಾಗಿ ವೇದನೆಗೆ ಒಳಗಾಗಬೇಕಾಗುವುದು. ಮನುಷ್ಯ ಮಾಡಿಟ್ಟ ನಿಯಮದಲ್ಲಿ, ನಿಯಮದ ಬಗ್ಗೆ ಅಜ್ಞಾನದಿಂದ ಇರುವುದು ನೆಪವಾಗುವುದಿಲ್ಲ ಎಂದು ಯಾವಾಗಲೂ ಹೇಳಲಾಗಿದೆ. ನೀವು ನಿಯಮದ ಬಗ್ಗೆ ಅಜ್ಞಾನಿಗಳಾಗಿದ್ದರೆ ನಿಮಗೆ ಶಿಕ್ಷೆ ದೊರೆಯುವುದು. ತಪ್ಪೆಂದು ತಿಳಿದುಕೊಳ್ಳದೇ ತಪ್ಪು ಮಾಡಿದರೆ ಅದು ತಪ್ಪೇ ಆಗಿರುತ್ತದೆ, ಅದು ನಿಮ್ಮನ್ನು ರಕ್ಷಿಸಲಾರದು, ನೀವು ಶಿಕ್ಷೆಗೆ ಒಳಗಾಗುತ್ತೀರಿ. ಸರಿ ಪ್ರಕೃತಿಯಲ್ಲಿ ವಿಷಯ ಅದೇ ಆಗಿದೆ. ವಿಷ ಎಂದು ತಿಳಿದುಕೊಳ್ಳದೇ ನೀವು ವಿಷ ಸೇವಿಸಿದರೆ ಅದು ನಿಮ್ಮನ್ನು ವಿಷಪೂರಿತರಾದವರನ್ನಾಗಿ ಮಾಡುತ್ತದೆ. ಅರ್ಥವಾಯಿತೆ? ದೈವೀ ಕೃಪೆ ಮಧ್ಯೆ ಪ್ರವೇಶಿಸದಿದ್ದರೆ ಅದು ಹಾಗಿರುತ್ತದೆ. ದೈವೀ ಕೃಪೆ ಸರ್ವಸಾಮರ್ಥ್ಯ–ವುಳ್ಳದ್ದಾದ್ದರಿಂದ ಅದು ಪ್ರತಿಯೊಂದನ್ನು ಬದಲಾಯಿಸಬಲ್ಲದು. ಅದನ್ನೇ ನಾನು ವಿವರಿಸಿ ಹೇಳಿದ್ದೇನೆ. ಆದರೆ ದೈವೀ ಕೃಪೆಯಿಲ್ಲದೆ ಭರವಸೆ ಇರುವುದಿಲ್ಲ. ಏಕೆಂದರೆ ನಿಖರವಾಗಿ ಅಜ್ಞಾನ ಮನುಕುಲದಲ್ಲಿ ಸತತ ಇರುವ ವಾಸ್ತವಾಂಶ.

**CWM, 5/361–62** – ಶ್ರೀಮಾತೆ

*

**ಆಂತರಿಕ ದೇವ ಪ್ರಮುಖಳು ನಮ್ಮ ಮೇಲೆ ಕಾವಲಿರಿಸುತ್ತಾಳೆ ನಮ್ಮನ್ನು ರಕ್ಷಿಸುತ್ತಾಳೆ**

ನಮ್ಮ ಪ್ರಚೋದನೆಗಳಿಗೆ, ಆಸೆಗಳಿಗೆ, ತಳಮಳಕ್ಕೆ, ಹಿಂಸೆಗೆ, ವೇದನೆಗಳಿಗೆ ಹಾಗೂ ನಮ್ಮ ಹೋರಾಟಗಳಿಗೆ ಯಾವ ಮೌಲ್ಯವಿದೆ? ಈ ಎಲ್ಲ ಆಂತರಿಕ

ಕ್ರಮಬದ್ಧ ಬದಲಾವಣೆಗಳನ್ನು ಅನಾವಶ್ಯಕವಾಗಿ ನಮ್ಮ ನಿಯಂತ್ರಣದಲ್ಲಿ ಇಡಲಾಗದ ಕಲ್ಪನೆಯಿಂದ ನಾಟಕೀಯವಾಗಿಸಲಾಗಿರುತ್ತದೆ – ಈ ಶ್ರೇಷ್ಠ ಘನತೆವೆತ್ತ, ದೈವೀ ಪ್ರೇಮ ನಮ್ಮ ಸತ್ತೆಯ ಆಳಾತಿ ಆಳಗಳಿಂದ ನಮ್ಮ ಮೇಲೆ ಬಾಗುತ್ತಿರುವುದರ ಎದುರಿಗೆ ಅವುಗಳಿಗೆ ಯಾವ ಮೌಲ್ಯವಿದೆ, ಆ ದೈವೀ ಪ್ರೇಮ ನಮ್ಮ ದೌರ್ಬಲ್ಯಗಳನ್ನು ಸಹಿಸಿಕೊಳ್ಳುತ್ತದೆ, ದೋಷಗಳನ್ನು ಸರಿಪಡಿಸುತ್ತದೆ, ಗಾಯಗಳನ್ನು ವಾಸಿಮಾಡುತ್ತದೆ, ಪುನರುಜ್ಜೀವನಗೊಳಿಸುವ ಅದರ ಪ್ರವಾಹಗಳಿಂದ ನಮ್ಮ ಜಳಕ ಮಾಡಿಸುತ್ತದೆ. ಏಕೆಂದರೆ ಆಂತರಿಕ ದೇವ ಪ್ರಮುಖಳಾದವಳು ತನ್ನನ್ನು ಹೇರುವುದಿಲ್ಲ, ಒತ್ತಾಯದಿಂದ ಬೇಡುವುದಿಲ್ಲ. ಬೆದರಿಸುವುದಿಲ್ಲ, ತನ್ನನ್ನು ಅರ್ಪಿಸುತ್ತಾಳೆ, ಕೊಟ್ಟುಕೊಳ್ಳುತ್ತಾಳೆ, ತನ್ನನ್ನು ಮರೆತುಬಿಡುತ್ತಾಳೆ, ಅವಳು ಎಂದಿಗೂ ತಪ್ಪು ಹೊರಿಸುವುದಿಲ್ಲ, ಅವಳು ತೀರ್ಮಾನ ನೀಡುವುದಿಲ್ಲ ಇಲ್ಲವೆ ಶಾಪ ಕೊಡುವುದಿಲ್ಲ, ಹೀಗಳೆಯುವುದಿಲ್ಲ, ಆದರೆ ಬಿಟ್ಟೂಬಿಡದೆ ಕಾರ್ಯ ಕೈಕೊಳ್ಳುತ್ತಾಳೆ, ಆ ಕಾರ್ಯ ಒತ್ತಾಯ ಮಾಡದೆ ಪರಿಪೂರ್ಣಗೊಳಿಸುವುದಕ್ಕಾಗಿ, ಪ್ರತಿಯೊಬ್ಬನನ್ನೂ, ಅವನು ಸ್ವೀಕರಿಸುವಷ್ಟರ ಮಟ್ಟಿಗೆ ಶ್ರೀಮಂತಗೊಳಿಸುವುದಕ್ಕಾಗಿ ಇರುತ್ತದೆ; ಮಾತೆಯಾದ ಅವಳ ಪ್ರೇಮ ಫಲವತ್ತಾಗಿರಿಸುತ್ತದೆ, ಪೋಷಿಸುತ್ತದೆ, ಕಾವಲಿರಿಸುತ್ತದೆ ಮತ್ತು ರಕ್ಷಿಸುತ್ತದೆ, ಹಿತವಚನ ನೀಡುತ್ತದೆ ಮತ್ತು ಸಮಾಧಾನಪಡಿಸುತ್ತದೆ, ಏಕೆಂದರೆ ಅವಳು ಪ್ರತಿಯೊಂದನ್ನು ತಿಳಿದುಕೊಳ್ಳುತ್ತಾಳೆ, ಅವಳು ಎಲ್ಲವನ್ನೂ ತಾಳಿಕೊಳ್ಳಬಲ್ಲಳು, ಎಲ್ಲವನ್ನೂ ಮನ್ನಿಸುತ್ತಾಳೆ ಹಾಗೂ ಕ್ಷಮಿಸುತ್ತಾಳೆ, ಎಲ್ಲದಕ್ಕಾಗಿ ಭರವಸೆ ಹೊಂದಿರುತ್ತಾಳೆ, ತಯಾರು ಮಾಡುತ್ತಾಳೆ; ಎಲ್ಲವನ್ನೂ ತನ್ನೊಳಗೆ ಹೊತ್ತು–ಕೊಂಡಿರುತ್ತಾಳೆ, ಎಲ್ಲರಿಗೂ ಸೇರಿರದೆ ಇದ್ದುದನ್ನು ತನ್ನ ಯಜಮಾನಿಕೆಯಲ್ಲಿ ಇರಿಸಿಕೊಂಡಿರುವುದಿಲ್ಲ, ಅವಳು ಎಲ್ಲರ ಮೇಲೆ ಆಳಿಕೆ ನಡೆಸುತ್ತಾಳೆಂಬ ಕಾರಣಕ್ಕಾಗಿ, ಅವಳು ಎಲ್ಲರ ಸೇವಕಳಾಗಿರುವವಳು; ಆ ಕಾರಣದಿಂದಾಗಿ ಶ್ರೇಷ್ಠರಾದವರು, ಕನಿಷ್ಠರಾದವರು ಅವಳೊಡನೆ ರಾಜರಾಗಲು, ದೇವತೆಗಳಾಗಲು ಬಯಸುವವರು ಅವಳ ಹಾಗೆ ಆಗುತ್ತಾರೆ, ತಮ್ಮ ಸಹೋದರರ ಮಧ್ಯದಲ್ಲಿ ಸೇವೆ ಮಾಡುವವರಾಗಿರುತ್ತಾರೆ, ಪೀಡಕರಲ್ಲ.

**CWM, 2/42–43** **– ಶ್ರೀಮಾತೆ**

*

ರಕ್ಷಣೆ ಗುಂಪಿನ ಮೇಲಿರುತ್ತದೆ – ಆದರೆ ಗುಂಪಿನ ಕ್ರಿಯೆ ಸುಸಂಘಟಿತವಾಗಿದ್ದರೆ, ಮತ್ತು ಶಿಸ್ತಿಗೆ ಒಳಪಟ್ಟಿದ್ದರೆ ರಕ್ಷಣೆ ಕಾರ್ಯ ಕೈಕೊಳ್ಳುತ್ತದೆ. ಆದರೆ ವ್ಯಕ್ತಿ ಸ್ವತಂತ್ರನಾಗಿ ಕಾರ್ಯ ಕೈಕೊಂಡಾಗ ರಕ್ಷಣೆ ಅವನ ನಂಬಿಕೆಯ ಪರಿಮಾಣಕ್ಕನುಸಾರವಾಗಿ ಮಾತ್ರ ಕಾರ್ಯ ಕೈಕೊಳ್ಳುತ್ತದೆ.

**CWM, 16/345** **– ಶ್ರೀಮಾತೆ**

*

**ಸೃಷ್ಟಿಯಲ್ಲಿ ದೈವೀ ಸಾನ್ನಿಧ್ಯ**

ಪ್ರತಿಯೊಬ್ಬನಲ್ಲಿ, ಪ್ರಾರಂಭದಿಂದಲೂ ಕೂಡ, ಈ ಆಧ್ಯಾತ್ಮಿಕ ಸಾನ್ನಿಧ್ಯ, ಈ ಆಂತರಿಕ ಪ್ರಕಾಶ ಇರುತ್ತವೆ. ... ವಾಸ್ತವದಲ್ಲಿ ಅದು ಎಲ್ಲೆಡೆಯಲ್ಲೂ ಇರುತ್ತದೆ. ಹಲವಾರು ಸಲ ನಾನದನ್ನು ಕೆಲವೊಂದು ಪಶುಗಳಲ್ಲಿಯೂ ನೋಡಿದ್ದೇನೆ. ಅದು ಹೊಳೆಯುವ ಒಂದು ಬಿಂದುವಾಗಿದ್ದು ಒಂದು ಬಗೆಯ ನಿಯಂತ್ರಣ ಹಾಗೂ ರಕ್ಷಣೆಗಳಿಗೆ ಆಧಾರವಾಗಿರುತ್ತದೆ, ಅದು ಅರ್ಧ ಪ್ರಜ್ಞೆಯಿರುವ ಏನೋ ಒಂದು ಸ್ಥಿತಿಯಲ್ಲಿ, ಉಳಿದ ಸೃಷ್ಟಿಯೊಡನೆ ಒಂದು ಬಗೆಯ ಸಾಮರಸ್ಯ ಸಾಧ್ಯವಾಗುವಂತೆ ಮಾಡುತ್ತದೆ, ಅದರಿಂದಾಗಿ ರಿಪೇರಿ ಮಾಡಲು ಸಾಧ್ಯವಾಗದ ಅನಾಹುತಗಳು ಸತತ ಹಾಗೂ ಸರ್ವಸಾಮಾನ್ಯವಾಗಿ ಉಳಿದುಕೊಳ್ಳದಂತೆ ಆಗುತ್ತದೆ. ಈ ಸಾನ್ನಿಧ್ಯವಿಲ್ಲದಿದ್ದರೆ ಪ್ರಾಣಿಕ ಲೋಕದ ಹಿಂಸಾಚಾರಗಳು ಹಾಗೂ ಭಾವೋದ್ರೇಕಗಳು ಎಷ್ಟೊಂದು ಭವ್ಯವಾಗುತ್ತವೆಂದರೆ ಯಾವುದೇ ಕ್ಷಣದಲ್ಲಿ ಸರ್ವಸಾಮಾನ್ಯ ರೀತಿಯ ಅನಾಹುತಗಳು, ಒಂದು ಬಗೆಯ ಇಡಿಯಾದ ಹಾಳುಮಾಡುವಿಕೆ ಉಂಟಾಗುತ್ತವೆ, ಅದರಿಂದಾಗಿ ಪ್ರಕೃತಿಯ ಪ್ರಗತಿಗೆ ತಡೆಯುಂಟಾಗುತ್ತದೆ. ಆ ಸಾನ್ನಿಧ್ಯ, ಆ ಆಧ್ಯಾತ್ಮಿಕ ಪ್ರಕಾಶ – ಅದನ್ನು ಬಹುಮಟ್ಟಿಗೆ ಆಧ್ಯಾತ್ಮಿಕ ಪ್ರಕಾಶ ಎಂದು ಕರೆಯಬಹುದು. – ಪ್ರತಿಯೊಬ್ಬನ ಸತ್ತೆಯಲ್ಲಿ ಮತ್ತು ಎಲ್ಲ ವಸ್ತು–ವಿಷಯಗಳಲ್ಲಿ ಇದೆ. ಅದಿರುವ ಕಾರಣದಿಂದ ಏನೆಲ್ಲ ಅಸಾಮರಸ್ಯ, ಎಲ್ಲ ಭಾವೋದ್ರೇಕ, ಎಲ್ಲ ಹಿಂಸಾಚಾರ ಇದ್ದಾಗ್ಯೂ ಅಲ್ಲಿ ಕನಿಷ್ಠ ಮಟ್ಟದ ಸರ್ವಸಾಧಾರಣ ಸಾಮರಸ್ಯವಿದೆ, ಅದು ಪ್ರಕೃತಿಯ ಕಾರ್ಯ ಸಿದ್ಧಿಸಿಕೊಳ್ಳುವುದಕ್ಕೆ ಅನುವು ಮಾಡಿಕೊಡುತ್ತದೆ. ಮತ್ತು ಈ ಸಾನ್ನಿಧ್ಯ ಮಾನವ ಸತ್ತೆಯಲ್ಲಿ ಬಹಳ ಸ್ಪಷ್ಟವಾಗಿರುತ್ತದೆ, ಆ ಸತ್ತೆ ಮೊಟ್ಟಮೊದಲನೆಯದಾಗಿದ್ದಾಗ್ಯೂ ಅದರಲ್ಲಿರುತ್ತದೆ. ದೈತ್ಯ ಪ್ರಮಾಣದ ಮಾನವ ಸತ್ತೆಯಲ್ಲಿಯೂ ಕೂಡ, ಪಿಶಾಚ

ಇಲ್ಲವೆ ದೈತ್ಯನ ಅವತಾರ ಎಂಬ ಭಾವನೆ ತಂದುಕೊಡುವವನಲ್ಲಿಯೂ ಕೂಡ ಅಂತರಂಗದಲ್ಲಿ ಏನೋ ಒಂದಿರುತ್ತದೆ, ಅದು ಪ್ರತಿರೋಧಿಸಲಾಗದ ನಿಯಂತ್ರಣವನ್ನು ಮಾಡುತ್ತದೆ – ಆ ನಿಯಂತ್ರಣ ಅತ್ಯಂತ ಕೆಟ್ಟ ಜನರಲ್ಲಿ, ಅದು ಅಸಾಧ್ಯವೆನಿಸಿದಾಗಲೂ ಕೂಡ ಇರುತ್ತದೆ. ಮತ್ತು ಆ ಸಾನ್ನಿಧ್ಯ ಇಲ್ಲದಿದ್ದರೆ, ಸತ್ತೆ ಪ್ರಾಣಿಕದ ವಿರೋಧೀ ಶಕ್ತಿಗಳಿಂದ ಪ್ರತ್ಯೇಕವಾಗಿ ನಿಯಂತ್ರಣಕ್ಕೊಳಗಾಗಿದ್ದರೆ ಈ ಅಸಾಧ್ಯತೆ ಅಸ್ತಿತ್ವದಲ್ಲಿರುವುದಿಲ್ಲ. ಈ ದೈತ್ಯ ಸ್ವರೂಪದ ವಿರೋಧೀ ಶಕ್ತಿಗಳ ತರಂಗ ಪೃಥ್ವಿಯ ಮೇಲೆ ಗುಡಿಸಿಕೊಂಡು ಹೋದ ಪ್ರತಿ ಸಲ, ಯಾವುದೂ, ಎಂದಾದರೂ ಈ ಅಸ್ತವ್ಯಸ್ತತೆಯನ್ನು, ಮತ್ತು ಹರಡಿಕೊಳ್ಳುವ ನಡುಕ ಹುಟ್ಟಿಸುವ ಗಾಬರಿಯನ್ನು ತಡೆಯಲಾರದು, ಮತ್ತು ಯಾವಾಗಲೂ, ಒಂದು ಸಮಯದಲ್ಲಿ, ಅನಿರೀಕ್ಷಿತವಾಗಿ ಮತ್ತು ವಿವರಣೆ ನೀಡಲು ಅಸಾಧ್ಯವೆನಿಸುವ ಹಾಗೆ ಒಂದು ನಿಯಂತ್ರಣ ಮಧ್ಯೆ ಪ್ರವೇಶಿಸುತ್ತದೆ, ಮತ್ತು ತರಂಗ ಸೆರೆಗೊಳಗಾಗುತ್ತದೆ, ಅನಾಹುತ ಇಡಿಯದಾಗಿರುವುದಿಲ್ಲ. ಇದು ಆ ದೈವೀ ಸಾನ್ನಿಧ್ಯದಿಂದಾಗಿ, ಭೌತ ದ್ರವ್ಯದಲ್ಲಿರುವ ಪರಮೋಚ್ಚ ಸಾನ್ನಿಧ್ಯದಿಂದಾಗಿ ಆಗುತ್ತದೆ.

**CWM, 9/339–40** **– ಶ್ರೀಮಾತೆ**

*

**ಏಕೈಕ ಉಪಾಯ**

ಜಗತ್ತಿನ ಸದ್ಯದ ಸ್ಥಿತಿಯಲ್ಲಿ, ಪರಿಸ್ಥಿತಿಗಳು ಯಾವಾಗಲೂ ಕಠಿಣವಾಗಿರುತ್ತವೆ. ಇಡೀ ಜಗತ್ತು ಹೋರಾಟ ಹಾಗೂ ಸಂಘರ್ಷಗಳ ಸ್ಥಿತಿಯಲ್ಲಿದೆ. ಈ ಹೋರಾಟ ಇತ್ಯಾದಿಗಳು, ಪ್ರಕಟವಾಗಲು ಬಯಸುವ ಸತ್ಯ, ಪ್ರಕಾಶ ಹಾಗೂ ಬದಲಾಗಲು ಬಯಸದ, ಗತಕಾಲದಲ್ಲಿ ಸ್ಥಿರಪಡಿಸಲಾದ, ಗಟ್ಟಿಯಾಗಿರಿಸಲಾದ, ಸಾಗಿ ಹೋಗಲು ತಿರಸ್ಕರಿಸುವ ಎಲ್ಲವನ್ನೂ ಪ್ರತಿನಿಧಿಸುವುದರ ನಡುವೆ ಇವೆ. ಸ್ವಾಭಾವಿಕವಾಗಿ ಪ್ರತಿಯೊಬ್ಬ ವ್ಯಕ್ತಿ ತನ್ನದೇ ತೊಂದರೆಗಳ ಬಗ್ಗೆ ಭಾವನೆ ತಂದುಕೊಳ್ಳುತ್ತಾನೆ, ಅವನು ಒಂದೇ ಬಗೆಯ ಅಡೆತಡೆಗಳನ್ನು ಎದುರಿಸ–ಬೇಕಾಗಿರುತ್ತದೆ. ನಿಮಗಾಗಿ ಕೇವಲ ಒಂದೇ ಮಾರ್ಗವಿದೆ. ಅದು ಇಡಿಯಾದ, ಸಂಪೂರ್ಣವಾದ, ಕರಾರುರಹಿತ ಶರಣಾಗತಿ. ಅದನ್ನು ನಾನು ಯಾವ ಅರ್ಥದಲ್ಲಿ ಹೇಳಿರುವೆ ಎಂದರೆ ಕೇವಲ ನಿಮ್ಮ ಕ್ರಿಯೆಗಳನ್ನು, ಮಹತ್ವಾಕಾಂಕ್ಷೆಯನ್ನು ಬಿಟ್ಟುಕೊಡುವುದಷ್ಟೇ ಅಲ್ಲ ಆದರೆ ನಿಮ್ಮ ಎಲ್ಲ ಭಾವನೆಗಳನ್ನೂ ನೀವು ಕೈಕೊಳ್ಳುವುದೆಲ್ಲವನ್ನೂ, ನೀವಿರುವುದೆಲ್ಲವನ್ನೂ ಎಂಬ ಅರ್ಥದಲ್ಲಿ ಪ್ರತ್ಯೇಕವಾಗಿ

ಭಗವಂತನಿಗೆ ಅರ್ಪಿಸುವುದಾಗಿರುತ್ತದೆ. ಹಾಗಾಗಿ ನೀವು ಸುತ್ತುವರಿದವರ ಪ್ರತಿಕ್ರಿಯೆಗಳ ಮೇಲ್ಗಡೆಗಿದ್ದ ಹಾಗೆ ಭಾವನೆ ತಂದುಕೊಳ್ಳುತ್ತೀರಿ, ಕೇವಲ ಮೇಲಿರುವ ಭಾವನೆಯನ್ನಷ್ಟೇ ಅಲ್ಲ, ಆದರೆ ದೈವೀ ಕೃಪೆ ನಿಮ್ಮನ್ನು ಅವರಿಂದ ರಕ್ಷಿಸುತ್ತಿರುವ ಭಾವನೆಯನ್ನೂ ತಂದುಕೊಳ್ಳುತ್ತೀರಿ. ಒಮ್ಮೆ ನಿಮ್ಮಲ್ಲಿ ಆಸೆಗಳಿಲ್ಲದಂತಾದಾಗ, ಮಾನವ ಸತ್ತೆಗಳಿಂದ, ಅವರು ಯಾರೇ ಆಗಿರಲಿ, ಬಹುಮಾನ ಸ್ವೀಕರಿಸುವ ಎಲ್ಲ ಆವಶ್ಯಕತೆಗಳನ್ನು ಬಿಟ್ಟುಕೊಟ್ಟಾಗ – ಎಂದೂ ವಿಫಲವಾಗದ, ಪರಮೋಚ್ಚನಿಂದ ಬಂದ ಬಹುಮಾನ ಮಾತ್ರ ದೊರಕಿಸಲು ಯೋಗ್ಯವಾದದ್ದು ಎಂದು ತಿಳಿದುಕೊಂಡಾಗ, ಒಮ್ಮೆ ಬಾಹ್ಯ ಸತ್ತೆಗಳು ಹಾಗೂ ವಸ್ತು–ವಿಷಯಗಳು ಇವುಗಳಲ್ಲಿ ಆಸಕ್ತಿ ಕಳೆದುಕೊಂಡಾಗ ನೀವು ಒಮ್ಮೆಗೆ ನಿಮ್ಮ ಹೃದಯದಲ್ಲಿ ಈ ಸಾನ್ನಿಧ್ಯವನ್ನು, ದೈವೀ ಶಕ್ತಿಯನ್ನು ಹಾಗೂ ಸದಾ ನಿಮ್ಮೊಡನೆ ಇರುವ ದೈವೀ ಕೃಪೆಯನ್ನು ಭಾವನೆಗೆ ತಂದುಕೊಳ್ಳುತ್ತೀರಿ.

ಮತ್ತು ಬೇರೆ ಉಪಾಯವಿಲ್ಲ. ಅದು ಮಾತ್ರ ಒಂದು ಉಪಾಯವಾಗಿದೆ, ಅಪವಾದವಿಲ್ಲದೆ ಎಲ್ಲರಿಗೂ ಒಂದು ಉಪಾಯವಾಗಿದೆ. ವೇದನೆಗೆ ಒಳಗಾದ ಎಲ್ಲರಿಗೂ ಹೇಳಬೇಕಾದುದು ಒಂದೇ ವಿಷಯವಾಗಿದೆ: ಎಲ್ಲ ವೇದನೆ, ಶರಣಾಗತಿ ಇಡಿಯಾಗಿರುವುದಿಲ್ಲ ಎಂಬುದರ ಕುರುಹಾಗಿರುತ್ತದೆ. ಆಗ ನಿಮ್ಮಲ್ಲಿ ಒಂದು "ಏಟಿನ ಸದ್ದು 'bang' ಕೇಳಿಬಂದಾಗ "ಓ ಇದು ಕೆಟ್ಟದ್ದಾಗಿದೆ" ಇಲ್ಲವೆ "ಈ ಪರಿಸ್ಥಿತಿ ಕಠಿಣವಾಗಿದೆ" ಎಂದು ಹೇಳುವುದರ ಬದಲಾಗಿ "ನನ್ನ ಶರಣಾಗತಿ ಪೂರ್ಣವಾಗಿಲ್ಲ" ಎಂದು ಹೇಳುತ್ತೀರಿ. ಆಗ ಅದು ಸರಿಯಾಗಿರುತ್ತದೆ. ಆಗ ನಿಮಗೆ ಸಹಾಯ ಮಾಡುವ, ಹಾಗೂ ಮುಂದೆ ಕರೆದೊಯ್ಯುವ ದೈವೀ ಕೃಪೆಯ ಬಗ್ಗೆ ಭಾವನೆ ತಂದುಕೊಳ್ಳುತ್ತೀರಿ ಮತ್ತು ನೀವು ಸಾಗಿ ಹೋಗುತ್ತೀರಿ. ಒಂದು ದಿನ ಯಾವುದೂ ಕ್ಷೋಭೆಯನ್ನುಂಟು ಮಾಡದ ಶಾಂತಿಯಲ್ಲಿ ಹೊರ–ಹೊಮ್ಮುತ್ತೀರಿ. ನೀವು ಎಲ್ಲ ವಿರೋಧೀ ಶಕ್ತಿಗಳಿಗೆ, ವಿರೋಧೀ ಚಲನೆಗಳಿಗೆ, ಆಕ್ರಮಣಗಳಿಗೆ, ತಪ್ಪು ತಿಳಿವಳಿಕೆಗಳಿಗೆ, ದುಷ್ಟ ಸಂಕಲ್ಪಗಳಿಗೆ, ಅದೇ ಬಗೆಯ ಮುಗುಳ್ನಗೆಯಿಂದ ಉತ್ತರ ನೀಡುತ್ತೀರಿ, ಆ ಮುಗುಳ್ನಗೆ ದೈವೀ ಕೃಪೆಯಲ್ಲಿ ಗಾಢ ನಂಬಿಕೆ ಹೊಂದಿರುವುದರಿಂದ ಬರುತ್ತದೆ. ವೇದನೆಯಿಂದ ಹೊರಬರಲು ಅದೊಂದೇ ಮಾರ್ಗ ಇದೆ, ಬೇರಾವ ಮಾರ್ಗ ಇಲ್ಲ.

**CWM, 15/398** – ಶ್ರೀಮಾತೆ

*

## ಮೃತ್ಯುವಿನ ನಂತರ ಶ್ರೀಮಾತೆಯವರ ರಕ್ಷಣೆ

ಪ್ರತಿದಿನ ರಾತ್ರಿಕಾಲದಲ್ಲಿ, ಅದೇ ಸಮಯದಲ್ಲಿ ಕೇವಲ ಪಾರ್ಥಿವ ವಾತಾವರಣ ಮತ್ತು ಚೈತ್ಯಾತ್ಮಿಕ ವಾತಾವರಣ ಇವುಗಳ ನಡುವೆ ಪ್ರಾಣಿಕವನ್ನು ದಾಟಿಕೊಂಡು ಹೋಗುವ ರಕ್ಷಣೆಯ ಒಂದು ಮಾರ್ಗವನ್ನು ರಚಿಸಲು ಕಾರ್ಯ ಕೈಕೊಳ್ಳುತ್ತಿದ್ದೆ, ಅದರಿಂದಾಗಿ ಜನರು ಪ್ರಾಣಿಕದ ಮೂಲಕ ಸಾಗಿ ಹೋಗ–ಬೇಕಾಗುತ್ತಿರಲಿಲ್ಲ. (ಅದು ಪ್ರಜ್ಞಾಪೂರ್ಣರಾದವರಿಗಾಗಿ ಇತ್ತು, ಜ್ಞಾನವಿಲ್ಲದವರಿಗೆ ಅದು ಬಹಳ ಕಠಿಣವಾದ ದಾಟಿ ಹೋಗುವಿಕೆ – ನರಕ ಸದೃಶವಾದದ್ದು) ನಾನು ಈ ಕಾರ್ಯವನ್ನು ಕೈಕೊಳ್ಳುತ್ತಿದ್ದೆ, ಮಾರ್ಗವನ್ನು ತಯಾರಿಸುತ್ತಿದ್ದೆ. (ಅದು ಸುಮಾರು 1903 ಇಲ್ಲವೆ 1904ರ ಸಮಯದಲ್ಲಾಗಿರಬೇಕು. ನನಗೆ ನಿಖರವಾಗಿ ನೆನಪಿನಲ್ಲಿಲ್ಲ.), ಅದನ್ನು ಹಲವಾರು ತಿಂಗಳುಗಳ ಕಾಲ ಕೈಕೊಂಡಿದ್ದೆ. ಆ ಸಮಯದಲ್ಲಿ ಎಲ್ಲ ಬಗೆಯ ಅಸಾಧಾರಣ ವಿಷಯಗಳು ಸಂಭವಿಸಿದವು. ನಾನು ಅದನ್ನು ಕುರಿತು ದೀರ್ಘ ಕತೆಗಳನ್ನು ಹೇಳಬಹುದು.

ನಂತರ ನಾನು ತ್ಲೆಮ್‌ಸೆನ್ (Tlemlen)ಗೆ ಹೋದಾಗ ಶ್ರೀಮತಿ ಥಿಯೋನ್‌ಳಿಗೆ ಅದನ್ನು ಕುರಿತು ಹೇಳಿದೆ. ಅವಳು 'ಹೌದು, ನೀನು ಪೃಥ್ವಿಯ ಮೇಲೆ ಕೈಕೊಳ್ಳಲು ಬಂದಿರುವ ಕಾರ್ಯದ ಒಂದು ಭಾಗ ಅದು. ಅತ್ಯಲ್ಪ ಪ್ರಮಾಣದಲ್ಲಿ ಚೈತ್ಯಸತ್ತೆಯ ಬಗ್ಗೆ ಎಚ್ಚತ್ತುಕೊಂಡವರು, ನಿನ್ನ ಪ್ರಕಾಶ ನೋಡಬಲ್ಲವರು ಮೃತ್ಯುವಿನ ಸಮಯದಲ್ಲಿ ನಿನ್ನ ಪ್ರಕಾಶದತ್ತ ಹೋಗುವರು ಮತ್ತು ಅವರು ಎಲ್ಲಿಯಾದರೂ ಮೃತ್ಯುವಶವಾಗಿರಲಿ ನೀನು ದಾಟಿ ಹೋಗಲು ಅವರಿಗೆ ಸಹಾಯ ಮಾಡುವಿ." ಮತ್ತು ಈ ಕಾರ್ಯ ಸತತ ನಡೆಯು–ವಂತಹದು. ಅದು ನನಗೆ ಅಸಾಧಾರಣವಾದ ಅನುಭವಗಳನ್ನು ಕೊಟ್ಟಿದೆ, ಜನರು ತಮ್ಮ ದೇಹ ತ್ಯಜಿಸಿದ ಮೇಲೆ ಏನಾಗುತ್ತದೆ ಎಂಬುದನ್ನು ಕುರಿತು ಆ ಅನುಭವಗಳಿವೆ. ನನಗೆ ಎಲ್ಲ ಬಗೆಯ ಅನುಭವಗಳಾಗಿದ್ದವು, ಎಲ್ಲ ಬಗೆಯ ಉದಾಹರಣೆಗಳಿದ್ದವು – ಅದು ನಿಜವಾಗಿ ಬಹಳ ಸ್ವಾರಸ್ಯಕರವಾದದ್ದು.

*

## ಮೃತ್ಯುವಿನ ನಂತರ ಶ್ರೀ ಅರವಿಂದರ ರಕ್ಷಣೆ

ಇತ್ತೀಚೆಗೆ 'M'ನ ಸಹೋದರಿ ಮರಣ ಹೊಂದಿದಳು, (ಮನೋವೈಜ್ಞಾನಿಕವಾಗಿ ಅವಳು ಭಯಾನಕ ಸ್ಥಿತಿಯಲ್ಲಿದ್ದಳು. – ಅವಳಲ್ಲಿ

ನಂಬಿಕೆಯಿರಲಿಲ್ಲ.) ಸರಿ, ಅವಳು ಮರಣ ಹೊಂದುತ್ತಿರುವಳು ಎಂದು ನನಗೆ ತಿಳಿದ ದಿನದಂದು ನಾನು ಅಟ್ಟದ ಮೇಲೆ ಸ್ನಾನದ ಕೋಣೆಯಲ್ಲಿದ್ದೆ, ಶ್ರೀ ಅರವಿಂದರ ಸಂಪರ್ಕದಲ್ಲಿದ್ದೆ ಎಂಬುದು ನನ್ನ ನೆನಪಿನಲ್ಲಿದೆ. ಅವರ ಬಳಿ ಒಂದು ಬಗೆಯ ಮಾತುಕತೆ ನಡೆಸಿದ್ದೆ. (ಇಂತಹದು ಬಹಳ ಸಲ ನಡೆದಿರುತ್ತದೆ.) ನಾನು ಅವರಿಗೆ ಕೇಳಿದೆ: "ಆಶ್ರಮದಲ್ಲಿ ಮೃತ್ಯು ಹೊಂದುವ ಇಂತಹ ಜನರಿಗೆ ಏನಾಗುತ್ತದೆ?" ಅವರು "ಅಲ್ಲಿ ನೋಡು" ಎಂದು ಉತ್ತರ ನೀಡಿದರು. ನಾನು ಅವಳು ಮೃತ್ಯುವಶವಾಗುತ್ತಿರುವುದನ್ನು ನೋಡಿದೆ, ಮತ್ತು ಅವಳ ಹಣೆಯ ಮೇಲೆ ಘನ ರೂಪದಲ್ಲಿ ಸುವರ್ಣದ ಪ್ರಕಾಶ ಹೊಂದಿರುವ ಶ್ರೀ ಅರವಿಂದರ ಸಂಕೇತವಿರುವುದನ್ನು ನೋಡಿದೆ, (ಬಹಳ ಪ್ರಕಾಶಮಯವಾಗಿರಲಿಲ್ಲ, ಬಹಳ ಮೂರ್ತರೂಪದ್ದಾಗಿತ್ತು.) ಅದು ಅಲ್ಲಿತ್ತು. ಈ ಕುರುಹಿನ ಸಾನ್ನಿಧ್ಯದೊಂದಿಗೆ ಮನೋವೈಜ್ಞಾನಿಕ ಸ್ಥಿತಿಗೆ ಬಹಳ ಮಹತ್ವ ಉಳಿಯಲಿಲ್ಲ. – ಅವಳನ್ನು ಏನೂ ಸ್ಪರ್ಶಿಸಲಿಲ್ಲ. ಅವಳು ಬಹಳ ಶಾಂತ ರೀತಿಯಿಂದ ಮೃತ್ಯುವನ್ನಪ್ಪಿದಳು. ಆಗ ಶ್ರೀ ಅರವಿಂದರು: "ಆಶ್ರಮದಲ್ಲಿ ಜೀವಿಸಿದವರೆಲ್ಲ ಮತ್ತು ಅಲ್ಲಿ ಮೃತ್ಯುವಶ–ವಾದವರು ಸ್ವಯಂಚಾಲಿತವಾಗಿ ಅದೇ ಬಗೆಯ ರಕ್ಷಣೆ ಪಡೆಯುತ್ತಾರೆ, ಅವರ ಆಂತರಿಕ ಸ್ಥಿತಿ ಏನೇ ಆಗಿರಲಿ," ನನಗೆ ಆಶ್ಚರ್ಯವಾಯಿತು ಎಂದು ಹೇಳಲಾರೆ, ಆದರೆ ನಾನು ಆ ಬಲಿಷ್ಠ ಸಾಮರ್ಥ್ಯವನ್ನು ಪ್ರಶಂಸಿದೆ, ಆ ಸಾಮರ್ಥ್ಯದ ಮೂಲಕ ಆಶ್ರಮದಲ್ಲಿದ್ದರು, ಅಲ್ಲಿ ಮೃತ್ಯುವನ್ನಪ್ಪಿದರು ಎಂಬ ಸರಳ ವಾಸ್ತವ ಸಂಗತಿ ಆ ಸಂಕ್ರಮಣದ ಸ್ಥಿತಿಯಲ್ಲಿ ಅತಿ ಹೆಚ್ಚಿನ ಸಹಾಯ ಪಡೆಯಲು ಅವರನ್ನು ಅರ್ಹರನ್ನಾಗಿ ಮಾಡಿತ್ತು.

**(ಅನುಯಾಯಿಯೊಂದಿಗೆ ಮಾತುಕತೆ, ಜೂನ 24, 1961 – ಶ್ರೀಮಾತೆ**

*

**ಶ್ರೀಮಾತೆಯವರ ಶುಭ್ರ ಪ್ರಕಾಶ**

ನನ್ನ ಮಗು, ಈ ಪ್ರಕಾಶದಿಂದ ಆವೃತನಾದವನಿಗೆ ಪ್ರತಿಯೊಂದರಿಂದ ವಿಶೇಷ ರಕ್ಷಣೆ ಇರುತ್ತದೆ. ಈ ಪ್ರಕಾಶದಿಂದ ಆವೃತನಾದವನದು ವಿಶಿಷ್ಟ ಮಾದರಿಯಾಗಿರುತ್ತದೆ. ಮನುಷ್ಯ ಭರವಸೆ ಇಟ್ಟುಕೊಳ್ಳಬಹುದಾದ ಅತ್ಯಂತ ಒಳ್ಳೆಯ ರಕ್ಷಣೆ. ಅದು ಪ್ರಾಣಿಕ ರಕ್ಷಣೆಯಾಗಿದ್ದು ಎಲ್ಲೆಡೆ ಸಮನಾಗಿ ಕಾರ್ಯ ಕೈಕೊಳ್ಳುತ್ತದೆ. ಮನುಷ್ಯ ಅದಕ್ಕಿಂತ ಹೆಚ್ಚು ಒಳ್ಳೆಯ ರಕ್ಷಣೆ ಹೊಂದಲಾರ. ಅದು

ಕಟ್ಟಕಡೆಯ ರಕ್ಷಣೆ. ಈ ಪ್ರಕಾಶದಿಂದ ರಕ್ಷಿತನಾದ ಮನುಷ್ಯ ಸಮೃದ್ಧಿಯಲ್ಲಿ, ಸಂತೋಷದಲ್ಲಿ ನಡೆದಾಡುತ್ತಾನೆ, ದೈವೀ ಕೃಪೆ ಕಾಳಜಿ ವಹಿಸುತ್ತದೆ. ಅದು ಅಸಾಧಾರಣ ವಿಷಯ. ಅವನು ಮುಕ್ತ ಸ್ಥಿತಿಯಲ್ಲಿ ನಡೆದಾಡುತ್ತಾನೆ, ಏಕೆಂದರೆ ಯಾವುದೂ ಅವನನ್ನು ಸ್ಪರ್ಶಿಸಲಾರದು, ಅವನ ಮಾರ್ಗಕ್ಕೆ ಅಡ್ಡಬರುವ ಶಕ್ತಿಗಳು ಮತ್ತು ಅಜ್ಞಾನದ ಶಕ್ತಿಗಳು ಅವನ ಬಳಿ ಬರಲಾರವು, ಏಕೆಂದರೆ ಅವನು ನನ್ನ ಪ್ರಕಾಶದಿಂದ ಆವೃತನಾಗಿರುತ್ತಾನೆ. ಪ್ರಕಾಶದ ಪದರಿನಿಂದ ಅವನನ್ನು ಕಾಪಾಡಿಕೊಂಡು ಬರಲಾಗಿರುತ್ತದೆ, ಆ ಪದರಿನಲ್ಲಿ ಯಾವುದೂ ಒಳನುಗ್ಗಿ ಹೋಗಲಾರದು.

ಬಹಳಷ್ಟು ಜನರು ಆ ಪ್ರಕಾಶವನ್ನು ಕಾಪಾಡಿಕೊಂಡು ಬರಲಾರರು. ಅದನ್ನು ಕಾಪಾಡಿಕೊಂಡು ಬರುವ ಕ್ಷಮತೆ ಅತಿ ಕಡಿಮೆ ಜನರಲ್ಲಿರುತ್ತದೆ. ಈ ಪ್ರಕಾಶವನ್ನು ಸತತ ಕಾಪಾಡಿಕೊಂಡು ಬರುವುದು ಬಹಳ ಕಠಿಣವಾದದ್ದು. ಹಗಲು, ರಾತ್ರಿ ಅದನ್ನು ಕಾಪಾಡಿಕೊಂಡು ಬರಲು, ಅದರಿಂದ ಅವೃತರಾಗಿದ್ದು–ಕೊಂಡಿರಲು ನಿಮ್ಮಲ್ಲಿ ಸಾಮರ್ಥ್ಯವಿದ್ದರೆ ಅದು ಅನನ್ಯವಾದ ಏನೋ ಒಂದು, ಏಕೆಂದರೆ ನಿಮಗೆ ಜಗತ್ತಿನಲ್ಲಿ ಅತ್ಯಂತ ಒಳ್ಳೆಯ ರಕ್ಷಣೆ ನಿಮಗಿರುತ್ತದೆ. ... ಈ ಪ್ರಕಾಶ ಪರಿಪೂರ್ಣ ಪ್ರಶಾಂತತೆ ಹಾಗೂ ಬದಲಾಗದ ನಂಬಿಕೆಯಿದ್ದಾಗ ಮಾತ್ರ ಅಸ್ತಿತ್ವದಲ್ಲಿರಬಲ್ಲದು. ಒಮ್ಮೆ ನಾವು ಇನ್ನೊಂದು ಬದಿಗೆ ವಾಲಿಕೊಂಡರೆ ಅದು ಮಾಯವಾಗುತ್ತದೆ. ಆ ಕಾರಣದಿಂದಾಗಿ ಅದು ಕಠಿಣವಾಗಿದೆ. ನೀವು ಪ್ರಶಾಂತತೆಯಲ್ಲಿ ಉಳಿದುಕೊಂಡರೆ ನೀವು ಇದನ್ನು ನಿಮ್ಮೊಡನೆ ಕಾಪಾಡಿಕೊಂಡು ಬರುತ್ತೀರಿ ಎಂಬುದರಲ್ಲಿ ಸಂಶಯವಿರುವುದಿಲ್ಲ. ಮನುಷ್ಯ ಪ್ರಯತ್ನ ಮಾಡಿದರೆ ಯಶಸ್ವಿಯಾಗುವನು.

ಇದು ನನ್ನ ಪ್ರಾಣಿಕ ಪ್ರಕಾಶ, ಅದು ನಿಮ್ಮನ್ನು ಎಲ್ಲ ಕೆಟ್ಟ ಶಕ್ತಿಗಳಿಂದ ರಕ್ಷಿಸುವುದು. ಮನುಷ್ಯ ಈ ಪಾರದರ್ಶಕ ಪೆಟ್ಟಿಗೆಯಲ್ಲಿ ಸಂಪೂರ್ಣವಾಗಿ ಒಳಸೇರಿಕೊಂಡ ಭಾವನೆ ತಂದುಕೊಳ್ಳುತ್ತಾನೆ, ಅದು ಮಂಜುಗಡ್ಡೆಯ ಹಾಗಿದೆ. ಈ ಮಂಜುಗಡ್ಡೆ ಮೃದುವಾಗಿದೆ, ಶಾಂತಿಯಿಂದಿದೆ. ನಮ್ಮನ್ನು ರಕ್ಷಿಸುವ, ನಮಗೆ ಮಾರ್ಗದರ್ಶನ ನೀಡುವ, ನಮ್ಮ ಗಾಢನಂಬಿಕೆಯನ್ನು ಹೆಚ್ಚಿಸುವ ಪ್ರಕಾಶದಿಂದ ಮನುಷ್ಯ ಆವೃತನಾಗಿರುವಂತಹ ಸಂತೋಷಕರ ಸಂವೇದನೆ ಪಡೆಯುತ್ತಾನೆ. ಏಕೆಂದರೆ ನಿಜವಾಗಿ ಇದು ಎಲ್ಲ ಆಕ್ರಮಣಗಳಿಂದ ರಕ್ಷಿಸುತ್ತದೆ, ಅದು

ಪ್ರಾಣಿಕದ್ದೇ ಆಗಿರಲಿ ಇಲ್ಲವೆ ಬೇರಾವುದೇ ಆಗಿರಲಿ, ಅದಕ್ಕಾಗಿ ಮನುಷ್ಯ ಈ ಪ್ರಕಾಶದಿಂದ ಆವೃತನಾಗಿ ಉಳಿದುಕೊಳ್ಳಬೇಕು.

ನನ್ನಲ್ಲಿ ಈ ರೀತಿಯ ಪ್ರಕಾಶಗಳ ಶ್ರೇಣಿ ಇದೆ, ಅವು ಉಚ್ಚ ಸ್ತರದಿಂದ ಉಚ್ಚ ಸ್ತರಕ್ಕೆ ಏರಿ ಹೋಗುತ್ತವೆ, ಕೊನೆಗೆ ಪ್ರಕಾಶ ಶುಭ್ರವರ್ಣದ್ದಾಗುತ್ತದೆ. ಅದು ಹಾಳೆ ಇರುವ ಹಾಗೆ ಶುಭ್ರವಾಗಿರುತ್ತದೆ. (ಶ್ರೀಮಾತೆಯವರು ತಮ್ಮ ಮೇಜಿನ (table) ಮೇಲಿರುವ ಹಾಳೆಯೊಂದನ್ನು ತೋರಿಸುತ್ತಾರೆ.) ಅದು ಪರಿಶುದ್ಧ ಬಿಳಿ ಬಣ್ಣದ್ದಾಗಿದೆ. ಅದು ಘನ ರೂಪದಲ್ಲಿ ಬಿಳಿಬಣ್ಣದ್ದು ಮತ್ತು ಈ ಪ್ರಕಾಶ, ನನ್ನದೇ ಆದ ಈ ಬಿಳಿ ಪ್ರಕಾಶಕ್ಕೆ ಅಸಾಧಾರಣ ಸಾಮರ್ಥ್ಯವಿದೆ. ಇದನ್ನು ಹೊಂದುವುದು ಬಹಳ ಕಠಿಣವಾದದ್ದು, ಅದು ಬಹಳ ದೂರದಲ್ಲಿದೆ, ಅದರ ಹತ್ತಿರ ತಲುಪಲು ಮನುಷ್ಯ ಹಂತಗಳ ನಂತರ ಬರುವ ಹಂತಗಳನ್ನು ಮೀರಿ ಹೋಗಬೇಕಾಗುತ್ತದೆ. ಇದು ನಿಜವಾದ ಪ್ರಕಾಶ, ಮನುಷ್ಯ ಅದರಲ್ಲಿ ಆಶ್ರಯ ಪಡೆದರೆ – ನನ್ನ ಬಿಳಿ ಪ್ರಕಾಶದಲ್ಲಿ – ಆಗ ಅವನಿಗೆ ರಕ್ಷಣೆ ಇರುತ್ತದೆ, ಹೋಲಿಸಲಾಗದ ಸಹಾಯವಿರುತ್ತದೆ, ಅವನು ಯಾವುದಕ್ಕೂ ಸ್ಪರ್ಶಿಸಲು ಅನುವು ಮಾಡಿಕೊಡದೆ ಪ್ರತಿಯೊಂದರ ಮೇಲೆ ಜಯ ಸಾಧಿಸಬಲ್ಲನು. ಏಕೆಂದರೆ ಮನುಷ್ಯ ಈ ಪ್ರಕಾಶದಲ್ಲಿದ್ದಾಗ, ವಿರೋಧೀ ಶಕ್ತಿಗಳು ಸ್ಪರ್ಶಿಸುವುದಕ್ಕೆ ಬಂದಾಗ ಕೂಡಲೆ ಮಾಯವಾಗುವವು. ವಿರೋಧಿ ಶಕ್ತಿಗಳಲ್ಲಿ ಯಾವುದೊಂದೂ ಈ ಶುಭ್ರ ಪ್ರಕಾಶದಲ್ಲಿ ಉಳಿದುಕೊಳ್ಳಲಾರದು. ಆಗ ಮನುಷ್ಯ ಭಗವಂತನ ಹಸ್ತಗಳಲ್ಲಿ–ರುತ್ತಾನೆ, ಅವನಿಂದ ಆವೃತನಾಗಿರುತ್ತಾನೆ. ಅದು ಸಾಧ್ಯವಾಗಬಹುದಾದುದರಲ್ಲಿ ಅತ್ಯುಚ್ಚವಾದದ್ದು.

ಮನುಷ್ಯನಲ್ಲಿ ಹೃದಯದಿಂದ ಬರುವ ನಿಜವಾದ ನಂಬಿಕೆ ಇದ್ದರೆ, ಆಗ ಆ ಪ್ರಕಾಶ ಮಾಯವಾಗುವುದಿಲ್ಲ, ಉಳಿದುಕೊಳ್ಳುತ್ತದೆ. ಮನುಷ್ಯ ಪ್ರಶಾಂತನಾಗಿದ್ದರೆ, ಚಲಿಸದ ಈ ನಂಬಿಕೆಯೊಂದಿಗೆ ಶಸ್ತ್ರಸಜ್ಜಿತನಾಗಿದ್ದರೆ, ಸ್ಪರ್ಶಿಸಲಾಗದ ಖಡ್ಗ (ಶ್ರೀಮಾತೆಯವರು ಇದನ್ನು ಕೈಯಿಂದ ತೋರಿಸುತ್ತಾರೆ)ದ ಹಾಗೆ ಆ ನಂಬಿಕೆಯಿದ್ದರೆ ಅದು ಅಲುಗಾಡದೆ ಮೇಲಕ್ಕೇರುತ್ತದೆ, ಸರಿ ಇದರೊಂದಿಗೆ ಮನುಷ್ಯ ಯಾವಾಗಲೂ ನನ್ನ ಪ್ರಕಾಶದಿಂದ ಆವೃತನಾಗಿರುತ್ತಾನೆ. ಅದು ಮನುಷ್ಯನನ್ನು ಬಿಟ್ಟುಕೊಡುವುದಿಲ್ಲ, ಏಕೆಂದರೆ ಅದು ಇರಬೇಕಾದ ರೀತಿಯಲ್ಲಿ ಯೋಗ್ಯವಾದ ಪರಿಸರವನ್ನು ಕಂಡುಕೊಳ್ಳುತ್ತದೆ.

ನನ್ನ ಮಗು, ನೀನು ಈ ನಂಬಿಕೆಯನ್ನು ಅಭಿವೃದ್ಧಿಪಡಿಸಬೇಕು, ಆಗ ಎಲ್ಲವೂ ಸರಿಯಾಗಿ ನಡೆದುಕೊಂಡು ಹೋಗುವುದು. ನನ್ನ ಪರಮೋಚ್ಚ ರಕ್ಷಣೆಯಲ್ಲಿ ಇರುವುದು ಒಂದು ಅದ್ಭುತವಾದ ವಿಷಯ.

**(Blessings of the Grace: pp 13,17). 2nd July 1967**

*

ಹೃದಯದಲ್ಲಿರುವ ದೈವೀ ಸಾನ್ನಿಧ್ಯದಿಂದ ನಿಜವಾದ ಬಲ ಹಾಗೂ ರಕ್ಷಣೆಗಳು ಬರುತ್ತವೆ.

ನೀವು ಈ ದೈವೀ ಸಾನ್ನಿಧ್ಯವನ್ನು ನಿಮ್ಮಲ್ಲಿ ಕಾಪಾಡಿಕೊಂಡು ಬರಬೇಕೆಂದಿದ್ದರೆ ಕಾಳಜಿಪೂರ್ವಕವಾಗಿ ಮಾತು, ನಡೆನುಡಿ ಮತ್ತು ಕ್ರಿಯೆಗಳಲ್ಲಿ ಅಸಭ್ಯತನವನ್ನು ದೂರವಿರಿಸಿರಿ.

*

ನಿಮ್ಮ ನಂಬಿಕೆ ಸರ್ವಸಮರ್ಥನಾದ ಪರಮೋಚ್ಚನ ರಕ್ಷಣೆಯಡಿಯಲ್ಲಿ ನಿಮ್ಮನ್ನಿರಿಸುತ್ತದೆ.

**CWM, 12/154, 309** **– ಶ್ರೀಮಾತೆ**

*

ದೈವೀ ರಕ್ಷಣೆ ಯಾವಾಗಲೂ ನಮ್ಮ ಸುತ್ತ ಇರುತ್ತದೆಂಬುದು ಸತ್ಯವಾದ ಸಂಗತಿ, ಆದರೆ ಅದು ತಪ್ಪಿಸಿಕೊಳ್ಳಲಾಗದ ಅಪಾಯಗಳನ್ನು ಎದುರಿಸುತ್ತಿದ್ದಾಗ ಪೂರ್ತಿಯಾಗಿ ಕಾರ್ಯ ಕೈಕೊಳ್ಳುತ್ತದೆ, ಎಂದರೆ ಭಗವಂತನಿಗಾಗಿ ಕೆಲವೊಂದು ಕಾರ್ಯ ಕೈಕೊಳ್ಳುತ್ತಿದ್ದಾಗ ಮಾರ್ಗದಲ್ಲಿ ಹಠಾತ್ತನೆ ಅಪಾಯಗಳು ಮೇಲೆದ್ದು ಬಂದಾಗ ರಕ್ಷಣೆ, ಅದರ ಅತ್ಯಂತ ಒಳ್ಳೆಯ ರೀತಿಯಲ್ಲಿ, ಕಾರ್ಯಮಾಡುತ್ತದೆ. ಆದರೆ ಅನಿವಾರ್ಯವಾಗಿರದ, ನಿಶ್ಚಿತವಾಗಿ ಉಪಯುಕ್ತ ಎಂದು ಕಂಡುಬರದ, ಅಪಾಯಕಾರಿಯಾದ ಯಾವುದೊಂದು ಕಾರ್ಯವನ್ನು, ದೈವೀ ರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು, ಅದು ನಮ್ಮನ್ನು ಎಲ್ಲ ಪರಿಣಾಮಗಳಿಂದ ರಕ್ಷಿಸುವುದೆಂದು ತಿಳಿದು ಕೈಗೆತ್ತಿಕೊಂಡಾಗ ಅದು ಭಗವಂತನಿಗೆ ಸವಾಲು ಒಡ್ಡಿದ ಹಾಗಿರುತ್ತದೆ. ಮತ್ತು ಭಗವಂತ ಅದನ್ನು ಎಂದೂ ಒಪ್ಪಿಕೊಳ್ಳುವುದಿಲ್ಲ.

**CWM, 14/325** **– ಶ್ರೀಮಾತೆ**

*

ಅಸೂಯೆ, ಸ್ವಾರ್ಥದಿಂದ ಉಂಟಾದ ಅಸಮಾಧಾನ, ನೋವಿಗೊಳಗಾದ ಗರ್ವ ಇವೆಲ್ಲ ಮನುಷ್ಯನನ್ನು ಭಗವಂತನ ರಕ್ಷಣೆಯಿಂದ ಹೊರಗೆಳೆದು ವಿರೋಧೀ ಆಕ್ರಮಣಗಳಿಗೆ ಪ್ರಜ್ಞೆಯ ದ್ವಾರ ತೆರೆದಿರಿಸುತ್ತವೆ.

*

ಭಗವಂತನಿಗೆ ಇಡಿಯಾಗಿ ಶರಣಾಗತರಾದಾಗ, ಆಸೆಗಳಾವೂ ಇಲ್ಲದೇ ಇದ್ದಾಗ ಭೌತಿಕ ರಕ್ಷಣೆ ದೊರಕುವ ಸಾಧ್ಯತೆ ಇರುತ್ತದೆ.

**CWM, 15/20, 47** **– ಶ್ರೀಮಾತೆ**

*

ನೀವು ಜನರ ಮಧ್ಯೆ ಇದ್ದಾಗ ನಿಮ್ಮ ಹಾಗೂ ಆ ಜನರ ಮಧ್ಯೆ ಭಗವಂತನನ್ನಿರಿಸಿರಿ. ಹೀಗೆ ನಿಮ್ಮ ಇಡೀ ಸತ್ತೆ ರಕ್ಷಣೆಗೆ ಒಳಗಾಗುವುದು. ಒಂದು ಹುಳುವಿನ ಗೂಡು ಇದ್ದ ಹಾಗೆ ಇರುವ ಅವನ ರಕ್ಷಣೆಯಲ್ಲಿ ನೀವಿರುತ್ತೀರಿ ಮತ್ತು ಯಾವುದೂ ಅದರಲ್ಲಿ ಒಳನುಗ್ಗಿ ಬರಲು ಸಾಧ್ಯವಿಲ್ಲ.

**Mother you said it so : 17-2-67** **– ಶ್ರೀಮಾತೆ**

*

ನಾಮದ ಸಾಮರ್ಥ್ಯ ಹಾಗೂ ರಕ್ಷಣೆ ಇವುಗಳನ್ನು ಕುರಿತು ನಿನಗಾದ ಅನುಭವ, ಅದೇ ಬಗೆಯ ನಂಬಿಕೆ ಹಾಗೂ ನೆಚ್ಚಿಕೆಗಳಿಂದ ಅದನ್ನು ಉಪಯೋಗಿಸಿದ ಪ್ರತಿಯೊಬ್ಬನದೂ ಆಗಿದೆ. ಹೃದಯದಿಂದ ರಕ್ಷಣೆಗಾಗಿ ಕರೆ ಕೊಡುವವರಿಗೆ ಅದು ಎಂದೂ ವಿಫಲವಾಗದು.

**CWM, 25/308** **– ಶ್ರೀಮಾತೆ**

*

**ವಿರೋಧೀ ಶಕ್ತಿಗಳನ್ನು ದೂರವಿರಿಸಲು ಒಂದು ಮಂತ್ರ**

ನನ್ನ ದೈವೀ ಪ್ರಭುವಿನ ಹೆಸರಿನಲ್ಲಿ, ನನ್ನ ದೈವೀ ಪ್ರಭುವಿನ ಸಲುವಾಗಿ, ನನ್ನ ದೈವೀ ಪ್ರಭುವಿನ ಸಂಕಲ್ಪದೊಂದಿಗೆ, ನನ್ನ ದೈವೀ ಪ್ರಭುವಿನ ಸಾಮರ್ಥ್ಯದೊಂದಿಗೆ ನಾವು ಪೀಡೆಗೆ ಒಳಗಾಗುವುದನ್ನು ಕೂಡಲೆ ನಿಲ್ಲಿಸು.

**Champaklal's Treasures**

*

**ಆಶೀರ್ವಾದ ನೀಡುವ ಪಾಕೀಟು (Blessing pocket) ಕುರಿತು ಒಂದು ಟಿಪ್ಪಣಿ**

ಪಾಕೀಟಿನ ಒಳಗೆ ಕೆಲವು ದಳಗಳಿವೆ, ಆದರೆ ಅವು ಶಕ್ತಿಯಿಂದ ತುಂಬಿಕೊಂಡಿವೆ, ನೀವು ಅವುಗಳನ್ನು ನಿಮ್ಮ ಮೇಲಿಟ್ಟುಕೊಂಡರೆ ನನ್ನೊಡನೆ ಸಂಪರ್ಕವನ್ನು ಕಾಪಾಡಲಾಗುವುದು. ಹಾಗಾಗಿ ಅಂತರಂಗದಲ್ಲಿ ಸಂಬಂಧ ಕಲ್ಪಿಸಿಕೊಂಡರೆ ನೀವು ಆ ಸಂಪರ್ಕವನ್ನು ಸ್ಥಾಪಿಸಬಹುದು, ಒಂದು ಉತ್ತರವನ್ನೂ ಕೂಡ ಪಡೆಯಬಹುದು.

**– ಶ್ರೀಮಾತೆ**

*

ಅವನು ಈ ಪಾಕೀಟನ್ನು ತನ್ನ ಜೇಬಿನಲ್ಲಿ ಇಟ್ಟುಕೊಳ್ಳಲಿ ಮತ್ತು ಖಿನ್ನತೆಯ ಭಾವನೆ ಬಂದಾಗ ಅಲ್ಲಿರುವ ಚಿತ್ರದತ್ತ ನೋಡಲಿ, ಆಶೀರ್ವಾದಗಳು.

**– ಶ್ರೀಮಾತೆ**

**(Champaklal's Treasures)**

*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 3/8/2016 ರ ಬುಧವಾರದಂದು ಮಿರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯು "ಸಮಗ್ರ ಶಿಕ್ಷಣದಲ್ಲಿ ಮೌಲ್ಯಾಧರಿತ ಚಟುವಟಿಕೆಗಳು" ಎಂಬ ಮಾರ್ಗದರ್ಶಿ ಪುಸ್ತಕವನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀಯುತ ಅಜಿತ್ ಸಬ್ನೀಸ್‌ರವರು ಶಾಲೆಗೆ ಸಮರ್ಪಿಸಿದರು. ಪುಸ್ತಕದ ಕಿರು ಪರಿಚಯ ಮತ್ತು ಶಿಕ್ಷಕ ವೃಂದಕ್ಕೆ ಈ ಪುಸ್ತಕದ ಉಪಯುಕ್ತತೆಯನ್ನು ಸವಿಸ್ತಾರವಾಗಿ ವಿವರಿಸಿದರು. ಪುಸ್ತಕದ ರಚನೆಯಲ್ಲಿ ಸಹಕರಿಸಿದ ಶಿಕ್ಷಕ ವೃಂದವನ್ನು ಶ್ಲಾಘಿಸಿದರು. ಸಮಾರಂಭದಲ್ಲಿ ಶಾಲಾ ಆಡಳಿತಾಧಿಕಾರಿ, ಪ್ರಾಂಶುಪಾಲರು ಮತ್ತು ಸಂಸ್ಥೆಯ ಶಿಕ್ಷಕ ಶಿಕ್ಷಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ದಿನಾಂಕ 5/8/2016 ರ ಶುಕ್ರವಾರದಂದು ಮಿರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯ "ಅಂಕುರ–2016" ಎಂಬ ಅಂತರ್‌ಶಾಲಾ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಹಬ್ಬ ನಡೆಯಿತು. ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮದ ಉದ್ಘಾಟನೆಯಾಯಿತು. ಸುಮಾರು 16 ಶಾಲೆಗಳ 550 ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀಯುತ ಅಜಿತ್ ಸಬ್ನೀಸ್ ವಹಿಸಿದ್ದರು. ಮುಖ್ಯಅತಿಥಿಗಳಾಗಿ ಶ್ರೀಯುತ ರವಿ ಕೃಷ್ಣಮೂರ್ತಿ ಮತ್ತು ಶ್ರೀಮತಿ ಅನುರಾಧ ರವಿ ಆಗಮಿಸಿದ್ದರು. ಸಾಂಸ್ಕೃತಿಕ ಹಬ್ಬದಲ್ಲಿ ವಿಜೇತರಾದ ಶಾಲೆಗಳಿಗೆ ಶಾಲಾವತಿಯಿಂದ ಬಹುಮಾನವನ್ನು ವಿತರಿಸಲಾಯಿತು.

ದಿನಾಂಕ 15/8/2016 ರ ಸೋಮವಾರದಂದು ಮಿರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ ಮಹರ್ಷಿ ಶ್ರೀ ಅರವಿಂದರ 144ನೇ ಜನ್ಮ ದಿನಾಚರಣೆ ಮತ್ತು 70ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಧ್ವಜಾರೋಹಣ ಮತ್ತು ಶ್ರೀ ಅರವಿಂದರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಅಜಿತ್ ಸಬ್ನೀಸ್ ತಮ್ಮ ಭಾಷಣದಲ್ಲಿ ಯುವಜನತೆಯ ಕರ್ತವ್ಯದ ಕುರಿತು ಮಾತನಾಡಿದರು. ಶಾಲೆಯ ವಿದ್ಯಾರ್ಥಿಗಳು ದೇಶಭಕ್ತಿ ಗೀತೆ, ಭಾಷಣ, ನೃತ್ಯಗಳ ಮೂಲಕ ಸ್ವಾತಂತ್ರ್ಯ ದೇಶಭಕ್ತಿಗಳ ಮಹತ್ವವನ್ನು ಸಾರಿದರು. ವಂದೇ ಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಯಿತು. ಶಾಲಾ ವಿದ್ಯಾರ್ಥಿಗಳು ಕಾರ್ಯಕ್ರಮ ನಿರ್ವಹಿಸಿದರು. ನಂತರ ವಿದ್ಯಾರ್ಥಿಗಳು ಮತ್ತು ಶಿಕ್ಷಕ ವೃಂದದವರು ಸಮೂಹ ಧ್ಯಾನದಲ್ಲಿ ಭಾಗವಹಿಸಿದರು.

ದಿನಾಂಕ 15ನೇ ಆಗಸ್ಟ್ 2016 ರ ಸೋಮವಾರದಂದು ಶ್ರೀ ಅರವಿಂದ ಸಂಕೀರ್ಣದ ವತಿಯಿಂದ ಶ್ರೀ ಅರವಿಂದರ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಶ್ರೀ ಅರವಿಂದ ಸಂಕೀರ್ಣದ ಧ್ಯಾನ ಮಂದಿರದಲ್ಲಿ ಬೆಳಿಗ್ಗೆ 10.15 ರಿಂದ 10.35 ರವರೆಗೆ ಸಾಮೂಹಿಕ ಧ್ಯಾನ, ನಂತರ ಸಂದೇಶ ಪತ್ರ ಹಾಗೂ ಪ್ರಸಾದವನ್ನು ವಿತರಿಸಲಾಯಿತು. ತತ್ಸಂಬಂಧ ಪ್ರೊ॥ ಟಿ. ರಾಮಕೃಷ್ಣ, ಬೆಂಗಳೂರು ಇವರಿಂದ "ದಿ ಒನ್ ಹು ವಾಜ್ ಬಾರ್ನ್ ಆನ್ ಆಗಸ್ಟ್ 15: ದಿ ಕ್ವೆಸ್ಟ್ ಫಾರ್ ವಿರಾಟ್ ಪುರುಷ" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಶ್ರೀ ಅರವಿಂದ ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು.

ದಿನಾಂಕ 20ನೇ ಆಗಸ್ಟ್ 2016 ರ ಶನಿವಾರದಂದು ಬೆಳಿಗ್ಗೆ 10.30 ರಿಂದ 12 ಗಂಟೆಯವರೆಗೆ ಡಾ॥ ಶ್ರುತಿ ಬಿಡ್‌ವಾಯಕರ್, ಅಸಿಸ್ಟೆಂಟ್ ಡೈರಕ್ಟರ್, ಶ್ರೀ ಅರವಿಂದೋ ಸೆಂಟರ್ ಫಾರ್ ಅಡ್‌ವಾನ್ಸ್‌ಡ್ ರಿಸರ್ಚ್ (SACAR) ಪುದುಚೇರಿ ಇವರು "ಅಂಡರ್‌ಸ್ಟಾಂಡಿಂಗ್ ಭಕ್ತಿ ಇನ್ ದಿ ಲೈಟ್ ಆಫ್ ಶ್ರೀ ಅರಬಿಂದೋ" ಈ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಇತರರು ಹಾಜರಿದ್ದರು.



*Pain is the hand of Nature sculpturing men*
*To greatness...*

- Sri Aurobindo

**RNI No. 22511/1971**
No. of Pages **56 + 4 (Cov. Page)**
KAR Reg No : RNP/KA/BGS/368/2015-2017
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.